ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 11 | ಸಂಚಿಕೆ 23 | ಪುಟ 16 | ಮೇ 29–ಜೂನ್ 4, 2017 | ರೂ. 10/-

web: www.janashakthi.co.in | e-mail : js_weekly@yahoo.com

ಪರೇಶ್ ರಾವಲ್

ಫೇಕ್ ನ್ಯೂಸ್‌ನಿಂದ ಮಾನಹೋಯ್ತು







ಮೋದಿ ವಿಫಲ 3 ವರ್ಷಗಳು



ಬಂಗಾಳ : ರೈತರ ಮೇಲೆ ಮಮತಾ ಪ್ರಹಾರ



ಕೇರಳ LDF ಸಫಲ 1 ವರ್ಷ

ಜಾತಿ ಗಣತಿ: ಏಕೀ ವಿರೋಧ?

ಸಿಪಿಐ(ಎಂ) ಪ್ರಚಾರಾಂದೋಲನ



ನಾಡು-ನುಡಿಯ ಪುನರ್ ನಿರೂಪಣೆ: ಸಹಯಾನ 2017

ರೈತ ಪ್ರತಿಭಟನಾಕಾರರ ಮೇಲೆ ಟಿಎಂಸಿ ಸರಕಾರದ ಅಮಾನುಷ ಪ್ರಹಾರ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಮೇ 22ರಂದು ಕೊಲ್ಕತಾದಲ್ಲಿ ಪಶ್ಚಿಮ ಬಂಗಾಲದ ರಾಜ್ಯ ಆಡಳಿತದ ಕೇಂದ್ರವಾದ ನಬನ್ನಾದಲ್ಲಿ ನೆರೆದಿದ್ದ ಶಾಂತಿಯುತ ಪ್ರತಿಭಟನಾಕಾರರೊಂದಿಗೆ ಟಿಎಂಸಿ ಸರಕಾರದ ಪೋಲೀಸರು ಅತ್ಯಂತ ಅಮಾನುಷವಾಗಿ ವರ್ತಿಸಿದ್ದಾರೆ. ಇದರಿಂದಾಗಿ 900ಕ್ಕೂ ಹೆಚ್ಚು ಪ್ರತಿಭಟನಾಕಾರರಿಗೆ ತೀವ್ರ ಗಾಯಗಳಾಗಿವೆ, ನೂರಕ್ಕೂ ಹೆಚ್ಚು ಮಂದಿ ಗಂಭೀರ ಸ್ಥಿತಿಯಲ್ಲಿದ್ದಾರೆ. ಮಾಧ್ಯಮ ಸಿಬ್ಬಂದಿಯನ್ನು ಕೂಡ ಅವರು ಬಿಟ್ಟಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ವರ್ತನೆಯನ್ನು ಬಲವಾಗಿ ಖಂಡಿಸಿದೆ.

ರಾಜ್ಯದ ಎಡಪಂಥೀಯ ರೈತ ಮತ್ತು ಕೃಷಿಕೂಲಿಕಾರರ ಸಂಘಟನೆಗಳು ತಮ್ಮ 18 ಅಂಶಗಳ ಬೇಡಿಕೆಗಳ ಮೇಲೆ ಈ ಪ್ರತಿಭಟನಾ ಕಾರ್ಯಕ್ರಮಕ್ಕೆ ಕರೆ ನೀಡಿದ್ದವು. ಪಶ್ಚಿಮ ಬಂಗಾಲದ ಗ್ರಾಮೀಣ ಪ್ರದೇಶಗಳಲ್ಲಿ ಜನಗಳ ಮೇಲೆ ಹೇರಿರುವ ಸಂಕಟಗಳನ್ನು ಬಿಂಬಿಸುವ, ಇವುಗಳಿಂದ ಪರಿಹಾರ ಒದಗಿಸಲು ರಾಜ್ಯ ಸರಕಾರ ಜನಪರ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸುವ ಬೇಡಿಕೆಗಳಿವು. ಈ ಬೇಡಿಕೆಗಳ ಮೇಲೆ ರೈತರು ಮತ್ತು ಕೃಷಿಕೂಲಿಕಾರರನ್ನು ಅಣಿನೆರೆಸಲಾರಂಭಿಸಿದಾಗ ರಾಜ್ಯದ ಇತರ ಎಡಪಂಥೀಯ ಸಾಮೂಹಿಕ ಸಂಘಟನೆಗಳು ಮತ್ತು ಎಡರಂಗ ಈ ಕಾರ್ಯಾಚರಣೆಯೊಂದಿಗೆ ಸೌಹಾರ್ದ ವ್ಯಕ್ತಪಡಿಸಿದವು ಮತ್ತು ಈ ಪ್ರತಿಭಟನೆಯಲ್ಲಿ ಸೇರಿಕೊಂಡವು.

ಈ ಪ್ರತಿಭಟನೆ ಶಾಂತಿಯುತವಾಗಿತ್ತು. ಮುಖಂಡರು ಮನವಿಪತ್ರವನ್ನು ಸಲ್ಲಿಸಲು ಮುಂದಾದಾಗ ಅದಕ್ಕೆ ಅವಕಾಶ ನೀಡಲಿಲ್ಲ. ಬದಲಿಗೆ ಅಲ್ಲಿ ನೆರೆದಿದ್ದ ಹತ್ತಾರು ಸಾವಿರ ಜನಗಳನ್ನು ಸುತ್ತುವರೆಯಲಾಯಿತು, ಅವರ ಮೇಲೆ ಜಲಫಿರಂಗಿಗಳನ್ನು ಸುರಿಸಲಾಯಿತು, ಲಾಠೀ ಪ್ರಹಾರ ಮಾಡಲಾಯಿತು. ಪುರುಷ ಪೋಲಿಸ್ ಸಿಬ್ಬಂದಿ ಮಹಿಳಾ ಪ್ರತಿಭಟನಾಕಾರರ ಮೇಲೆ ಹಲ್ಲೆಗಳನ್ನು ನಡೆಸಿದರು.

ಇದು ತೃಣಮೂಲ ಕಾಂಗ್ರೆಸಿನ ರಾಜ್ಯ ಸರಕಾರ ಮತ್ತು ಪಶ್ಚಿಮ ಬಂಗಾಲದ ಜನತೆಯ ಬದುಕಿನ ಮೇಲೆ ಹೆಚ್ಚೆಚ್ಚು ಸಂಕಟಗಳನ್ನು ಹೇರುತ್ತಿರುವ ಪ್ರಶ್ನೆಗಳ ಬಗ್ಗೆ ಆಸಕ್ತಿ ವಹಿಸದ ಮುಖ್ಯಮಂತ್ರಿಗಳ ಪ್ರಜಾಪ್ರಭುತ್ವ–ವಿರೋಧಿ ನಿಲುವನ್ನು ಪ್ರದರ್ಶಿಸಿದೆ ಎಂದು ಸಿಪಿಐ(ಎಂ) ಬಲವಾಗಿ ಖಂಡಿಸಿದೆ. ಇಂತಹ ಅಮಾನುಷ ವರ್ತನೆಗಳಿಂದ ಪಶ್ಚಿಮ ಬಂಗಾಲದಲ್ಲಿ ಪ್ರತಿಭಟನೆಗಳನ್ನು ದಮನ ಮಾಡಬಹುದು ಎಂದು ರಾಜ್ಯ ಸರಕಾರ ನಂಬಿದ್ದರೆ ಇದು ಸಂಪೂರ್ಣವಾಗಿ ಅದರ ಭ್ರಮೆ ಎಂದಷ್ಟೇ ಹೇಳಬೇಕಾಗುತ್ತದೆ. ಪಶ್ಚಿಮ ಬಂಗಾಲದ ಜನತೆ ಪ್ರತಿಭಟಿಸಿ ಎದ್ದು ನಿಲ್ಲುವುದನ್ನು ಮುಂದುವರೆಸುತ್ತಾರೆ, ತಕ್ಷಣವೇ ರಾಜ್ಯದಾದ್ಯಂತ ಪೋಲಿಸ್ ದಮನದ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸುತ್ತಾರೆ ಎಂದು ಅದು ಎಚ್ಚರಿಕೆ ಕೊಟ್ಟಿದೆ.

ಮಹಿಳಾ ಪ್ರತಿಭಟನಾಕಾರರೊಂದಿಗೆ ದುರ್ವರ್ತನೆ: ತಕ್ಷಣ ನ್ಯಾಯಾಂಗ ತನಿಖೆಗೆ ಎಐಡಿಡಬ್ಲ್ಯುಎ ಆಗ್ರಹ

ಮೇ 22ರಂದು 'ನಬನ್ನಾ ಅಭಿಜಾನ್' ಪ್ರತಿಭಟನಾಕಾರರ ಮೇಲೆ ಅಮಾನುಷ ಪೊಲಿಸ್ ದಮನವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ. ಬೆಳೆಗಳಿಗೆ ನ್ಯಾಯಯುತ ಬೆಲೆಗಳು, ಸಣಬು ಮತ್ತು ಗೋದಿಗೆ ಕನಿಷ್ಟ ಬೆಂಬಲ ಬೆಲೆ, ಮನರೇಗದಲ್ಲಿ ಹೆಚ್ಚಿನ ಉದ್ಯೋಗಗಳು, ಬಡವರಿಗೆ ಆಹಾರ ಭದ್ರತೆ, ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಪರಿಹಾರ, ಮಹಿಳೆಯರು ಮತ್ತು ಮಕ್ಕಳ ಕಳ್ಳಸಾಗಣೆಗಳ ವಿರುದ್ಧ ಕಾರ್ಯಾಚರಣೆ ಮತ್ತು ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳಿಗೆ ತಡೆ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟಿದ್ದ ಈ ಕಾರ್ಯಕ್ರಮದಲ್ಲಿ ಎಐಡಿಡಬ್ಲ್ಯುಎ ಕೂಡ ಭಾಗವಹಿಸಿದೆ.

ಅನಗತ್ಯವಾಗಿ ಪೋಲೀಸರು ಅಮಾನುಷ ಲಾಠೀ ಪ್ರಹಾರ, ಮೆಣಸಿನ ಪುಡಿ ಮಿಶ್ರಿತ ಅಶ್ರುವಾಯು ಮತ್ತು ಜಲಫಿರಂಗಿಗಳನ್ನು ಬಳಸಿ ಅಭೂತಪೂರ್ವ ದಮನ ಚಕ್ರ ನಡೆಸಿದರು. ಒಂದು ಸಾವಿರದಷ್ಟು ಮಂದಿ ಗಾಯಗೊಂಡರು, ಹಲವರು ಕಣ್ಣು ಕಳಕೊಂಡರು. 150ಕ್ಕೂ ಹೆಚ್ಚು ಮಹಿಳೆಯರು ಈ ಅಮಾನುಷ ದಾಳಿಯಲ್ಲಿ ಗಾಯಗೊಂಡಿದ್ದಾರೆ. ಪುರುಷ ಪೊಲೀಸರು ಮಹಿಳೆಯರ ಜಡೆ ಎಳೆದಾಡಿ ದುರ್ವರ್ತನೆ ನಡೆಸಿದ್ದಾರೆ. ಹಿರಿ ವಯಸ್ಸಿನ ಮಹಿಳೆಯರನ್ನೂ ಬಿಡಲಿಲ್ಲ ಎಂದು ಎಐಡಿಡಬ್ಲ್ಯುಎ ಹೇಳಿದೆ. ಮೆಟ್ರೋ ನಿಲ್ದಾಣಗಳಿಂದ, ಶೌಚಾಲಯಗಳಿಂದ ಎಳೆದು ಹೊಡೆದಿದ್ದಾರೆ, ಹೊಲಸು ಭಾಷೆ ಬಳಸಿದ್ದಾರೆ. ಒಬ್ಬಳೇ ಮಹಿಳೆಯನ್ನು ಆರು ಪುರುಷ ಪೋಲೀಸರು ಲಾಠಿಗಳಿಂದ ಹೊಡೆಯುವ ದೃಶ್ಯ ವಿಡಿಯೋಗಳಲ್ಲಿ ಕಾಣಬಂದಿದೆ. ಎಐಡಿಡಬ್ಲ್ಯುಎ ರಾಜ್ಯ ಮುಖಂಡರು ಮತ್ತು ಕೇಂದ್ರ ಕಾರ್ಯಕಾರಿ ಮಂಡಳಿ ಸದಸ್ಯರು ಸೇರಿದಂತೆ ಸುಮಾರು 80 ಮಹಿಳೆಯರನ್ನು ಬಂಧಿಸಲಾಗಿದೆ.

ಈ ಕಾರಣರಹಿತ ಅಮಾನುಷ ಪೋಲಿಸ್ ದಬ್ಬಾಳಿಕೆ ಮತ್ತು ಮಹಿಳಾ ಪ್ರತಿಭಟನಾಕಾರರೊಂದಿಗೆ ದುರ್ವರ್ತನೆಯ ಬಗ್ಗೆ ತಕ್ಷಣವೇ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಆಗ್ರಹಿಸಿರುವ ಎಐಡಿಡಬ್ಲ್ಯುಎ ಪಶ್ಚಿಮ ಬಂಗಾಲದ ಈ ಸರ್ವಾಧಿಕಾರಶಾಹಿ ಟಿಎಂಸಿ ಸರಕಾರದ ಅಮಾನುಷ ಕ್ರಮದ ವಿರುದ್ಧ ದೇಶಾದ್ಯಂತ ಪ್ರತಿಭಟನೆ ನಡೆಸುವುದಾಗಿ ಹೇಳಿದೆ.

ಪತ್ರಕರ್ತರ ಸಂಘದ ಖಂಡನೆ

ಈ ಕಾರ್ಯಕ್ರಮವನ್ನು ವರದಿ ಮಾಡಲು ಹೋಗಿರುವ ಪತ್ರಕರ್ತರ ಮೇಲೂ ಹಲ್ಲೆ ನಡೆಸಿರುವುದನ್ನು ದಿಲ್ಲಿ ಯೂನಿಯನ್ ಆಫ್ ಜರ್ನಲಿಸ್ಟ್ಸ್(ಡಿಯುಜೆ) ಬಲವಾಗಿ ಖಂಡಿಸದೆ. ಹಲವು ಪತ್ರಕರ್ತರು ಗಯಗೊಂಡಿದ್ದಾರೆ, ಅವರ ಉಪಕರಣಗಳನ್ನು ಹಾಳುಗೆಡವಲಾಗಿದೆ ಎಂದಿರುವ ಡಿಯುಜೆ ತಪ್ಪಿತಸ್ಥ ಪೋಲೀಸ್ ಸಿಬ್ಬಂದಿಯನ್ನು ಶಿಕ್ಷಿಸಬೇಕು, ಪತ್ರಕರ್ತರ ಕ್ಯಾಮರಾಗಳಿಗಾದ ಹಾನಿಗೆ ಪರಿಹಾರ ಕೊಡಬೇಕು ಎಂದು ಆಗ್ರಹಿಸಿದೆ. ಕರ್ತವ್ಯದ ಮೇಲಿರುವ ಪತ್ರಕರ್ತರಿಗೆ ರಿಸ್ಕ್ ಇಂಶೂರೆನ್ಸ್ ರಕ್ಷಣೆ ಇರಬೇಕೆಂಬ ತನ್ನ ಬಹುದಿನಗಳ ಬೇಡಿಕೆಯನ್ನು ಈ ಸಂದರ್ಭದಲ್ಲಿ ಅದು ಪುನರುಚ್ಚರಿಸಿದೆ.

ಹೆರಿಗೆ ಸೌಲಭ್ಯವನ್ನು ಕಡಿತ ಕ್ರೂರ ಇಬ್ಬಂದಿತನ– ಎಐಡಿಡಬ್ಲ್ಯುಎ ಖಂಡನೆ, ಮಿತಿ ಹೇರದೆ ಸಾರ್ವತ್ರಿಕಗೊಳಿಸಲು ಆಗ್ರಹ

ಡಿಸೆಂಬರ್ 31, 2016ರಂದು ಪ್ರಧಾನ ಮಂತ್ರಿಗಳು ಹೆರಿಗೆ ಸೌಲಭ್ಯ ಕಾರ್ಯಕ್ರಮ(ಎಂಬಿಪಿ)ವನ್ನು ವಿಸ್ತರಿಸಲಾಗುವುದು ಎಂದು ಬಹಳ ಆಡಂಬರದಿಂದ ಪ್ರಕಟಿಸಿದ್ದರು. ಆದರೆ ಈಗ ಕೇಂದ್ರ ಸಂಪುಟ ಈ ಹೆರಿಗೆ ಸೌಲಭ್ಯ ಕಾರ್ಯಕ್ರಮವನ್ನು ಮೊದಲ ಮಗುವಿಗೆ ಮಾತ್ರ ಸೀಮಿತಗೊಳಿಸಲು ನಿರ್ಧರಿಸಿದೆ. "ಗರ್ಭಿಣಿ ಮತ್ತು ಹಾಲುಣಿಸುವ ಮಹಿಳೆಯರಿಗೆ ಮೊದಲ ಜೀವಂತ ಮಗುವಿನ ಜನ್ಮಕ್ಕೆ ರೂ.5000/- ಸೌಲಭ್ಯವನ್ನು ಮೂರು ಕಂತುಗಳಲ್ಲಿ ಕೊಡಲು ನಿರ್ಧರಿಸಲಾಗಿದೆ" ಎಂದು ಸಂಪುಟದ ಪತ್ರಿಕಾ ಹೇಳಿಕೆ ತಿಳಿಸಿದೆ. ಈ ರೀತಿ ಸೀಮಿತಗೊಳಿಸಿರುವುದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ.

ವಾಸ್ತವವಾಗಿ ಈ ಕಾರ್ಯಕ್ರಮ 2010ರಿಂದಲೇ ದೇಶದ 56 ಜಿಲ್ಲೆಗಳಲ್ಲಿ "ಇಂದಿರಾಗಾಂಧಿ ಮಾತೃತ್ವ ಸಹಯೋಗ ಯೋಜನಾ' ಎಂಬ ಹೆಸರಿನಲ್ಲಿ ಒಂದು ಪ್ರಾಯೋಗಿಕ ಯೋಜನೆಯಾಗಿ ನಡೆಯುತ್ತಿದೆ. ಅದರ ಗುರಿ ಹೆರಿಗೆಗಳು ಆಸ್ಪತ್ರೆಗಳಲ್ಲಿ ನಡೆಯುವಂತೆ ಮತ್ತು ತಾಯಂದಿರು ಹಾಗೂ ನವಜಾತ ಶಿಶುಗಳ ಉಳಿವು ಮತ್ತು ಒಳಿತನ್ನು ಪ್ರೋತ್ಸಾಹಿಸುವುದು. ಎಲ್ಲ ಗರ್ಭಿಣಿ ಮತ್ತು ಹಾಲುಣಿಸುವ ಮಹಿಳೆಯರಿಗೆ ಕನಿಷ್ಟ ರೂ.6000 ಹೆರಿಗೆ ಸೌಲಭ್ಯ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ(ಎನ್‌ಎಫ್‌ಎಸ್‌ಎ) ಈಗಾಗಲೇ ನೀಡಿರುವ ಕಾನೂನಾತ್ಮಕ ಹಕ್ಕು. ಈಗ ಕೇಂದ್ರ ಸಂಪುಟ ಈ ಅಲ್ಪ ಮೊತ್ತದಲ್ಲಿಯೂ 1000ರೂ. ಕಡಿತ ಮಾಡಿದೆ ಎಂಬ ಸಂಗತಿಯ ಬಗ್ಗೆ ಎಐಡಿಡಬ್ಲ್ಯುಎ ಖೇದ ವ್ಯಕ್ತಪಡಿಸಿದೆ.

ಅಲ್ಲದೆ ಸಂಪುಟ ಈಗ ಈ ಸೌಲಭ್ಯವನ್ನು ಮೊದಲ ಮಗುವಿಗೆ ಮಾತ್ರ ಸೀಮಿತಗೊಳಿಸಲು ನಿರ್ಧರಿಸಿದೆ. ಭಾರೀ ಗದ್ದಲದಿಂದ ಮಾಡಿದ ಘೋಷಣೆಯ ನಂತರ ಮೋದಿ ಸರಕಾರ 2017ರ ಬಜೆಟಿನಲ್ಲಿ ಇದಕ್ಕೆ ಒದಗಿಸಿದ್ದು ಕೇವಲ 2700 ಕೋಟಿ ರೂ. ಪ್ರತಿವರ್ಷ ದೇಶದಲ್ಲಿ [illegible] ಜನನ ಸಂಖ್ಯೆ ಸುಮಾರು 2.6 ಕೋಟಿ. ಅಂದರೆ ಈ ಮೊತ್ತ ಕೇವಲ 17% ಜನನಗಳಿಗೆ ಮಾತ್ರ ಸಾಲುವಂತದ್ದು. ಇದೀಗ ಸಮಾಜದ ಅತ್ಯಂತ ವಂಚಿತ ವಿಭಾಗಗಳಿಗೆಂದು ರೂಪಿಸಿರುವ ಸಾಮಾಜಿಕ ಕಲ್ಯಾಣ ಯೋಜನೆಗಳ ಬಗ್ಗೆ ಮೋದಿ ಸರಕಾರದ ಕ್ರೂರ ಇಬ್ಬಂದಿತನದ ಒಂದು ದೃಷ್ಟಾಂತ ಎಂದು ಎಐಡಿಡಬ್ಲ್ಯುಎ ಬಲವಾಗಿ ಟೀಕಿಸಿದೆ.

ಈ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಇದನ್ನು ಮೊದಲ ಜೀವಂತ ಜನನಗಳಿಗೆ ಮಾತ್ರವೇ ಸೀಮಿತಗೊಳಿಸಬಾರದು ಎಂದು ಎಐಡಿಡಬ್ಲ್ಯುಎ ಆಗಲೇ ಸ್ಪಷ್ಟವಾಗಿ ಹೇಳಿತ್ತು. ಈ ರೀತಿ ಸೀಮಿತಗೊಳಿಸುವುದರಿಂದ ಜನನ ದರವನ್ನು ಇಳಿಸಬಹುದು ಎಂಬ ಸರಕಾರದ ನಿರೀಕ್ಷೆ ಸರಿಯಲ್ಲ. ಇದರಿಂದಾಗಿ ಹೆಚ್ಚಿನ ವೈದ್ಯಕೀಯ ಮತ್ತು ಪೋಷಕಾಂಶದ ಅಗತ್ಯವಿರುವ ಮೂರನೇ ಮಗುವಿನ ತಾಯಂದಿರನ್ನು ಹೊರಗಿಡಲಾಗುತ್ತದೆಯಷ್ಟೇ.

ಜನನ ದರವನ್ನು ತಾವಾಗಿಯೇ ನಿಯಂತ್ರಿಸುವುದು ಸಾಧ್ಯವಾಗಬೇಕಾದರೆ ಅದನ್ನು ಒತ್ತಡದ ಕ್ರಮಗಳಿಂದ ಅಥವ ಸೌಲಭ್ಯಗಳಿಂದ ಹೊರಗಿಡುವ ಕ್ರಮಗಳಿಂದ ಮಾಡಲು ಸಾಧ್ಯವಿಲ್ಲ, ಬದಲಿಗೆ ಸುರಕ್ಷಿತ ಗರ್ಭನಿಯಂತ್ರಣ ಹಾಗೂ ಮಗು ಬದುಕುಳಿಯುವ ಖಾತ್ರಿಯನ್ನು ಲಭ್ಯಗೊಳಿಸುವ ಮೂಲಕ ಮಾತ್ರ ಸಾಧ್ಯ ಎಂಬುದು ಸಾಬೀತಾಗಿರುವ ಸಂಗತಿ. ಆದ್ದರಿಂದ ಇಂತಹ ಹೆರಿಗೆ ಸೌಲಭ್ಯ ಸ್ಕೀಮುಗಳಲ್ಲಿ ಮಕ್ಕಳ ಸಂಖ್ಯೆಯ ಮೇಲೆ ಯಾವುದೇ ಮಿತಿಯಿರಬಾರದು. ಎರಡು ಜೀವಂತ ಜನನಗಳ ಮಿತಿಯಿದ್ದಾಗಲೂ ಈ ಯೋಜನೆ ಜಾರಿಯಲ್ಲಿದ್ದ ರಾಜ್ಯಗಳಲ್ಲಿ ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳ ಮಹಿಳೆಯರಿಗೆ ಇದರಿಂದ ನೆರವು ದೊರೆತಿದೆ ಎಂಬ ಸಂಗತಿಯತ್ತವೂ ಎಐಡಿಡಬ್ಲ್ಯುಎ ಗಮನ ಸೆಳೆದಿದೆ.


ಆರು ಸಾವಿರ ರೂಪಾಯಿ ಒಂದು ಅಲ್ಪ ಮೊತ್ತ. ಆದರೆ ಬಹಳಷ್ಟು ಕುಟುಂಬಗಳಿಗೆ ಸುರಕ್ಷಿತ ಮತ್ತು ಆರೋಗ್ಯಕರ ಜನನಕ್ಕೆ ಇದನ್ನೂ ಹೊಂದಿಸಲು ಸಾಧ್ಯವಾಗದಿರುವುದು ನಮ್ಮ ದೇಶದಲ್ಲಿನ ಬಡತನ ಎಷ್ಟು ಆಳವಾಗಿದೆ ಎಂಬುದನ್ನು ತೋರಿಸುತ್ತದೆ. ಇಂತಹ ಸನ್ನಿವೇಶದಲ್ಲಿ, ಹೀಗೆ ಮಿತಿ ಹಾಕುವುದೆಂದರೆ ಒಬ್ಬ ಮಹಿಳೆಗೆ ತನ್ನದೇ ದೇಹದ ಮೇಲೆ ಯಾವುದೇ ರೀತಿಯ ಹತೋಟಿಯನ್ನು ಕೊಡದಿರುವ ಪರಿಸ್ಥಿತಿಯಿದ್ದರೂ ಮೊದಲಿನ ಜನನದ ನಂತರದ ಎಲ್ಲ ಗರ್ಭಧಾರಣೆಗಾಗಿ ಆಕೆಯನ್ನು ಶಿಕ್ಷಿಸಿದಂತಾಗುತ್ತದೆ, ಅತ್ಯಂತ ಹೆಚ್ಚು ಬೆಂಬಲ ಬೇಕಾದ ಮಹಿಳೆಯರನ್ನು ಇದು ಅಪಾಯದತ್ತ ತಳ್ಳುತ್ತದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಮೋದಿ ಸರಕಾರದ ಈ ಹೆರಿಗೆ ಸೌಲಭ್ಯ ಕಾರ್ಯಕ್ರಮವನ್ನು 'ಜನನಿ ಸುರಕ್ಷಾ ಯೋಜನೆ' (ಜೆಎಸ್‌ವೈ)ಯೊಂದಿಗೆ ವಿಲೀನ ಮಾಡಿ ಆಸ್ಪತ್ರೆಗಳಲ್ಲಿ ಹೆರಿಗೆಗಳಿಗೆ ಜೋಡಿಸಲಾಗಿದೆ. ಇತ್ತೀಚಿನ 'ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆ'ಯ ಪ್ರಾಕಾರ 21ಶೇ. ಹೆರಿಗೆಗಳು ಮನೆಗಳಲ್ಲೇ ಆಗುತ್ತಿವೆ. ಇವುಗಳಿಗೆ ಈ ಜೆಎಸ್‌ವೈ ಸೌಲಭ್ಯಗಳು ಸಿಗುವುದಿಲ್ಲ ಎಂದಿರುವ ಎಐಡಿಡಬ್ಲ್ಯುಎ ಕೇಂದ್ರ ಸಂಪುಟ ಮಂಜೂರು ಮಾಡಿರುವ ಇತ್ತೀಚಿನ ಮೊದಲ ಜನನದ ಮಿತಿಯನ್ನು ಬಲವಾಗಿ ಪ್ರತಿಭಟಿಸಿದೆ ಮತ್ತು ಯಾವುದೇ ಮಿತಿ ಹಾಕದೆ ಇದನ್ನು ಸಾರ್ವತ್ರಿಕಗೊಳಿಸಬೇಕು, ಈ ಮೂಲಕ ಮಹಿಳೆಯನ್ನೇ ಹೊಣೆಯಾಗಿಸದೆ, ತಾಯಿ ಮತ್ತು ಮಗುವಿನ ಸುರಕ್ಷಿತತೆಯ ಭರವಸೆ ಲಭ್ಯವಾಗುವಂತಾಗಬೇಕು ಎಂದು ಆಗ್ರಹಿಸಿದೆ.

ಮಾತೆಂದರೆ ಇದು

ಬ್ಯಾಂಕ ಲೂಟಿ ಮಾಡುವುದು
ಸಣ್ಣ ದರೋಡೆಕೋರರ ಕೆಲಸ.
ನುರಿತ ದರೋಡೆಕೋರರು
ಬ್ಯಾಂಕುಗಳನ್ನು ಸ್ಥಾಪಿಸುತ್ತಾರೆ.

– ಬರ್ಟೋಲ್ಟ್ ಬ್ರೆಕ್ಟ್



ಸಹರಾನ್ಪುರದಲ್ಲಿ ದಲಿತರ ಮೇಲೆ ಅತ್ಯಾಚಾರ ನಿಲ್ಲಬೇಕು,ಉತ್ತರಪ್ರದೇಶ ಸರಕಾರ ಪಕ್ಷಪಾತದ ನಿಲುವನ್ನು ಬಿಡಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಸಹರಾನ್ಪುರದಲ್ಲಿ ಮೇ 23 ರಂದು ದಲಿತರ ಮೇಲೆ ಮತ್ತೆ ಮಾರಣಾಂತಿಕ ದಾಳಿಗಳು ನಡೆದಿವೆ. ಇದರಲ್ಲಿ ಒಬ್ಬ ದಲಿತ ಯುವಕನ ಕೊಲೆಯಾಗಿದೆ, ಹಲವರಿಗೆ ಗಂಭೀರ ಗಾಯಗಳಾಗಿವೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಹಿಂದೂ ಯುವ ವಾಹಿನಿಯವರೆಂದು ಪ್ರದರ್ಶಿಸಿಕೊಂಡ ಕೆಲವು ಮೇಲ್ಜಾತಿಯ ಮಂದಿಗಳು ಬಿಎಸ್‌ಪಿ ಮುಖಂಡರಾದ ಮಾಯಾವತಿಯವರ ಸಭೆಯಲ್ಲಿ ಭಾಗವಹಿಸಿ ಹಿಂದಿರುಗುತ್ತಿದ್ದವರ ಮೇಲೆ ನಡೆಸಿದ ದಾಳಿಗಳಲ್ಲಿ ಇದು ಸಂಭವಿಸಿದೆ.

ಈ ಮೊದಲು ಸಮೀಪದ ಶಬ್ಬಿರ್‌ಪುರದಲ್ಲಿ ದಲಿತರ ಮೇಲೆ ನಡೆದ ದಾಳಿಗಳಲ್ಲಿ ಮನೆಗಳನ್ನು, ಆಸ್ತಿಗಳನ್ನು ಸುಟ್ಟು ಹಾಕಲಾಗಿತ್ತು, ಹಲವರು ಗಾಯಗೊಂಡಿದ್ದರು.

ಪರಿಸ್ಥಿತಿ ಸತತವಾಗಿ ಹದಗೆಡುತ್ತಿರುವುದು ಹಿಂಸಾಚಾರ ನಡೆಸುತ್ತಿರುವ ಮೇಲ್ಜಾತಿಗಳವರಿಗೆ ಉತ್ತರಪ್ರದೇಶದ ರಾಜ್ಯ ಸರಕಾರದಿಂದ ಸಿಗುತ್ತಿರುವ ಬೆಂಬಲ ಮತ್ತು ಅವರ ಮೇಲೆ ಕ್ರಮಕೈಗೊಳ್ಳಲು ಆಡಳಿತದ ಇಚ್ಛಾಶಕ್ತಿಯ ಕೊರತೆಯ ಫಲಿತಾಂಶ ಎಂದಿರುವ ಸಿಪಿಐ(ಎಂ), ದಲಿತರ ಮೇಲೆ ಅತ್ಯಾಚಾರದಲ್ಲಿ ತೊಡಗಿರುವ ಎಲ್ಲರ ಮೇಲೆ ದೃಢ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ. ಆಡಳಿತ ದಾಳಿಗೊಳಗಾಗುವ ಜನಗಳಿಗೆ ಪೂರ್ಣ ರಕ್ಷಣೆ ಒದಗಿಸಬೇಕು, ನಷ್ಟ ಅನುಭವಿಸಿದವರಿಗೆ ಸಾಕಷ್ಟು ಪರಿಹಾರ ನೀಡಬೇಕು ಮತ್ತು ದಲಿತರು ಮತ್ತು ಅವರ ಮುಖಂಡರ ಮೇಲೆ ಹಾಕಿರುವ ಸುಳ್ಳು ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು.

ಉತ್ತರಪ್ರದೇಶ ಸರಕಾರ ತನ್ನ ಪಕ್ಷಪಾತದ ನಿಲುವನ್ನು ಬಿಡಬೇಕು, ಮತ್ತು ಸಹರಾನ್ಪುರ ಜಿಲ್ಲೆಯಲ್ಲಿ ಕಾನೂನಿನ ಆಳ್ವಿಕೆ ನೆಲೆಸುವಂತೆ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಬಿಜೆಪಿಯ ವಕ್ರ ರಾಜಕೀಯ ಬಯಲು ಮಾಡಬೇಕು

ಸಂಪಾದಕೀಯ

ಆಳುತ್ತಿರುವ ಸರಕಾರದ ವೈಫಲ್ಯಗಳನ್ನು ಹುಳುಕುಗಳನ್ನು ಎತ್ತಿ ಜನರ ಗಮನ ಸೆಳೆಯುವುದು, ಜನರ ತುರ್ತಿನ ಸಮಸ್ಯೆಗಳನ್ನು ತೆಗೆದುಕೊಂಡು ಸರಕಾರದ ಗಮನ ಸೆಳೆಯುವುದು ವಿರೋಧ ಪಕ್ಷದ ಕರ್ತವ್ಯ. ಆದರೆ ಈ ರಾಜಕೀಯ ಮಾಡುವುದು ಬಿಟ್ಟು, ಬಿಜೆಪಿ ರಾಜ್ಯದಲ್ಲಿ ಜನರ ತುರ್ತಿನ ಸಮಸ್ಯೆಗಳಿಂದ ಜನರ ಗಮನ ಬೇರೆಡೆ ಸೆಳೆಯುವ ವಕ್ರ ರಾಜಕೀಯ ಮಾಡುತ್ತಾ ಬಂದಿದೆ. ಕೇಂದ್ರದಲ್ಲಿ ಬಿಜೆಪಿ ಸರಕಾರ ಬಂದ ಮೇಲಂತೂ ಈ ವಕ್ರತೆ ಹೆಚ್ಚಾಗಿದೆ. ಏಕೆಂದರೆ ಯಾವುದೇ ಜನರ ಸಮಸ್ಯೆ ತೆಗೆದುಕೊಂಡರೂ ಅದನ್ನು ಸೃಷ್ಟಿಸುವುದರಲ್ಲಿ ಮತ್ತು ಪರಿಹಾರ ಒದಗಿಸುವುದರಲ್ಲಿ ಕೇಂದ್ರ ಮತ್ತು ರಾಜ್ಯ ಎರಡೂ ಸರಕಾರಗಳ ಪಾತ್ರ ಇರುತ್ತದೆ. ಕೇಂದ್ರದ ಬಿಜೆಪಿ ಸರಕಾರದ ಸರ್ವತೋಮುಖ ವೈಫಲ್ಯ ಮತ್ತು ನಿಜವಾದ ಬದಲಿ ನೀತಿಗಳ ಅಭಾವದಿಂದ ರಾಜ್ಯ ಬಿಜೆಪಿಯ ಫಜೀತಿ ಹೆಚ್ಚಿ, ಮತ್ತು ವಕ್ರ ರಾಜಕೀಯ ಇನ್ನಷ್ಟು ತೀವ್ರವಾಗಿದೆ.

ಹಿಂದೆ ಐ.ಎ.ಎಸ್. ಅಧಿಕಾರಿ ಡಿ.ಕೆ..ರವಿ ಅವರ ಸಾವು ತೆಗೆದುಕೊಂಡು ರಾಜ್ಯ ಸರಕಾರ ಮತ್ತು ಮುಖ್ಯಮಂತ್ರಿಗಳ ಮೇಲೆ ಯುದ್ಧ ಹೂಡಿತ್ತು. ಸಿಬಿಐ ತನಿಖೆ ನಡೆದು ಡಿ.ಕೆ..ರವಿ ಅವರ ಸಾವು ವೈಯಕ್ತಿಕ ಕಾರಣಗಳಿಗಾಗಿ ಆದ ಆತ್ಮಹತ್ಯೆ ಎಂದು ರುಜುವಾತಾದ ನಂತರವೂ ಅದರ ವಕ್ರ ರಾಜಕೀಯ ನಿಂತಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ಕೇಂದ್ರದಲ್ಲಿ ಬಿಜೆಪಿ ಸರಕಾರ ಬಂದ ನಂತರ, ಬಿಜೆಪಿಯ ಅಧಿಕೃತ ವಾಹಿನಿಯಂತೆ ವರ್ತಿಸುತ್ತಿರುವ ಟಿವಿ ವಾಹಿನಿಗಳು. ಬಿಜೆಪಿಯ ವಕ್ರ ರಾಜಕೀಯವನ್ನು ಅವು ಬಯಲು ಮಾಡದಿರುವುದು ಮುಖ್ಯ ಕಾರಣ. ಈ ವಾರ ಬಿಜೆಪಿ ಮತ್ತು ಟಿವಿ ವಾಹಿನಿಗಳ ಜಂಟಿ ಕಾರ್ಯಾಚರಣೆಯ ಇನ್ನೊಂದು ನಕಲಿ ‘ಹಗರಣ’ ಸಿಐಡಿ ತನಿಖೆ ನಂತರ ಬಯಲಾಗಿದೆ.

ಕೆಲವು ತಿಂಗಳುಗಳ ಹಿಂದೆ ರಾಜ್ಯ ಮತ್ತು ಸರಕಾರವನ್ನು ‘ನಡುಗಿಸಿದ್ದ’ “ಮೇಟಿ ಲೈಂಗಿಕ ಹಗರಣ”ದ ತನಿಖೆ ನಡೆಸಿದ ಸಿಐಡಿ, ಕಾಂಗ್ರೆಸ್ ಶಾಸಕ ಎಚ್.ವೈ.ಮೇಟಿ ಅವರನ್ನು “ದೋಷಮುಕ್ತ”ಗೊಳಿಸಿದೆ. ಅದು ತನ್ನ ವರದಿಯಲ್ಲಿ “ಲೈಂಗಿಕ ಹಗರಣದ ಸಿ.ಡಿ ಅಸಲಿ ಸಿ.ಡಿಯಲ್ಲ. ತಮ್ಮ ಜಿಲ್ಲೆಯ ರಾಜಕೀಯ ವೈರಿಗಳು ರೂಪಿಸಿದ ಷಡ್ಯಂತ್ರಕ್ಕೆ ಅವರು ಬಲಿಯಾಗಿದ್ದಾರೆ. ಇಡೀ ಪ್ರಕರಣದಲ್ಲಿ ಮೇಟಿಯೇ ನಿಜವಾದ ಸಂತ್ರಸ್ತ” ಎಂದು ಹೇಳಿದೆ. “ಮೇಟಿ ಅವರು ವಿಜಯಲಕ್ಷ್ಮಿ ಸರೂರ ಎಂಬ ಮಹಿಳೆ ಜತೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವ ದೃಶ್ಯವೆಂದು ಕೆಲ ಮಾಧ್ಯಮಗಳು 2016ರ ಫೆ.14ರಿಂದ ನಿರಂತರವಾಗಿ ವಿಡಿಯೊ ತುಣುಕೊಂದನ್ನು ಪ್ರಸಾರ ಮಾಡಿದವು. ಅದರ ಸತ್ಯಾಸತ್ಯತೆ ತಿಳಿಯಲು ತನಿಖೆ ಪ್ರಾರಂಭಿಸಿದೆವು. ಆದರೆ, ತಾವು ಪ್ರಸಾರ ಮಾಡಿದ ವಿಡಿಯೊ ಹಾಗೂ ಸುದ್ದಿ ವಿವರ ನೀಡದೆ ಮಾಧ್ಯಮಗಳು ತನಿಖೆಗೆ ಅಸಹಕಾರ ನೀಡಿದವು” ಎಂದು ಸಿಐಡಿ ವರದಿಯಲ್ಲಿ ಹೇಳಿದೆ. “ಮೇಟಿ ವಿರುದ್ಧ ನಡೆದ ಪಿತೂರಿಯಲ್ಲಿ ಬಿಜೆಪಿ ಮುಖಂಡ ಮುರುಗೇಶ್ ನಿರಾಣಿ ಪಾತ್ರ ಹೆಚ್ಚಿದೆ. ಅವರ ಜೊತೆ ಸ್ಥಳೀಯ ಬಿಜೆಪಿ ಮುಖಂಡರಾದ ಅಶೋಕ್ ಲಾಗಲೋಟಿ, ಸಿದ್ದಲಿಂಗ ಅಬಲಗಟ್ಟಿ, ಮಾರುತಿ ಮಿರಾಜ್ಕರ್ ಹಾಗೂ ಮೇಟಿ ಅವರ ಹಿಂದಿನ ಅಂಗರಕ್ಷಕ ಸುಭಾಷ್ ಕೈಜೋಡಿಸಿದ್ದಾರೆ. ಸುಲಭವಾಗಿ ಹಣ ಸಂಪಾದಿಸಲು ಸುಭಾಷ್, ಅಶೋಕ್, ಮಾರುತಿ ಹಾಗೂ ಸಿದ್ದಲಿಂಗ ಕೃತ್ಯಕ್ಕೆ ಕೈಜೋಡಿಸಿರುವುದು ಸ್ಪಷ್ಟವಾಗಿದೆ”” ಎಂದೂ ವರದಿಯಲ್ಲಿ ಹೇಳಲಾಗಿದೆ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

‘ಸುಭಾಷ್ ಹಾಗೂ ಇತರರು ವಿಜಯಲಕ್ಷ್ಮಿ ಅವರಿಗೆ ಜೀವ ಬೆದರಿಕೆ ಹಾಕಿದ್ದ ಸಂಬಂಧ ಬಾಗಲಕೋಟೆಯ ನವನಗರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ತನಿಖೆ ಅಂತಿಮ ಹಂತದಲ್ಲಿದೆ. ಮೇಟಿ ವಿರುದ್ಧ ನಡೆದ ಪಿತೂರಿಯ ಹಿಂದಿನ ಸಂಪೂರ್ಣ ರಹಸ್ಯ ಆ ಪ್ರಕರಣದಲ್ಲಿ ಹೊರಬೀಳಲಿದೆ’ ಎಂದು ಅಧಿಕಾರಿಗಳು ಹೇಳಿದರು. ಮೇಟಿ ರಾಜಿನಾಮೆ ಕೊಟ್ಟು ಅವರ ವಿರುದ್ಧ ತನಿಖೆ ಆರಂಭವಾಗುತ್ತಿದ್ದಂತೆ ಇನ್ನೂ 4–5 ಸಚಿವರ ‘ಹಗರಣ’ಗಳು ತಮ್ಮ ಬಳಿ ಇದೆ ಎಂದು ಸ್ವತಃ ಯೆಡಿಯೂರಪ್ಪನವರೇ ಘೋಷಿಸಿದ್ದರು. ಈಗ ಮೇಟಿ ಪ್ರಕರಣ ಬಯಲಾದ ಮೇಲೆ ಅವೂ ಇಂತಹ ನಕಲಿ ಪ್ರಕರಣಗಳೇ ಎಂದು ಅವರೇ ಸ್ಪಷ್ಟೀಕರಿಸಬೇಕು. ತಮ್ಮ ವಕ್ರ ರಾಜಕಾರಣ ತಿದ್ದಿಕೊಳ್ಳುವ ಬದಲು, ಒಂದು ಕಡೆ ಅವರು ಮಳೆಯಲ್ಲಿ ಬರ ಸಮೀಕ್ಷೆಗೆ ಹೊರಟಿದ್ದಾರೆ. ಈ ಸಮೀಕ್ಷೆಯಲ್ಲಿ ದಲಿತರ ಮನೆಯಲ್ಲಿ ತಂಗಿ ಹೊಟೆಲಿಂದ ತಿಂಡಿ ತರಿಸಿಕೊಂಡು ತಮ್ಮ ಜಾತೀಯತೆ ಮೆರೆದಿದ್ದಾರೆ, ನಗೆಪಾಟಲೂ ಆಗಿದ್ದಾರೆ. ಮಾತ್ರವಲ್ಲ, ಇನ್ನೊಂದು ಐ.ಎ.ಎಸ್. ಅಧಿಕಾರಿಯ ನಿಗೂಢ ಸಾವಿನ ಮೇಲೆ ರಾಜ್ಯ ಸರಕಾರದ ವಿರುದ್ಧ ರಾಜಕೀಯ ಮಾಡಲು ತುದಿಗಾಲಲ್ಲಿ ನಿಂತಿದ್ದಾರೆ. ಆ ನಿಗೂಢ ಸಾವು ಬಿಜೆಪಿ ಆಡಳಿತದ ಉತ್ತರ ಪ್ರದೇಶದಲ್ಲಿ ಆಗಿದ್ದು, ಸಿಬಿಐ ಗೆ ತನಿಖೆ ವಹಿಸಲಾಗಿದ್ದು, ಇನ್ನೂ ಯಾವುದೇ ಪ್ರಾಥಮಿಕ ತನಿಖೆ ಸಹ ಆರಂಭಿಸುವ ಮೊದಲೇ ಬಿಜೆಪಿ ಈ ಬಗ್ಗೆ ರಾಜಕೀಯ ಮಾಡಲು ಹೊರಟಿದೆ.

ಬಿಜೆಪಿಯ ಈ ವಕ್ರ ರಾಜಕೀಯ ಬಯಲು ಮಾಡಲು ಕಾಂಗ್ರೆಸ್ ಮತ್ತು ಜೆಡಿ(ಎಸ್) ಗಳು ಅಸಮರ್ಥವಾಗಿವೆ. ಮಾತ್ರವಲ್ಲ ಅವುಗಳಿಗೂ ಬೇಕಾಗಿರುವುದು ಇಂತಹ ಜನರ ಗಮನ ಬೇರೆಡೆಗೆ ಸೆಳೆಯುವ ರಾಜಕೀಯವೇ. ಕೇಂದ್ರದಲ್ಲಿ ಬಿಜೆಪಿಯ 3 ವರ್ಷಗಳ ಮತ್ತು ರಾಜ್ಯದಲ್ಲಿ 4 ವರ್ಷಗಳ ದುರಾಡಳಿತದ ಜನ–ವಿರೋಧಿ ನೀತಿಗಳನ್ನು ಬಯಲಿಗೆಳೆಯಬೇಕಾಗಿದೆ.

ಫಲ್ಗುಣಿ ನದಿ ಮಾಲಿನ್ಯದ ವಿರುದ್ಧ ಪ್ರತಿಭಟನೆ

ಮಂಗಳೂರು ನಗರದ ಉತ್ತರ ಭಾಗದಲ್ಲಿ ಫಲ್ಗುಣಿ ನದಿ ಪಶ್ಚಿಮಾಭಿಮುಖವಾಗಿ ಹರಿದು ಬಂದು ನೇತ್ರಾವತಿ ನದಿಯನ್ನು ಸೇರುತ್ತಿದೆ. ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆ ಸಂಬಂಧ ಪಲ್ಗುಣಿ ನದಿಗೆ ಮಳವೂರು ಎಂಬಲ್ಲಿ ಅಣೆಕಟ್ಟು ಕಟ್ಟಲಾಗಿದೆ. ಮಂಗಳೂರು ನಗರದಿಂದಲೂ ಬೇರೆ ಪ್ರದೇಶದಿಂದಲೂ ತ್ಯಾಜ್ಯ ವಸ್ತುಗಳನ್ನು ಪಲ್ಗುಣಿ ನದಿಗೆ ತೇಲಿ ಬಿಡುತ್ತಿರುವುದರ ಫಲವಾಗಿ ಮಳವೂರು ಅಣೆಕಟ್ಟಿನಲ್ಲಿ ಸಂಗ್ರಹವಾಗಿರುವ ನೀರು ಕಲುಷಿತವಾಗಿದೆಯಲ್ಲದೆ ಇತ್ತೀಚೆಗೆ ಮೀನುಗಳು ಸತ್ತು ಅಣೆಕಟ್ಟು ಸಂದಿಗಳಲ್ಲಿ ಸೇರಿಕೊಂಡು ಉಂಟಾದ ಮಾಲಿನ್ಯದಿಂದಲಾಗಿ ಕುಡಿಯುವ ನೀರಿಗೆ ಅಪಾಯ ಉಂಟಾಗಿದೆ. ಮೀನುಗಳ ಸಾವಿಗೂ, ನೀರಿನ ಮಾಲಿನ್ಯಕ್ಕೂ ಕಾರಣರಾದ ವ್ಯಕ್ತಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಮೇ 19ರಂದು ಮಂಗಳೂರಿನ ಬೈಕಂಪಾಡಿಯಲ್ಲಿರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಛೇರಿಯೆದುರು ಡಿವೈಎಫ್ಐ ದ.ಕ ಜಿಲ್ಲಾ ಸಮಿತಿಯ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ಪ್ರತಿಭಟನೆಯನ್ನು ಉದ್ದೇಶಿಸಿ ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ, ಈ ಪ್ರತಿಭಟನೆಯೊಂದಿಗೆ 'ಪಲ್ಗುಣಿ ಉಳಿಸಿ' ಆಂದೋಲನ ಆರಂಭವಾಗಿದೆ ಎಂದು ಘೋಷಿಸಿದರು. ಜಿಲ್ಲಾ ಸಮಿತಿ ಸದಸ್ಯ ಶ್ರೀನಾಥ್ ಕಾಟಿಪಳ್ಳ ಮತ್ತು ಅಣೆಕಟ್ಟು ಸಮೀಪದ ಗ್ರಾಮಸ್ಥರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಿವೇಶನ ಆಗ್ರಹಿಸಿ ಅಂಬ್ಲಮೊಗರು ಗ್ರಾಮ ಪಂಚಾಯತ್ ಕಛೇರಿ ಎದುರು ಪ್ರತಿಭಟನೆ

ಉಳ್ಳಾಲ ವಲಯದ ಅಂಬ್ಲಮೊಗರು ಗ್ರಾಮ ಪಂಚಾಯತ್‌ನಲ್ಲಿ ನಿವೇಶನಕ್ಕಾಗಿ ಕಾದಿರಿಸಿದ ಮೂರು ಎಕ್ರೆ ಜಮೀನು ಇದ್ದರೂ, ನಿವೇಶನರಹಿತರಿಗೆ ಮಂಜೂರು ಮಾಡಿಸುವಲ್ಲಿ ಗ್ರಾಮ ಪಂಚಾಯತ್ ನಿರ್ಲಕ್ಷ್ಯ ತಾಳಿದೆ ಎಂದು ಆರೋಪಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಅಂಬ್ಲಮೊಗರು ಗ್ರಾಮ ಸಮಿತಿ ವತಿಯಿಂದ ಮೇ 22ರಂದು ಗ್ರಾ. ಪಂ. ಕಛೇರಿ ಎದುರು ಪ್ರತಿಭಟನೆ ನಡೆಸಲಾಯಿತು. ಈ ಸಂಬಂಧ ಗ್ರಾ. ಪಂ.ನಿಂದ ಏನು ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ತಿಳಿಸುವ ವರೆಗೆ ತಾವು ಕದಲಲಾರೆವು ಎಂಬುದಾಗಿ ತಿಳಿಸಿದ ಪ್ರತಿಭಟನಾಕಾರರು ಧರಣಿ ಸತ್ಯಾಗ್ರಹ ನಡೆಸಿದರು.

ಬಳಿಕ ಪಿಡಿಒ ಸ್ಥಳಕ್ಕೆ ಆಗಮಿಸಿ, ಮೂರು ಎಕ್ರೆ ಖಾದರಿಸಿದ ಜಮೀನಿನಲ್ಲಿ 50–60 ಮಂದಿಗೆ ಮಾತ್ರ ನಿವೇಶನ ನೀಡಲು ಸಾಧ್ಯ ಎಂಬುದನ್ನು ಇಂಜಿನಿಯರ್ ತಿಳಿಸಿರುವುದಾಗಿಯೂ ಕಡು ಬಡವರಾದ 80 ಮಂದಿಯ ಪಟ್ಟಿಯನ್ನ ನಿವೇಶನ ಮಂಜೂರಾತಿಗಾಗಿ ತಾಲೂಕು ತಹಶಿಲ್ದಾರರಿಗೆ ಸಲ್ಲಿಸಿರುವುದಾಗಿ ತಿಳಿಸಿದ ಮೇರೆಗೆ ಧರಣಿ ಹಿಂತೆಗೆದುಕೊಳ್ಳಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಕೆ. ಯಾದವ ಶೆಟ್ಟಿ ಮಾತನಾಡಿದರು.

ಪ್ರಾಂತ ರೈತ ಸಂಘದ ಗ್ರಾಮ ಸಮಿತಿ ಅಧ್ಯಕ್ಷ ಕಮಲಾಕ್ಷ ಶೆಟ್ಟಿ, ಕಾರ್ಯದರ್ಶಿ ಇಬ್ರಾಹಿಂ ಮದಕ, ಉಳ್ಳಾಲವಲಯ ರೈತ ಸಂಘದ ಕಾರ್ಯದರ್ಶಿ ಜಯಂತ ಅಂಬ್ಲಮೊಗರು, ಸಿಪಿಐ(ಎಂ) ಉಳ್ಳಾಲ ವಲಯದ ಮುಖಂಡರಾದ ಜಯಂತ ನಾಯ್ಕ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ತಿರುವೈಲು ಗ್ರಾಮ ಪಂಚಾಯತ್ ಎದುರು ಪ್ರತಿಭಟನೆ

ಕುಡಿಯುವ ನೀರಿನ ಪೂರೈಕೆಯಲ್ಲಿ ತಾರತಮ್ಯ, ಎಸ್.ಸಿ./ಎಸ್.ಟಿ. ಮೀಸಲು ನಿಧಿಯನ್ನು ಖರ್ಚು ಮಾಡದಿರುವುದನ್ನು ಖಂಡಿಸಿ ಕರ್ನಾಟಕ ಪ್ರಾಂತ ರೈತ ಸಂಘ ಇರುವೈಲು ಗ್ರಾಮ ಸಮಿತಿ, ಸಿಐಟಿಯು ಮತ್ತು ದಲಿತ ಹಕ್ಕುಗಳ ಗ್ರಾಮ ಸಮಿತಿಗಳ ನೇತೃತ್ವದಲ್ಲಿ ಮೇ 23ರಿಂದ ಇರುವೈಲು ಗ್ರಾಮ ಪಂಚಾಯತ್ ಕಛೇರಿಯೆದುರು ಆಹೋರಾತ್ರಿ ಧರಣಿ ಸತ್ಯಾಗ್ರಹ ಆರಂಭವಾಗಿದ್ದುದು ಗ್ರಾಮ ಪಂಚಾಯತ್ ಬೇಡಿಕೆಗಳನ್ನು ಒಪ್ಪಿದ ಮೇರೆಗೆ ಮರುದಿನ ಮೇ 24ರ ಸಾಯಂಕಾಲ ಧರಣಿಯನ್ನು ಹಿಂತೆಗೆಯಲಾಯಿತು.

ಎಸ್.ಸಿ./ಎಸ್.ಟಿ. ಕಾಲನಿಗೆ ನೀರಿನ ಸಂಪರ್ಕವನ್ನು ಕಡಿತಗೊಳಿಸಿದ ಗ್ರಾಮ ಪಂಚಾಯತ್ ನೀರಿನ ಬಿಲ್ ಸಂಗ್ರಹಕ್ಕೆ ನೋಟೀಸ್ ಕಳಿಸಿರುವುದನ್ನು ಖಂಡಿಸಲಾಯಿತು. 2015–16ನೇ ಸಾಲಿನಲ್ಲಿ ಗ್ರಾಮ ಪಂಚಾಯತ್ ಎಸ್.ಸಿ./ಎಸ್.ಟಿ. ಅನುದಾನವನ್ನು ಬಳಕೆ ಮಾಡದೆ ಇರುವುದನ್ನು ಪ್ರತಿಭಟನಾಕಾರರು ಪ್ರಶ್ನಿಸಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ, ಸಿಐಟಿಯು ಜಿಲ್ಲಾ ಮುಖಂಡರಾದ ಸದಾಶಿವ ದಾಸ್ ಮಾತನಾಡಿದರು. ಪ್ರಾಂತ ರೈತ ಸಂಘದ ಗ್ರಾಮ ಸಮಿತಿ ಅಧ್ಯಕ್ಷ ಆನಂದ ಪೂಜಾರಿ, ಕಾರ್ಯದರ್ಶಿ ಶೀನ ನಾಯ್ಕ್, ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘದ ಲೋಕೇಶ್ ಆಚಾರ್ಯ, ದಿನೇಶ್ ಪೂಜಾರಿ, ದಲಿತ ಹಕ್ಕುಗಳ ಸಮಿತಿಯ ರಾಜೇಶ್ ನಾಯ್ಕ್, ಶೀನ ನಾಯ್ಕ್ ಮತ್ತು ಗ್ರಾಮಸ್ಥರು ಇನ್ನೂರರಷ್ಟು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವರದಿ: ವಾಸುದೇವ ಉಚ್ಚಿಲ

ಬೀದಿಬದಿ ವ್ಯಾಪಾರಸ್ಥರಿಗೆ ವಿಶೇಷ ನಿಯಮಾವಳಿ ರೂಪಿಸಲು ಒತ್ತಾಯ



ಕಳೆದ ಯುಪಿಎ ಸರ್ಕಾರದ ಅವಧಿಯಲ್ಲಿ ಎಡಪಕ್ಷಗಳ ಪ್ರಬಲ ಒತ್ತಡದ ಹಿನ್ನೆಲೆಯಲ್ಲಿ ದೇಶದಲ್ಲಿ ಬೀದಿಬದಿ ವ್ಯಾಪಾರಸ್ಥರ ಹಕ್ಕುಗಳ ರಕ್ಷಣಾ ಮಸೂದೆಯೊಂದು ಜಾರಿಗೊಂಡರೂ ಅದನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಬೇಕಾದರೆ ರಾಜ್ಯ ಸರ್ಕಾರಗಳು ವಿಶೇಷ ನಿಯಮಾವಳಿಗಳನ್ನು ರೂಪಿಸಬೇಕಾಗುತ್ತದೆ. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರಗಳು ಸದಾ ಅಭಿವೃದ್ಧಿಯ ಮಂತ್ರವನ್ನು ಜಪಿಸುತ್ತಿದ್ದರೂ, ಹಲವಾರು ಭಾಗ್ಯಗಳ ನೆಪದಲ್ಲಿ ಜನತೆಗಳಿಗೆ ವಂಚಿಸುತ್ತಿದ್ದರೂ ಬೀದಿಬದಿ ವ್ಯಾಪಾರಸ್ಥರಿಗೆ ಮಾತ್ರ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ವಿಶೇಷ ನಿಯಮಾವಳಿಯನ್ನು ರೂಪಿಸದೆ ತೀರಾ ಅನ್ಯಾಯವೆಸಗಿದೆ ಎಂದು ಕರ್ನಾಟಕ ರಾಜ್ಯ ಬೀದಿಬದಿ ವ್ಯಾಪಾರಸ್ಥರ ಫೆಡರೇಶನ್‌ನ ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್ ಅಹಮ್ಮದ್‌ರವರು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅವರು ನಗರದ ಎನ್‌ಜಿಒ ಹಾಲ್‌ನಲ್ಲಿ ಜರುಗಿದ ಸಿಐಟಿಯುಗೆ ಸಂಯೋಜಿತಗೊಂಡಿರುವ ದ.ಕ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘದ 6ನೇ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸುತ್ತಾ ಈ ಮಾತುಗಳನ್ನು ಹೇಳಿದರು.

ಮುಂದುವರಿಸುತ್ತಾ, ಇಡೀ ದೇಶದಲ್ಲಿ ಸ್ಮಾರ್ಟ್ ಸಿಟಿಯ ಹೆಸರಿನಲ್ಲಿ ಬಡವರ ಮೇಲಿನ ಧಾಳಿಗಳು ತೀವ್ರಗೊಳ್ಳುತ್ತಿದೆ. ಸ್ಮಾರ್ಟ್ ಸಿಟಿಯಲ್ಲಿ ಬಡವರಿಗೆ ಬೀದಿಬದಿ ವ್ಯಾಪಾರಸ್ಥರಿಗೆ ಅವಕಾಶವಿಲ್ಲ. ಒಟ್ಟಿನಲ್ಲಿ ಸ್ಮಾರ್ಟ್ ಸಿಟಿ ಎಂಬುವುದೇ ಬಡವರ ಸಮಾಧಿಯ ಮೇಲೆ ರಚಿತವಾಗಿದೆ. ಮಸೂದೆಯಲ್ಲಿ ನಿಯಂತ್ರಣ ಹಾಗೂ ರಕ್ಷಣೆ ಎಂಬುದಿದ್ದರೂ, ಇಲ್ಲಿ ನಿಯಂತ್ರಣಕ್ಕೆ ಜಾಸ್ತಿ ಒತ್ತು ನೀಡಲಾಗುತ್ತಿದ್ದು, ರಕ್ಷಣೆಯೇ ಇಲ್ಲವಾಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿರುವ ಸಿಐಟಿಯು ದ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳೂ, ಸಂಘದ ಗೌರವಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್‌ರವರು ಮಾತನಾಡುತ್ತಾ, ಸಮಾಜದಲ್ಲಿ ತೀರಾ ನಿಕೃಷ್ಟವಾಗಿ ಜೀವನ ನಡೆಸುತ್ತಿರುವ ಬೀದಿಬದಿ ವ್ಯಾಪಾರಸ್ಥರು ತಮ್ಮ ಬದುಕನ್ನು ತಾವೇ ಕಟ್ಟಿಕೊಳ್ಳುವ ಮೂಲಕ ಪರೋಕ್ಷವಾಗಿ ಸರಕಾರಗಳಿಗೆ ಸಹಾಯ ಮಾಡುತ್ತಿದ್ದಾರೆ. ಆದರೆ ಸರಕಾರಗಳು ಮಾತ್ರ ಬೀದಿ ವ್ಯಾಪಾರಸ್ಥರ ಮೇಲೆ ಕೆಂಗಣ್ಣು ಬೀರಿ ಅವರನ್ನು ಎತ್ತಂಗಡಿ ನಡೆಸಲು ಹೊಂಚು ಹಾಕುತ್ತಿದೆ. ದೇಶದಲ್ಲಿ ಮಸೂದೆಯೊಂದು ಜಾರಿಗೊಂಡರೂ ಸುಪ್ರೀಂ ಕೋರ್ಟ್ ಅವರ ಪರವಾಗಿ ತೀರ್ಪು ನೀಡಿದರೂ, ಬೀದಿಬದಿ ವ್ಯಾಪಾರಸ್ಥರಿಗೆ ರಕ್ಷಣೆಯೇ ಇಲ್ಲವಾಗಿದೆ. ಕಾಂಗ್ರೆಸ್ ನೇತೃತ್ವದ ಮಸೂದೆ ಆಡಳಿತವು ಕೂಡಾ ನಿರಂತರವಾಗಿ ದಾಳಿ ನಡೆಸುವ ಮೂಲಕ ಬೀದಿಬದಿ ವ್ಯಾಪಾರಸ್ಥರು ಭಯದ ನೆರಳಲ್ಲಿ ಬದುಕುವಂತಾಗಿದೆ. ಟಿವಿಸಿ ಸಭೆ ಕರೆಯುವಲ್ಲಿ ನಿರ್ಲಕ್ಷ್ಯ ವಹಿಸಲಾಗಿದೆ. ಪ್ರಥಮ ಹಂತದಲ್ಲಿ ನೀಡಿದ ಗುರುತು ಚೀಟಿಯ ನವೀಕರಣವಾಗಿಲ್ಲ. ಎರಡನೇ ಹಂತದ ಗುರುತು ಚೀಟಿ ಇನ್ನೂ ನೀಡಿಲ್ಲ. ಕಾನೂನು ಬದ್ಧವಾಗಿ ಮಾಡಬೇಕಾದ ಕೆಲಸವನ್ನು ಮಾಡದ ನಗರ ಪಾಲಿಕೆ ನಿಜಕ್ಕೂ ಕಾನೂನು ಉಲ್ಲಂಘನೆ ಮಾಡಿದೆ ಎಂದು ಹೇಳಿದರು.

ಸಮಾರೋಪ ಭಾಷಣ ಮಾಡಿದ ಸಿಐಟಿಯು ಮಂಗಳೂರು ನಗರ ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರುರವರು ಬೀದಿಬದಿ ವ್ಯಾಪಾರಸ್ಥರು ನಡೆಸಿದ ಚಾರಿತ್ರಿಕ ಹೋರಾಟವನ್ನು ಮೆಲುಕು ಹಾಕುತ್ತಾ, ಬೀದಿಬದಿ ವ್ಯಾಪಾರಸ್ಥರ ಹಕ್ಕುಗಳೆಂದರೆ ಅದು ಮಾನವ ಹಕ್ಕುಗಳ ಭಾಗವಾಗಿದೆ. ಅಂತಹ ಹಕ್ಕುಗಳ ರಕ್ಷಣೆಗೆ ಕ್ರಮಬದ್ಧವಾಗಿ ಹೋರಾಡಬೇಕಾಗಿದೆ. ಬಡವರಿಗೆ ಹೋರಾಟ ಎಂಬುದು ಉಸಿರಾಟವಿದ್ದಂತೆ. ಹೋರಾಟ ಸಂಘಟನೆ ಜೊತೆಜೊತೆಗೆ ಸಾಗಬೇಕಾಗಿದೆ ಎಂದು ಹೇಳಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಸಂತೋಷ್ ಆರ್.ಎಸ್. ರವರು ಪ್ರಾರಂಭದಲ್ಲಿ ಸ್ವಾಗತಿಸುತ್ತಾ ಪ್ರಾಸ್ತವಿಕ ಮಾತುಗಳನ್ನಾಡಿದರು. ಸಂಘದ ಅಧ್ಯಕ್ಷರಾದ ಮಹಮ್ಮದ್ ಮುಸ್ತಫಾರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದರು. ವೇದಿಕೆಯಲ್ಲಿ ಸಂಘದ ಪದಾಧಿಕಾರಿಗಳಾದ ಅತ್ತಾವುಲ್ಲಾ, ಅಣ್ಣಯ್ಯ, ಹಿತೇಶ್ ಪೂಜಾರಿ, ಹಸನ್, ಅಬ್ದುಲ್ ಖಾದರ್, ಮುತ್ತು ರಾಜು, ಶಿವಪ್ಪ, ಆದಂ ಬಜಾಲ್, ಆಸಿಫ್, ಹರೀಶ್, ಶ್ರೀಧರ್, ಹೆಲೆನ್ ಮುಂತಾದವರು ಉಪಸ್ಥಿತರಿದ್ದರು.

ಫೇಕ್ ನ್ಯೂಸ್ ಗೆ ಹೋದ ಮಾನ ಟ್ವಿಟ್ಟರ್ ಬಿಟ್ಟರೂ ಬಾರದು!
#ಆಧುನಿಕ–ಗಾದೆ–ತಗಾದೆ
– ಗುರುಪ್ರಸಾದ್

* ಇದು ಇತ್ತೀಚೆಗೆ ಟ್ವಿಟರ್ ನಲ್ಲಿ ವಿವಾದ ಸೃಷ್ಟಿಸಿ ನಿಂದನೆಗೆ ಒಳಗಾದ ಇಬ್ಬರು ಬಿಜೆಪಿ ಎಂ.ಪಿ.ಗಳು ಬಾಲಿವುಡ್ ನಟ ಪರೇಶ್ ರಾವಲ್, ಗಾಯಕ ಅಭಿಜಿತ್ ಮತ್ತು ಗಾಯಕ ಸೋನು ನಿಗಮ್ ಬಗ್ಗೆ ಮಾಡಿದ ವ್ಯಂಗ್ಯ.

ಅಭಿಜಿತ್ ಟ್ವಿಟರ್ ನಿಂದ ನಿಷೇಧಿಸಲ್ಪಟ್ಟಿದ್ದಾರೆ. ಅವರನ್ನು ನಿಷೇಧಿಸಿದ್ದು, ಜೆ.ಎನ್.ಯು. ವಿದ್ಯಾರ್ಥಿ ನಾಯಕಿ ಶೆಹ್ಲಾ ರಶೀದ್ ಅವರನ್ನು ಅಸಹ್ಯಕರ ಭಾಷೆಯಲ್ಲಿ ಅವಹೇಳನ ಮಾಡಿದ್ದಕ್ಕೆ. ಶೆಹ್ಲಾ ರಶೀದ್ ತಮ್ಮ ಟ್ವಿಟ್ ನಲ್ಲಿ "ಗುಜರಾತ್, ಬಂಗಾಳ, ಮಧ್ಯಪ್ರದೇಶಗಳಲ್ಲಿ ಬಿಜೆಪಿ ನಾಯಕರು ಸೆಕ್ಸ್ ರ್‍ಯಾಕೆಟ್, ಮಕ್ಕಳ ಕಳ್ಳ ಸಾಗಾಣಿಕೆ, ಐ.ಎಸ್.ಐ. ಗೆ ಗೂಢಚಾರಿಕೆಯಲ್ಲಿ ತೊಡಗಿದ್ದಾರೆ" ಎಂದು ಪತ್ರಿಕಾ ವರದಿಗಳಲ್ಲಿ ಬಂದ ಸುದ್ದಿ ಆಧರಿಸಿ ಹೇಳಿದ್ದರು.

ಅಭಿಜಿತ್ ನ್ನು ಟ್ವಿಟರ್ ನಿಂದ ನಿಷೇಧಕ್ಕೆ ಪ್ರತಿಭಟಿಸಿ ಗಾಯಕ ಸೋನು ನಿಗಮ್ ಟ್ವಿಟರ್ ಬಿಡುವುದಾಗಿ ಪ್ರಕಟಿಸಿದ್ದರು. ಮಸೀದಿಯಿಂದ ಪ್ರಾರ್ಥನೆಯ ಕರೆ ತನಗೆ ಕಿರಿಕಿರಿ ಆಗುತ್ತದೆ ಎಂದು ಇತ್ತೀಚೆಗೆ ಸೋನು ನಿಗಮ್ ಟ್ವೀಟ್ ವಿವಾದ ಸೃಷ್ಟಿಸಿದ್ದರು.

ಬಿಜೆಪಿ ಎಂ.ಪಿ. ಪರೇಶ್ ರಾವಲ್, ಆರುಂಧತಿ ರಾಯ್ ಅವರನ್ನು ಕಾಶ್ಮೀರದಲ್ಲಿ ಮಿಲಿಟರಿ 'ಮಾನವ ಗುರಾಣಿ'ಯಾಗಿ ಬಳಸಬೇಕಿತ್ತು ಎಂಬ ಬಹು–ವಿವಾದಿತ ಟ್ವೀಟ್ ಮಾಡಿದ್ದರು. ಇದು ರಾಯ್ ಇತ್ತೀಚಿನ ಕಾಶ್ಮೀರ ಭೇಟಿಯ ಸಮಯದಲ್ಲಿ ಪಾಕಿಸ್ತಾನಿ ಪತ್ರಿಕೆಯೊಂದಕ್ಕೆ ಕೊಟ್ಟ ಸಂದರ್ಶನದಲ್ಲಿ "70 ಲಕ್ಷ ಸೈನಿಕರೂ ಕಾಶ್ಮೀರದ ಆಜಾದಿಗಳನ್ನು ಸೋಲಿಸಲು ಸಾಧ್ಯವಿಲ್ಲ' ವೆಂದು ಹೇಳಿದ್ದಕ್ಕೆ ಪ್ರತಿಕ್ರಿಯೆ ಆಗಿತ್ತಂತೆ. ಅದು ಪಾಕಿಸ್ತಾನಿ ವೆಬ್ ಸೈಟು ಒಂದು ಮೊದಲು ಪ್ರಕಟಿಸಿ ಅದನ್ನು ಹಲವು ಹಿಂದೂತ್ವ ವೆಬ್ ಸೈಟುಗಳು ಪ್ರಸಾರ ಮಾಡಿದ "ಫೇಕ್ ನ್ಯೂಸ್"(ಸುಳ್ಳು ಸುದ್ದಿ)ಯೆಂದು ಆ ಮೇಲೆ ಗೊತ್ತಾಗಿದೆ. ಆರುಂಧತಿ ರಾಯ್ ಕಾಶ್ಮೀರಕ್ಕೆ ಇತ್ತೀಚೆಗೆ ಹೋಗಲೂ ಇಲ್ಲ. ಸಂದರ್ಶನ ಕೊಡಲೂ ಇಲ್ಲವೆಂದು ಹೇಳಿಕೆಯಿತ್ತಿದ್ದಾರೆ. ಈ ಸುಳ್ಳುಸುದ್ದಿ ಮತ್ತು ಪ್ರಕರಣ ಪಾಕಿಸ್ತಾನಿ ಮತ್ತು ಹಿಂದೂತ್ವ ವೆಬ್ ಸೈಟುಗಳ 'ಜಂಟಿ ಕಾರ್ಯಾಚರಣೆ' ಎಂಬುದು ಗಮನಿಸಬೇಕಾದ್ದು.

ಗುತ್ತಿಗೆ ಪೌರ ಕಾರ್ಮಿಕರ ಧರಣಿ ಉದ್ಘಾಟನೆ

ತಳ ಸಮುದಾಯವರೇ ಬಹುತೇಕ ನೌಕರರಾಗಿರುವ ಪೌರ ಕಾರ್ಮಿಕರ ಸಮಸ್ಯೆಯನ್ನು ಇತ್ಯರ್ಥ ಮಾಡದಿರುವುದು ಅಮಾನವೀಯ ಸಂಗತಿಯಾಗಿದೆ. ಸ್ವಚ್ಛ ಭಾರತದ ಬಗ್ಗೆ ದಿನವಿಡೀ ಮಾತನಾಡುವವರು ಅದರ ಪ್ರಚಾರ ಜಾಹೀರಾತಿಗೆ ಹಣ ವಿನಿಯೋಗ ಮಾಡುವವರು, ಮೊದಲು ಈ ಗುತ್ತಿಗೆ ಕಾರ್ಮಿಕರನ್ನು ಖಾಯಂ ಮಾಡುವ ಮೂಲಕ ತಮ್ಮ ಬದ್ಧತೆ ಪ್ರದರ್ಶಿಸಬೇಕು. ಅವರ ರಜಾ ಸಮಸ್ಯೆ, ಕಾಂಟ್ರಾಕ್ಟರ್ ನೀಡುವ ಕಿರುಕುಳದ ಸಮಸ್ಯೆ, ಅಗತ್ಯ ಮೂಲ ಸೌಕರ್ಯ ಒದಗಿಸುವುದು ಇತ್ಯರ್ಥ ಪಡಿಸಿ ಮಾನವೀಯತೆ ಮೆರೆಯಬೇಕಾಗಿದೆ. ಇವರು ಕೇಳುತ್ತಿರುವುದು ಕನಿಷ್ಟ ಜೀವನಾವಶ್ಯಕವಾಗಿದೆಯೇ ಹೊರತೂ ಬೇರೇನೂ ಅಲ್ಲ. ಈ ಹೋರಾಟಕ್ಕೆ ಜಿಲ್ಲೆಯ ಸಾಹಿತಿ–ಚಿಂತಕರ ಪರವಾಗಿ ನಾವು ಬೆಂಬಲ ನೀಡುತ್ತಿದ್ದೇವೆ" ಎಂದು ಹಿರಿಯ ಸಾಹಿತಿ, ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರಾದ ರೋಹಿದಾಸ ನಾಯ್ಕ ಹೇಳಿದರು.

ಅವರು ಸಿಐಟಿಯು ನೇತೃತ್ವದ ಪೌರ ಕಾರ್ಮಿಕರ ಸಂಘಟನೆ ತಮ್ಮ ಬೇಡಿಕೆಗಳಿಗಾಗಿ ನಡೆಸಿದ ಒಂದು ದಿನದ ಧರಣಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇನ್ನೊಬ್ಬ ಹಿರಿಯ ಸಾಹಿತಿ ಡಾ. ಆರ್. ಜಿ. ಗುಂದಿ ಮಾತನಾಡಿ "ನಿಮಗೆ ಬೇಕಾದ ಅಗತ್ಯ ಸೌಲಭ್ಯವನ್ನು ನೀಡದೇ ಸೇವೆ ತೆಗೆದುಕೊಳ್ಳುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಕೇವಲ ಒಂದು ದಿನ ಕಸ ಎತ್ತುವುದನ್ನೇ ಬಿಟ್ಟರೆ ಊರು ಕೊಳೆತು ನಾರಲು ತೊಡಗುತ್ತದೆ. ಆದರೆ ಅವರನ್ನೇ ಶೋಷಣೆಗೆ ಒಳಪಡಿಸುವುದು ಖೇದಕರ. ಹೋರಾಟದ ಮೂಲಕ ನಿಮ್ಮ ಹಕ್ಕನ್ನು ಪಡೆದುಕೊಳ್ಳಿ. ನಿಮ್ಮ ಬೆಂಬಲಕ್ಕೆ ನಾವಿದ್ದೇವೆ, ನಿಮ್ಮ ಪರವಾಗಿ ನಾವೂ ನ್ಯಾಯ ಕೇಳುತ್ತೇವೆ." ಎಂದರು. ಹಿರಿಯ ಸಾಹಿತಿ ಮೋಹನ ಹಬ್ಬು ಪೌರ ಕಾರ್ಮಿಕರ ದೈನಂದಿನ ಕೆಲಸದ ಕಷ್ಟವನ್ನು ತಾನು ನಿರಂತರ ನೋಡುತ್ತಿರುವ ಅನುಭವ ಹಂಚಿಕೊಳ್ಳುತ್ತಾ ಸಾಮಾನ್ಯ ದುಡಿಯುವವರಿಗೆ ಸಿಗುವ ಸೌಲಭ್ಯವೂ ಇವರಿಗೆ ಸಿಗದಿರುವುದು ಖೇದಕರ. ಚಳುವಳಿ ಯಶಸ್ವಿಯಾಗಲು ಜನತೆಯ ಸಹಾಕಾರದ ಭಾಗವಾಗಿ ನಾವು ಬಂದಿದ್ದೇವೆ ಎಂದರು. ದಲಿತ ಸಂಘರ್ಷ



ಸಮಿತಿಯ ಶಿವಾಜಿ ಬನವಾಸಿ ಮಿತ್ರ ಸಮಾಜದ ಎದುರು ಜಾಥಾ ಪ್ರಾರಂಭಿಸಿಕೊಟ್ಟರು. ವೇದಿಕೆಯಲ್ಲಿ ಚಿಂತನದ ಸಂಚಾಲಕರಾದ ವಿಠ್ಠಲ ಭಂಡಾರಿ, ಡಿ. ಸ್ಯಾಮ್ಸನ್, ಹರೀಶ ನಾಯ್ಕ, ಸಿ.ಆರ್. ಶಾನಭಾಗ್, ಯಮುನಾ ಗಾಂವ್ಕರ್, ರಮೇಶ ಬಾಬು, ನಾಗಪ್ಪ ನಾಯ್ಕ ಮುಂತಾದವರಿದ್ದರು.

ಸಾಹಿತಿಗಳ ನಿಯೋಗ ಚಿಂತನ ಮತ್ತು ಸಹಯಾನದ ನೇತೃತ್ವದಲ್ಲಿ ಮಾನ್ಯ ಅಪರ ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ಗುತ್ತಿಗೆ ಪೌರ ಕಾರ್ಮಿಕರ ಬೇಡಿಕೆ ಆಲಿಸಿ ಸಮಸ್ಯೆ ಬಗೆಹರಿಸಲು ವಿನಂತಿಸಿ ಚರ್ಚಿಸಿದರು. ನಿಯೋಗದಲ್ಲಿ ರೋಹಿದಾಸ ನಾಯಕ, ಆರ್. ಜಿ. ಗುಂದಿ, ಮೋಹನ ಹಬ್ಬು, ರಾಮಾ ನಾಯ್ಕ, ಚಿನ್ಮಯ ಹೆಗಡೆ, ಕಿರಣ ಭಟ್, ಹರೀಶ ನಾಯ್ಕ, ವಿಠ್ಠಲ ಭಂಡಾರಿ, ಶಿವಾಜಿ ಬನವಾಸಿ, ಜೆಡಿ ಮನೋಜ್, ಅನಂತ ನಾಯ್ಕ, ಜಿ. ಎನ್. ಕುಡಾಲ್ಕರ್, ಅನಂತ ಹುಲಸ್ವಾರ, ರಾಮಾ ನಾಯ್ಕ, ಸಿಆರ್ ಶಾನಭಾಗ, ಯಮುನಾ ಗಾಂವ್ಕರ ಮುಂತಾದವರಿದ್ದರು.

–ಯಮುನಾ ಗಾಂವಕರ್

ರಾಜಕಾಲುವೆಯಲ್ಲಿ ಕೊಚ್ಚಿ ಹೋದ ಕಟ್ಟಡ ಕಾರ್ಮಿಕ



ಬೆಂಗಳೂರು ಮಹಾನಗರದಲ್ಲಿ ಕಳೆದ ಶನಿವಾರ 20 ಮೇ 2017 ರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ಕುರುಬರಹಳ್ಳಿಯ ಜೆ.ಸಿ ನಗರದ ರಾಜಕಾಲುವೆಯಲ್ಲಿ ಶಾಂತಕುಮಾರ್ ಎಂಬ ಕಾರ್ಮಿಕ ಕೊಚ್ಚಿಹೋಗಿದ್ದಾರೆ.

ಘಟನೆ ಸಂಭವಿಸಿ ಮೂರ್ನಾಲ್ಕು ದಿನಗಳು ಕಳೆದರೂ ಯಾವುದೇ ರೀತಿಯ ಕುರುಹು ದೊರೆತಿಲ್ಲ. ಆದ್ದರಿಂದ ಕೊಚ್ಚಿಹೋಗಿರುವ ಕಾರ್ಮಿಕನನ್ನು ಶೀಘ್ರವಾಗಿ ಪತ್ತೆ ಹಚ್ಚಬೇಕೆಂದು ಹಾಗೂ ಆತನ ಕುಟುಂಬಕ್ಕೆ ಸೂಕ್ತ ಪರಿಹಾರವನ್ನು ನೀಡಬೇಕೆಂದು ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್(ಸಿ.ಡಬ್ಲ್ಯು.ಎಫ್.ಐ.) ಒತ್ತಾಯಿಸಿತು.

ಬೆಂಗಳೂರಿನಲ್ಲಿ ಮಳೆ ಬಂದಾಗಲೆಲ್ಲ ರಾಜ ಕಾಲುವೆಗಳಲ್ಲಿ ನೀರಿನ ಪ್ರಮಾಣ ಹೆಚ್ಚುತ್ತದೆ. ಮತ್ತು ಬೆಂಗಳೂರಿನ ಬಹುತೇಕ ರಾಜಕಾಲುವೆಗಳಲ್ಲಿ ಬೃಹತ್ ಪ್ರಮಾಣದಲ್ಲಿ ಹೂಳು ತುಂಬಿಕೊಂಡಿದೆ. ಈ ಹೂಳನ್ನು ನಿರಂತರವಾಗಿ ತೆರವು ಮಾಡದಿರುವುದರ ಪರಿಣಾಮ ಮಳೆ ಬಿದ್ದಂತಹ ಸಂದರ್ಭದಲ್ಲಿ ನೀರು ಸರಾಗವಾಗಿ ಹರಿಯಲು ಸಾಧ್ಯವಾಗುತ್ತಿಲ್ಲ.

ಪ್ರತೀ ವರ್ಷ ಮುಂಗಾರು ಮಳೆ ಪ್ರಾರಂಭವಾಗುವ ಹೊತ್ತಿಗೆ ಈ ರೀತಿಯ ಹಲವಾರು ಘಟನೆಗಳು ಮರುಕಳಿಸುತ್ತಿವೆ. ಮಳೆಗಾಲ ಬಂದಾಗ ಮತ್ತು ಈ ರೀತಿಯ ಘಟನೆಗಳು ಘಟಿಸಿದಾಗ ಮಾತ್ರ ಬಿ.ಬಿ.ಎಂ.ಪಿಯ ಅಧಿಕಾರಿಗಳು ರಾಜಕಾಲುವೆಗಳ ಬಗ್ಗೆ ಯೋಚಿಸುತ್ತಾರೆ. ಆದರೆ ಮುಂಜಾಗತೆ ಕ್ರಮವಾಗಿ ದುರಸ್ತಿ ಮಾಡುವುದಾಗಲಿ ಅಥವಾ ಹೂಳೆತ್ತುವುದಾಗಲಿ ಮಾಡಲು ಕ್ರಮ ವಹಿಸುವುದಿಲ್ಲ. ಹೀಗಾಗಿಯೇ ಇಂತಹ ಘಟನೆಗಳು ಮತ್ತೆ ಮತ್ತೆ ಮರುಕಳಿಸುತ್ತಿವೆ. ರಾಜಕಾಲುವೆಗಳನ್ನು ವೈಜ್ಞಾನಿಕವಾದ ರೀತಿಯಲ್ಲಿ ನಿರ್ವಹಣೆ ಮಾಡಲು ಆತ್ಯಾಧುನೀಕರಣಗೊಳಿಸಬೇಕಿದೆ. ಇದಕ್ಕಾಗಿ ತಜ್ಞರ ಸಮಿತಿಯನ್ನು ರಚಿಸಿ ಅವರ ಅಭಿಪ್ರಾಯಗಳನ್ನು ಸ್ವೀಕರಿಸಬೇಕೆಂದು ಒತ್ತಾಯಿಸಿದೆ. ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ರೂಪದ ಹೋರಾಟಕ್ಕೆ ಮುಂದಾಬೇಕಾಗುತ್ತದೆ ಎಂದು ತಿಳಿಸಿದರು.

1. ಶೀಘ್ರವಾಗಿ ಕಾರ್ಯಾಚರಣೆ ಮಾಡುವ ಮೂಲಕ ಕಾರ್ಮಿಕ ಶಾಂತಕುಮಾರ್ ರವರನ್ನು ಪತ್ತೆ ಹಚ್ಚಬೇಕು.
2. ಕಾರ್ಮಿಕ ಶಾಂತಕುಮಾರ್ ಕುಟುಂಬಕ್ಕೆ ಗರಿಷ್ಠ ಮೊತ್ತದ ಪರಿಹಾರ ನೀಡಬೇಕು.
3. ಶಾಂತಕುಮಾರ್ ಕುಟುಂಬದ ಸದಸ್ಯರೊಬ್ಬರಿಗೆ ಬಿ.ಬಿ.ಎಂ.ಪಿಯು ಉದ್ಯೋಗ ನೀಡಬೇಕು.
4. ಈ ರೀತಿಯ ಘಟನೆಗಳು ಮರುಕಳಿಸದಂತೆ ಬಿ.ಬಿ.ಎಂ.ಪಿ. ಅಗತ್ಯ ಕ್ರಮ ವಹಿಸಬೇಕು.

–ಕೆ.ವೀರಮಣಿ

ಅಂಕಸಾಪುರ ಸರ್ಕಾರಿ ಶಾಲೆ ಜಾಗ ಅತಿಕ್ರಮಣ : ಎಸ್ಎಫ್ಐ ಪ್ರತಿಭಟನೆ

ಎಸ್ಎಫ್ಐ ಹಾವೇರಿ ಜಿಲ್ಲಾ ಸಮಿತಿ ಹಾಗೂ ಅಂಕಸಾಪುರ ಗ್ರಾಮದ ಗ್ರಾಮಸ್ಥರು ಜಿಲ್ಲಾಡಳಿತದ ಭವನದ ಮುಂದೆ ಪ್ರತಿಭಟನೆ ನಡೆಸಿದರು. ರಾಣೆಬೆನ್ನೂರು ತಾಲೂಕಿನ ಗ್ರಾಮದ ಅಂಕಸಾಪುರ ಗ್ರಾಮದ ಸರ್ಕಾರಿ ಶಾಲೆಯ ಜಾಗವನ್ನು ಒತ್ತುವರಿ ಮಾಡಿರುವ ಒತ್ತುವರಿದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಎಸ್ಎಫ್ಐ ಜಿಲ್ಲಾ ಅಧ್ಯಕ್ಷ ಸುಭಾಸ ಎಂ ಮಾತನಾಡಿ, ಜಿಲ್ಲೆಯ, ರಾಣೆಬೆನ್ನೂರು ತಾಲೂಕಿನ ಅಂಕಸಾಪುರ ಗ್ರಾಮದ ಸರ್ವೆ ನಂಬರ್ 02ರಲ್ಲಿ ಇರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದೆ, ಈ ಶಾಲೆಯಲ್ಲಿ 1 ನೇ ತರಗತಿಯಿಂದ 8 ನೇ ತರಗತಿಯವರೆಗೆ ಇದ್ದು. ಸುಮಾರು 150–200 ಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಸರ್ಕಾರಿ ಶಾಲೆಯ ಜಾಗವನ್ನು ಅಂಕಸಾಪುರ ಗ್ರಾಮದ ಕೆಲ ಗ್ರಾಮಸ್ಥರು ಶಾಲೆಯ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಕಳೆದ ತಿಂಗಳು ರಾಣೆಬೆನ್ನೂರು ತಹಶೀಲ್ದಾರರ ಕಛೇರಿ ಮುಂದೆ ಪ್ರತಿಭಟನೆ ನಡೆಸಿದಾಗ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ತಹಶೀಲ್ದಾರರು 10 ದಿನಗಳ ಕಾಲಾವಕಾಶ ಕೇಳಿದ್ದರು. ಆದರೆ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಮಾನ್ಯ ಜಿಲ್ಲಾಧಿಕಾರಿಗಳು ಈ ಪ್ರಕರಣದಲ್ಲಿ ಮಧ್ಯ ಪ್ರವೇಶ ಮಾಡಿ ಸರ್ಕಾರಿ ಶಾಲೆಯ ಜಾಗವನ್ನು ಶಾಲೆಗೆ ಬಿಟ್ಟುಕೊಡಬೇಕು ಎಂದು ಒತ್ತಾಯಿಸಿದರು.

ಎಸ್ಎಫ್ಐ ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಬೋವಿ ಮಾತನಾಡಿ ಶಾಲೆಯ ಜಾಗೆ–ಯ ಪ್ರಕರಣದ ದಾಖಲೆಗಳ ಮೂಲ ಮಾಹಿತಿ ಪ್ರಕಾರ 1940 ರಿಂದ ಈ ಭೂಮಿ ಸರ್ಕಾರಿ ಭೂಮಿ ಎಂದು ದಾಖಲೆ ಹೇಳುತ್ತದೆ. 1961 ರಲ್ಲಿ ಅಕ್ರಮವಾಗಿ ಈ ಭೂಮಿಯು ಇನಾಮದಾರ ಎಂಬ ಕುಟುಂಬ ಒತ್ತುವರಿ ಮಾಡಿಕೊಳ್ಳುತ್ತದೆ. 1954ರಲ್ಲಿ ಕೈ ಬರಹದಲ್ಲಿರುವ ಪಹಣಿಗೆ ಕಬ್ಜಾದಾರರ ಹೆಸರು ಡಿಟಿಪಿ ಸ್ವರೂಪದಲ್ಲಿದೆ. ಪಹಣಿಯಲ್ಲಿರುವ ದಾಖಲೆಗಳು ಕೈಬರಹದಲ್ಲಿದ್ದು, ಹೆಸರು ಮಾತ್ರ ಡಿಟಿಪಿಯಲ್ಲಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುತ್ತದೆ. ಹಾಗಾಗಿ ಈ ಎಲ್ಲವೂ ಸಮಗ್ರವಾಗಿ ತನಿಖೆಯಾಗಬೇಕು. ಕೂಡಲೆ ಉಪನೋಂದಣಾಧಿಕಾರಿ, ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ತಲಾಟಿ ಮೇಲೆ ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಬೇಕು ಹಾಗೂ ಅವರ ಮೇಲೆ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಖಾಸಗೀ ಶಾಲೆಗಳ ಡೊನೇಷನ್ ಮೇಲೆ ಕ್ರಮ : ಎಸ್ ಎಫ್ ಐ ಆಗ್ರಹ

ಡೊನೇಷನ್ ತೆಗೆದುಕೊಳ್ಳುತ್ತಿರುವ ಖಾಸಗೀ ಶಾಲೆಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಆಗ್ರಹಿಸಿ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ)

ಪುಟ 10 ಕ್ಕೆ

ಕೇಳಿಸಿದ್ದು

ಒಂದು ಕಾಲದಲ್ಲಿ ಬೌದ್ಧಿಕ ಕೊಡುಗೆಗಳ ದೃಷ್ಟಿಯಿಂದ ಕರ್ನಾಟಕದ ಬಂಗಾಳವಾಗಿದ್ದ ದಕ್ಷಿಣ ಕನ್ನಡ, ಉದ್ಯಮಶೀಲತೆಯ ದೃಷ್ಟಿಯಿಂದ ಕರ್ನಾಟಕದ ಮುಂಬೈ ಆಗಿದ್ದ ದಕ್ಷಿಣ ಕನ್ನಡ ಈಗ ಯಾವ ಹಾದಿಯಲ್ಲಿ ಸಾಗುತ್ತಿದೆ ಎನ್ನುವುದಕ್ಕೆ ಇದು ಮತ್ತೊಂದು ಉದಾಹರಣೆ.

ಏಸುವಿನ ಬಗ್ಗೆ ಒಂದು ಯಕ್ಷಗಾನ ಪ್ರಸಂಗ ನೋಡಿ ಯಾರಾದರೂ ಮತಾಂತರಕ್ಕೆ ಪ್ರೇರಣೆ ಪಡೆಯಬಹುದು ಎನ್ನುವ ವಾದ ತೀರಾ ಬಾಲಿಶವಾಗಿದೆ. ಈ ವಾದ ಮುಂದಿಡುವ ಮಂದಿಗೆ ಅತ್ತ ಮನುಷ್ಯನಿಗೆ ಧರ್ಮದ ಜತೆ ಇರುವ ಸಂಬಂಧವೂ ಅರ್ಥವಾಗಿಲ್ಲ, ಇತ್ತ ಕರಾವಳಿಯ ಜನಕ್ಕೆ ಯಕ್ಷಗಾನದ ಜತೆ ಇರುವ ಸಂಬಂಧವೂ ಅರ್ಥವಾಗಿಲ್ಲ ಎಂದೇ ಭಾವಿಸಬೇಕಾಗುತ್ತದೆ.

ದಕ್ಷಿಣ ಕನ್ನಡದ ಆಸುಪಾಸಿನ ಪ್ರಸಿದ್ಧ ಕವಿ ದಿವಂಗತ ಮಂಜೇಶ್ವರ ಗೋವಿಂದ ಪೈ ಅವರು ದಶಕಗಳ ಹಿಂದೆ 'ಗೊಲ್ಗೊಥಾ' ಎಂಬ ಕೃತಿ ರಚಿಸಿದ್ದರು. ಇದು ಕ್ರಿಸ್ತನ ಕುರಿತಾದ ಅದ್ಭುತ ಕಾವ್ಯ. ಹಲವು ತಲೆಮಾರುಗಳ ವಿದ್ಯಾರ್ಥಿಗಳು ಈ ಕಾವ್ಯವನ್ನು ಒಂದು ಪಠ್ಯವಾಗಿ ಓದಿದ್ದಾರೆ. ಹಾಗೆಂದು ಇದನ್ನು ಓದಿದವರು ಮತಾಂತರ ಹೊಂದಿದರೇ?

– *ನಾರಾಯಣ ಎ (ಪ್ರಜಾವಾಣಿ)*

ರಂಗ ನಿರ್ದೇಶಕ ಮುರಹರಿ ಕಾಸರಗೋಡು ನಿಧನ, ತುಂಬಲಾರದ ನಷ್ಟ



ಖ್ಯಾತ ರಂಗ ನಿರ್ದೇಶಕ, ಕಲಾವಿದ, ನೀನಾಸಂ ಪದವೀಧರ, ಮುರಹರಿ ಕಾಸರಗೋಡು ನಿಧನ ಸಿಡಬ್ಲ್ಯೂಎಫ್ಐ ಶಕ್ತಿನಗರ ಸಮಿತಿ ತೀವ್ರ ಸಂತಾಪ ಸೂಚಿಸಿದೆ. ಕಳೆದ ಏಪ್ರಿಲ್ ತಿಂಗಳಲ್ಲಿ ಶಕ್ತಿನಗರದಲ್ಲಿ ನಡೆದ ಚಿಣ್ಣರ ಮೇಳದಲ್ಲಿ ಮಕ್ಕಳಿಗೆ ಮೂರು ದಿನಗಳ ಕಾಲ ಶಿಬಿರ ತರಬೇತಿ ನೀಡಿ "ಸೂರ್ಯ ಬಂದ ಮೇಲೆ" ನಾಟಕವನ್ನು ಮಕ್ಕಳಿಗೆ ಕಲಿಸಿದರು. ಈ ನಾಟಕ ಪುರಭವನದಲ್ಲಿ ಮೇ 1ರಂದು ಮತ್ತು 14ರಂದು ಶ್ರಮ ಸಂಭ್ರಮ ಕಾರ್ಯಕ್ರಮದಲ್ಲಿ ಪ್ರದರ್ಶನಗೊಂಡು, ಜನರ ಮೆಚ್ಚುಗೆ ಗಳಿಸಿತ್ತು. ಇದು ಮುರಹರಿ ಕಾಸರಗೋಡುರವರು ತರಬೇತಿ ನೀಡಿದ ಕೊನೆಯ ಮಕ್ಕಳ ನಾಟಕವಾಗಿತ್ತು. ಕಳೆದ 14ರಂದು ಶಕ್ತಿನಗರದಲ್ಲಿ ನಡೆದ ಕಟ್ಟಡ ಕಾರ್ಮಿಕರ ಶ್ರಮಸಂಭ್ರಮದಲ್ಲಿ, ಇವರು ಕಥೆ ಬರೆದ "ಭದ್ರ" ಕಿರುಚಿತ್ರದ ಸಿಡಿ ಮತ್ತು ಡಿವಿಡಿಯನ್ನು ಖ್ಯಾತ ನಾಟಕ ಮತ್ತು ಸಿನೆಮಾ ಕಲಾವಿದೆ ಸರೋಜಿನಿ ಶೆಟ್ಟಿಯವರು ಬಿಡುಗಡೆಗೊಳಿಸಿದ್ದರು. ಇದೊಂದು ಕಲಾತ್ಮಕ ಕಿರುಚಿತ್ರವಾಗಿದೆ. ಮುರಾಹರಿ ಕಾಸರಗೋಡುರವರ ನಿಧನ ಕಲಾಕ್ಷೇತ್ರಕ್ಕೆ ತುಂಬಲಾಗದ ನಷ್ಟವೆಂದು ಸಿಡಬ್ಲ್ಯೂಎಫ್ಐ ಪದವು ವಿಭಾಗ ಸಮಿತಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಅತಿಥಿ ಅಂಕಣ



ಪ್ರೊ. ಟಿ.ಆರ್. ಚಂದ್ರಶೇಖರ್

ಜಾತಿಗಣತಿ: ಏಕೀ ವಿರೋಧ?!


ಜಾತಿಗಣತಿಗೆ ವಿರೋಧವನ್ನು ರಾಜಕೀಯ ಎಂದು ಕರೆಯಲು ಕೂಡ ಬರುವುದಿಲ್ಲ. ಇದೊಂದು ಊಳಿಗಮಾನ್ಯ-ಪಾಳೆಗಾರಿಕೆಯ ಅಭಿವ್ಯಕ್ತಿ-ಅಟ್ಟಹಾಸವಾಗಿದೆ. ಈ ಜಾತಿಗಣತಿ ವರದಿ ಪ್ರಕಟವಾದರೆ ಉಳ್ಳವರು ಸಮಾಜದಲ್ಲಿನ ವರಮಾನ, ಉತ್ಪಾದನೆ, ಆಸ್ತಿ, ಬಂಡವಾಳಗಳ ಮೇಲೆ ಯಾವ ಪ್ರಮಾಣದ ಏಕಸ್ವಾಮ್ಯ ಪಡೆದಿದ್ದಾರೆ ಎಂಬುದು ಮತ್ತು ಇವರಿಗೆ ಹೋಲಿಸಿದರೆ ಕೆಳವರ್ಗಗಳ, ಕೆಳಜಾತಿಗಳ ಅಭಿವೃದ್ಧಿ ಮಟ್ಟ ಎಷ್ಟೊಂದು ಹೀನ-ದೀನ ಸ್ಥಿತಿಯಲ್ಲಿದೆ ಎಂಬುದು ಬಹಿರಂಗಗೊಂಡು ಬಿಡುತ್ತದೋ ಎಂಬ ಭಯವಿರಬಹುದು.

ನಮ್ಮ ಸಮಾಜದ ಮೂಲ ರಚನೆ-ಸ್ವರೂಪದ ಬಗ್ಗೆ ತಿಳುವಳಿಕೆ ಇಲ್ಲದಿರುವವರು ಜಾತಿಗಣತಿ ಬಗ್ಗೆ ಮುಗ್ಧತೆಯಿಂದ ಅಥವಾ ಬದಲಾವಣೆಗೆ ಸಿದ್ಧವಿಲ್ಲದೆ ಇರುವುದರಿಂದ ವಿರೋಧ ಮಾಡಿದರೆ ಅದನ್ನು ಅರ್ಥ ಮಾಡಿಕೊಳ್ಳಬಹುದು. ನಮ್ಮಲ್ಲಿ ಅನೇಕರು ಜಾತಿ ಆಚರಣೆಯ ಬಗ್ಗೆ ಕುರುಡಾಗಿರುತ್ತಾರೆ. ಜಾತಿ ಮತ್ತು ಜಾತಿ ವ್ಯವಸ್ಥೆ ಬಗ್ಗೆ ಶಾಲಾ-ಕಾಲೇಜುಗಳಲ್ಲಿ, ಸಾರ್ವಜನಿಕ ವೇದಿಕೆಗಳಲ್ಲಿ, ಮಾಧ್ಯಮಗಳಲ್ಲಿ ಚರ್ಚೆ-ಸಂವಾದ ನಡೆಸುವುದನ್ನು ವಿರೋಧಿಸುವಲ್ಲಿ ಜಾಗೃತರಾಗಿರುತ್ತಾರೆ. ಅವರ ಪ್ರಕಾರ ನಮ್ಮ ಸಮಾಜದ ಹುಳುಕುಗಳ ಬಗ್ಗೆ ಬಹಿರಂಗವಾಗಿ ಮಾತನಾಡುವುದು ಸರಿಯಲ್ಲ. ಅವುಗಳ ಬಗ್ಗೆ ನಮ್ಮ ಮಕ್ಕಳು ತಿಳಿದುಕೊಳ್ಳುವುದರಿಂದ ಅವರಿಗೆ ನಮ್ಮ ಸಂಸ್ಕೃತಿಯ ಬಗ್ಗೆ ತಪ್ಪು ಭಾವನೆ ಉಂಟಾಗಿಬಿಡುತ್ತದೆ ಎಂಬ ಕಾರಣದಿಂದ ಇವರಿಗೆ ಇದು ಬೇಕಾಗಿಲ್ಲ. "ನಮ್ಮದು ಜಾತಿ ತಾರತಮ್ಯದಿಂದ ಕೂಡಿರುವ ಸಮಾಜ" ಎಂದು ಯಾರಾದರೂ ಬಹಿರಂಗವಾಗಿ ಹೇಳಿದರೆ ಅವರ ಮೇಲೆ ಗೂಬೆ ಕೂರಿಸುವ ಕೆಲಸವನ್ನು(ದೇಶದ್ರೋಹಿಗಳು, ಎಡಪಂಥೀಯರು, ಭಯೋತ್ಪಾದಕರು-ಇತ್ಯಾದಿ ಇತ್ಯಾದಿ) ಮಾಡುವುದಕ್ಕಾಗಿಯೇ ದೊಡ್ಡ ದಂಡನ್ನು ಬೆಳೆಸುವ ಸಂಘಟನೆಗಳು ನಮ್ಮಲ್ಲಿವೆ.

ನಮ್ಮ ಸಮಾಜದ ಹುಳುಕುಗಳನ್ನು ಮುಚ್ಚಿಟ್ಟುಕೊಂಡು ಅದರ ಮೇಲು ಮೇಲಿನ ರಮ್ಯ ಸಂಗತಿಗಳನ್ನು ವೈಭವೀಕರಿಸುವ ಕೈಂಕರ್ಯದಲ್ಲಿ ಅನೇಕ ಗುಂಪುಗಳು ಮತ್ತು ಸಂಘಗಳು ನಿರತವಾಗಿವೆ. ನಮ್ಮಲ್ಲಿ ಜಾತಿ ವ್ಯವಸ್ಥೆ ಅನ್ನುವುದೇ ಇರಲಿಲ್ಲ ಎಂದು ವಾದಿಸುವ ಫಾರಿನ್ ರಿಟರ್ನ್ ವಿದ್ವಾಂಸರು ಇದ್ದಾರೆ. ಅವರಿಗೆ ನಮ್ಮ ಕೆಲವು ವಿಶ್ವವಿದ್ಯಾಲಯಗಳು ಆಶ್ರಯವನ್ನು ನೀಡುತ್ತಿವೆ. ಈ ರೀತಿಯ ಜಾತಿಗಣತಿ ಬಗೆಗಿನ ವಿರೋಧವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟಸಾಧ್ಯ. ಇವರಿಗೆ ಜಾತಿ ವ್ಯವಸ್ಥೆಯ ಬಗ್ಗೆ, ಅದರ ಒಳಿತು-ಕೆಡುಕುಗಳ ಬಗ್ಗೆ ಮತ್ತು ಅದು ಹುಟ್ಟು ಹಾಕುತ್ತಿರುವ ತಾರತಮ್ಯಗಳ ಬಗ್ಗೆ, ಅಸಹಿಷ್ಣುತೆಯ ಬಗ್ಗೆ ಅರಿವಿದೆ. ಆದರೆ ತಮ್ಮ ಹಿತಾಸಕ್ತಿಗಳನ್ನು ಒಲೈಸುವ ಮತ್ತು ಸಾಮಾಜಿಕ ಅಸಮಾನತೆಯನ್ನು ಊರ್ಜಿತಗೊಳಿಸುವ ಉದ್ದೇಶಕ್ಕೆ ಬದ್ಧವಾಗಿರುವ ಯಾವುದನ್ನು 'ಭಾರತೀಯ ಸಂಸ್ಕೃತಿ' ಎಂದು ಕರೆಯಲಾಗುತ್ತಿದೆಯೋ ಅದರ ಪ್ರತಿಪಾದಕರು, ಅದರ ರಕ್ಷಣೆಗೆ ಕಟಿಬದ್ಧರಾಗಿರುವವರು ಜಾತಿಗಣತಿ ಬಗ್ಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ. ಈಗಿರುವ ಸಾಮಾಜಿಕ ವ್ಯವಸ್ಥೆಯನ್ನು 'ಕುಡಿದ ನೀರು ಅಲುಗಾಡದಂತೆ' ಎಂದು ಹೇಳುತ್ತಾರಲ್ಲ ಹಾಗೆ ಕಾಯ್ದುಕೊಳ್ಳುವ ಪವಿತ್ರ ಕಾರ್ಯಕ್ಕೆ ತಮ್ಮನ್ನು ತಾವು ಕೊಟ್ಟುಕೊಂಡಿರುತ್ತಾರೆ. ಇವರೆಲ್ಲ ಉಳ್ಳವರು, ಹೊಟ್ಟೆ ತುಂಬಿರುವವರು, ತಾರತಮ್ಯವನ್ನು ಮೌಲ್ಯ ಎಂದು ಒಪ್ಪಿಕೊಂಡವರು ಆಗಿರುತ್ತಾರೆ. ಸತ್ಯ ಕಹಿಯಾಗಿರುತ್ತದೆ ಎಂದು ಹೇಳುತ್ತಾರೆ. ಜಾತಿಗಣತಿ ಅನ್ನುವುದು ನಮ್ಮ ಸಮಾಜದ ನಿಜ ಸ್ವರೂಪವನ್ನು ಬಹಿರಂಗ ಪಡಿಸುವುದಕ್ಕೆ ಇರುವ ಒಂದು ವಿದ್ಯಮಾನವಾಗಿದೆ. ಅದು ಸತ್ಯವೋ ಅಲ್ಲವೋ ಅದು ಬೇರೆ ಸಂಗತಿ. ಜಾತಿಗಣತಿಯು ಸಮಾಜಕ್ಕೆ ಅಂಟಿರುವ ಅರ್ಬುದ ರೋಗವನ್ನು ಮಾತ್ರ ತೆರೆದಿಡುವುದಂತೂ ಗ್ಯಾರಂಟಿ.

ಜಾತಿಗಣತಿ: ಏನು, ಏಕೆ, ಹೇಗೆ?

ನಮ್ಮಲ್ಲಿ ನೂರಾರು ಜಾತಿಗಳು, ಪಂಗಡಗಳು, ಉಪಜಾತಿಗಳು ಇವೆ. ಇದು ಸರ್ವ ವೇದ್ಯ. ಆದರೆ ಈ ಜಾತಿಗಳು ಶುದ್ಧ-ಅಶುದ್ಧ ಅನ್ನುವ, ಮುಟ್ಟಿಸಿಕೊಳ್ಳು-ಮುಟ್ಟಿಸಿಕೊಳ್ಳದಿರುವ, ಮೇಲು-ಕೀಳು ಅನ್ನುವ ವರ್ಗೀಕರಣಕ್ಕೆ ಒಳಗಾಗಿವೆ. ಈ ಬಗೆಯ ಜಾತಿಗಳ ನಡುವಿನ ಅಸಮಾನತೆಗಳನ್ನು ಸಾಕ್ಷರತೆ, ಶೈಕ್ಷಣಿಕ ಮಟ್ಟ, ಆಸ್ತಿ ಮಾಲೀಕತ್ವ, ಸಾಮಾಜಿಕ ಸ್ಥಾನಮಾನ ಮುಂತಾದವುಗಳಿಗೆ ಸಂಬಂಧಿಸಿದಂತೆ ಕಾಣಬಹುದಾಗಿದೆ. ಜಾತಿವ್ಯವಸ್ಥೆ ಅನ್ನುವುದು ನಮ್ಮಲ್ಲಿ ಇಲ್ಲ-ಇರಲಿಲ್ಲ ಅನ್ನುವುದಾದರೆ ಕರ್ನಾಟಕದಲ್ಲಿ ದಲಿತೇತರರ ಸಾಕ್ಷರತಾ ಪ್ರಮಾಣ ಶೇ. 78 ಮೀರಿದ್ದರೆ ಪ.ಜಾ, ಪ.ಪಂ. ಅಲೆಮಾರಿಗಳು, ಲೆಕ್ಕಕ್ಕೆ ಅಥವಾ ಯಾವುದೇ ಗಣತಿಗೆ ಇದುವರೆವಿಗೂ ಒಳಗಾಗದ ಸಮುದಾಯಗಳ ಸಾಕ್ಷರತಾ ಪ್ರಮಾಣ ಶೇ. 65ಕ್ಕಿಂತ ಕಡಿಮೆಯೇಕಿದೆ? ಎಲ್ಲರಿಗೂ ಒಂದೇ ಬಗೆಯ ಶಾಲೆಗಳಲ್ಲಿ ಅಕ್ಷರ ಕಲಿಸಲಾಗುತ್ತಿದೆ. ಆದರೆ ಕೆಲವು ಜಾತಿ ಸಮುದಾಯಗಳ ಸಾಕ್ಷರತೆ ಕೆಳಮಟ್ಟದಲ್ಲಿದೆ, ಏಕೆ? ಈ ಅಸಮಾನತೆಗೆ ಕಾರಣವೇನು?



ಕರ್ನಾಟಕದ ದಲಿತೇತರರಲ್ಲಿ ದುಡಿಮೆಗಾರರ ಸಂಖ್ಯೆ 207.54 ಲಕ್ಷವಾದರೆ ದಲಿತರಲ್ಲಿ ಅವರ ಸಂಖ್ಯೆ 71.18 ಲಕ್ಷ. ದಲಿತೇತರ ದುಡಿಮೆಗಾರರಲ್ಲಿ ಭೂರಹಿತ ದಿನಗೂಲಿ ದುಡಿಮೆಗಾರರ ಸಂಖ್ಯೆ 41.58 ಲಕ್ಷ ಮತ್ತು ದಲಿತ ದುಡಿಮೆಗಾರರಲ್ಲಿ ಭೂರಹಿತ ದಿನಗೂಲಿ ದುಡಿಮೆಗಾರರ ಸಂಖ್ಯೆ 29.70 ಲಕ್ಷ(2011ರ ಜನಗಣತಿ). ಅಂದರೆ ದಲಿತೇತರ ದುಡಿಮೆಗಾರರಲ್ಲಿ ಭೂರಹಿತ ದಿನಗೂಲಿ ದುಡಿಮೆಗಾರರ ಪ್ರಮಾಣ ಶೇ 20.16ರಷ್ಟಿದ್ದರೆ ದಲಿತರಲ್ಲಿ ಅವರ ಪ್ರಮಾಣ ಶೇ41.50ರಷ್ಟಿದೆ. ನಮ್ಮ ಸಮಾಜದಲ್ಲಿ ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಅಸಮಾನತೆಗೆ ಇದಕ್ಕಿಂತ ಮಿಗಿಲಾದ ಮತ್ತಾವುದೇ ಪುರಾವೆಯ ಅಗತ್ಯವಿಲ್ಲ. ಕೂಲಿಕಾರರಿಗೆ ಸಂಬಂಧಿಸಿದಂತೆ ದಲಿತರು ಮತ್ತು ದಲಿತೇತರರಲ್ಲಿ ಶೇ 21 ಅಂಶಗಳಷ್ಟು ಅಂತರವಿದೆ. ಏಕೆ? ಈ ಬಗೆಯ ಅಸಮಾನತೆಯ ಆಳ-ಅಗಲ, ಅದರ ಸಾಮಾಜಿಕ ಸ್ವರೂಪ, ಆರ್ಥಿಕ ನೆಲೆಗಳನ್ನು ನೂರಾರು ಸಣ್ಣ-ಪುಟ್ಟ ದಾಖಲೆಗೆ ಒಳಗಾಗದ ಜಾತಿಗಳಿಗೆ ಸಂಬಂಧಿಸಿದಂತೆ ತಿಳಿದುಕೊಳ್ಳುವುದು ಜಾತಿಗಣತಿಯ ಪ್ರಧಾನ ಉದ್ದೇಶವಾಗಿದೆ. ಇದಕ್ಕೆ ವಿರೋಧ ಅನ್ನುವುದು ಕೇವಲ ಟೀಕೆಗೆ ಮಾತ್ರ ಅರ್ಹವಾದುದಲ್ಲ, ಇದೊಂದು ಅಮಾನವೀಯ ರಾಜಕಾರಣ. ನಮ್ಮ ಸಮಾಜದಲ್ಲಿ ಅಸಹಿಷ್ಣುತೆ ಅನ್ನುವುದು ಇಲ್ಲ ಎಂದು ಹೇಳುವವರು 'ಜಾತಿಗಣತಿ ಬಗೆಗಿನ ವಿರೋಧಕ್ಕಿಂತ ಹೆಚ್ಚಿನ ಅಸಹಿಷ್ಣುತೆ ಮತ್ತೊಂದಿರಲು ಸಾಧ್ಯವಿಲ್ಲ' ಎಂಬುದನ್ನು ತಿಳಿದುಕೊಳ್ಳಬೇಕು.

ಜಾತಿಗಣತಿಯು ಜಾತಿ-ಜಾತಿಗಳ-ಉಪಜಾತಿಗಳ ನಡುವೆ ಸಂಘರ್ಷಕ್ಕೆ ಕಾರಣವಾಗುತ್ತದೆ ಎಂಬುದು ಜಾತಿಗಣತಿ ಬಗ್ಗೆ ಇರುವ ಒಂದು ಟೀಕೆ. ಇದರಿಂದ ಸಮಾಜ ಛಿದ್ರ-ಛಿದ್ರವಾಗಿ ಬಿಡುತ್ತದೆ ಎಂಬುದು ಮತ್ತೊಂದು ಟೀಕೆ. ಈಗೇನು ನಮ್ಮ ಸಮಾಜ ಅಖಂಡವಾಗಿದೆಯೇ? ದಲಿತರಿಗೆ ಇರಲಿ, ಎಲ್ಲ ಜಾತಿಗಳ ಮಹಿಳೆಯರಿಗೆ ದೇವಾಲಯ ಪ್ರವೇಶದ ಬಗ್ಗೆ ನಿಷೇಧವನ್ನು ಹೇರುವ ಬಗ್ಗೆ ಉನ್ನತ ಜಾತಿವರ್ಗಗಳು ಚಿಂತಿಸುತ್ತಿವೆ. ಇಂದು ಮನುಷ್ಯರ ಜೀವವು ಪ್ರಾಣಿಗಳಿಗಿಂತ ಕಡೆಯಾಗಿ ಬಿಟ್ಟಿದೆ. ಜಾತಿಗಣತಿಯ ವರದಿಯನ್ನು ಪ್ರಕಟಿಸಿದರೆ ಉಗ್ರ ಹೋರಾಟ ಮಾಡುವುದಾಗಿ ನಮ್ಮ ರಾಜ್ಯದ ಬಹುದೊಡ್ಡ ರಾಜಕೀಯ ಪಕ್ಷದ ನಾಯಕರೊಬ್ಬರು ಎಚ್ಚರಿಕೆ ನೀಡಿದ್ದಾರೆ. ಹಾಗಾದರೆ ನಮ್ಮ ಸಮಾಜದಲ್ಲಿ ಅಸಮಾನತೆ ಅನ್ನುವುದು ಎಲ್ಲಿದೆ, ಎಷ್ಟಿದೆ, ಏಕಿದೆ - ಮುಂತಾದ ಸಂಗತಿಗಳನ್ನು ತಿಳಿದುಕೊಳ್ಳುವುದಕ್ಕೆ ಜಾತಿಗಣತಿ ಬಿಟ್ಟು ಬೇರೆ ಮಾರ್ಗಗಳಾವುವೆ? ಅತ್ಯಂತ ದುಸ್ಥಿತಿಯಲ್ಲಿರುವ ಸಣ್ಣ-ಪುಟ್ಟ ಜಾತಿ ಸಮುದಾಯಗಳಿಗೆ ಅಭಿವೃದ್ಧಿ ನ್ಯಾಯವನ್ನು ಒದಗಿಸುವುದು ಹೇಗೆ?

ಅಸಮಾನತೆ, ಶ್ರೇಣೀಕರಣ, ತಾರತಮ್ಯಗಳಿಂದ ಕೂಡಿರುವ ನಮ್ಮ ಸಮಾಜದಲ್ಲಿ ಕೇಂದ್ರ ಸರ್ಕಾರ ಘೋಷಿಸುತ್ತಿರುವಂತೆ 'ಎಲ್ಲರ ಅಭಿವೃದ್ಧಿಯಲ್ಲಿ ಬಡವರ, ವಂಚಿತರ, ಅಂಚಿನಲ್ಲಿರುವವರ ಅಭಿವೃದ್ಧಿಯೂ ನಡೆಯುತ್ತದೆ' ಎಂಬ ಸೂತ್ರ ನೊಬೆಲ್ ಪ್ರಶಸ್ತಿ ವಿಜೇತ ಜೋಸೆಫ್ ಸ್ಟಿಗ್‌ಲಿಡ್ಜ್ ಹೇಳುವಂತೆ ಎಲ್ಲಿಯೂ ಯಶಸ್ವಿಯಾದ ನಿದರ್ಶನಗಳು ಚರಿತ್ರೆಯಲ್ಲಿ ದೊರೆಯುವುದಿಲ್ಲ. ಅಸಮಾನತೆಯಿಂದ ಕೂಡಿರುವ ಸಮಾಜದಲ್ಲಿ ಸಮಾನತೆಯನ್ನು ಪ್ರಧಾನವಾಗಿಟ್ಟುಕೊಂಡ ಅಭಿವೃದ್ಧಿ ನೀತಿಗಳು ಸಮಾಜದಲ್ಲಿ ಅಸಮಾನತೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತವೆ ವಿನಾ ಅವುಗಳನ್ನು ಕಡಿಮೆ ಮಾಡುವುದಿಲ್ಲ. ಇಂತಹ ಸಮಾಜಗಳಲ್ಲಿ ಪ್ರಸಿದ್ಧ ರಾಜ್ಯಶಾಸ್ತ್ರಜ್ಞ ಜಾನ್ ರಾಲ್ಸ್ ಹೇಳುವಂತೆ 'ಭಿನ್ನತೆಯ ನಿಯಮ' ಅಗತ್ಯ. ಈ ಭಿನ್ನತೆಯ ನಿಯಮವನ್ನು ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಪಾಲಿಸಲು ಜಾತಿಗಣತಿ ಅಗತ್ಯವಾಗಿದೆ. ಜಾತಿಗಣತಿಗೆ ವಿರೋಧವನ್ನು ರಾಜಕೀಯ ಎಂದು ಕರೆಯಲು ಕೂಡ ಬರುವುದಿಲ್ಲ. ಇದೊಂದು ಊಳಿಗಮಾನ್ಯ-ಪಾಳೆಗಾರಿಕೆಯ ಅಭಿವ್ಯಕ್ತಿ-ಅಟ್ಟಹಾಸವಾಗಿದೆ. ಈ ಜಾತಿಗಣತಿ ವರದಿ ಪ್ರಕಟವಾದರೆ ಉಳ್ಳವರು ಸಮಾಜದಲ್ಲಿನ ವರಮಾನ, ಉತ್ಪಾದನೆ, ಆಸ್ತಿ, ಬಂಡವಾಳಗಳ ಮೇಲೆ ಯಾವ ಪ್ರಮಾಣದ ಏಕಸ್ವಾಮ್ಯ ಪಡೆದಿದ್ದಾರೆ ಎಂಬುದು ಮತ್ತು ಇವರಿಗೆ ಹೋಲಿಸಿದರೆ ಕೆಳವರ್ಗಗಳ, ಕೆಳಜಾತಿಗಳ ಅಭಿವೃದ್ಧಿ ಮಟ್ಟ ಎಷ್ಟೊಂದು ಹೀನ-ದೀನ ಸ್ಥಿತಿಯಲ್ಲಿದೆ ಎಂಬುದು ಬಹಿರಂಗಗೊಂಡು ಬಿಡುತ್ತದೋ ಎಂಬ ಭಯವಿರಬಹುದು.

ಉನ್ನತ ಜಾತಿಗಳಲ್ಲೂ ಕೆಳವರ್ಗಗಳಿವೆ!!

ಉನ್ನತ ಜಾತಿಗಳಲ್ಲಿರುವ ಸಣ್ಣ-ಪುಟ್ಟ ಜಾತಿಗಳಲ್ಲಿ ಕಡುಬಡತನವಿರುವುದನ್ನು ಗಮನಿಸಬಹುದು. ಕೆಳಜಾತಿ-ವರ್ಗಗಳಲ್ಲಿ ಕಡುಶ್ರೀಮಂತರಿರಬಹುದು. ಇವೆಲ್ಲ ಅಪವಾದಗಳು ಮಾತ್ರ. ಕೆಳಜಾತಿ-ವರ್ಗಗಳಲ್ಲಿರುವ ಬಡತನವನ್ನು, ಹಸಿವನ್ನು, ಸಾಮಾಜಿಕ ಪ್ರತ್ಯೇಕತನವನ್ನು ಉನ್ನತವರ್ಗ-ಜಾತಿಗಳ ಸ್ಥಿತಿಗತಿಗಳೊಂದಿಗೆ ತುಲನೆ ಮಾಡಲು ಬರುವುದಿಲ್ಲ. ಅಭಿವೃದ್ಧಿ ಅನ್ನುವುದು ಕೇವಲ ವರಮಾನಕ್ಕೆ ಸಂಬಂಧಿಸಿದ ಪ್ರಶ್ನೆಯಲ್ಲ. ಅದು ಘನತೆ-ಗೌರವದಿಂದ ಕೂಡಿರುವ ಬದುಕಿಗೆ ಸಂಬಂಧಿಸಿದ ಸಂಗತಿಯಾಗಿದೆ. ಈ ಘನತೆ-ಗೌರವದ ಬದುಕಿನಿಂದ ಯಾವ ಜಾತಿ-ವರ್ಗಗಳು ವಂಚಿತವಾಗಿವೆ ಅನ್ನುವುದನ್ನು ಕಂಡುಕೊಳ್ಳುವ ಒಂದು ವಿಧಾನ ಜಾತಿಗಣತಿ. ಈ ಜಾತಿಗಣತಿ ಮೂಲಕ ಕಂಡುಕೊಳ್ಳುವ ಫಲಿತಗಳನ್ನು ಆಧಾರವಾಗಿಟ್ಟುಕೊಂಡು ಸರ್ಕಾರಗಳು ತಮ್ಮ ಅಭಿವೃದ್ಧಿ ನೀತಿಯನ್ನು ರೂಪಿಸಿಕೊಳ್ಳಬಹುದು. ಉನ್ನತ ವರ್ಗಗಳ, ಸಾಂಸ್ಕೃತಿಕ ಸಾಮ್ರಾಜ್ಯಶಾಹಿಗಳಂತೆ ನಡೆದುಕೊಳ್ಳುತ್ತಿರುವ ಭಾರತೀಯ ಸಂಸ್ಕೃತಿಯ ಕಾವಲುಪಡೆಗಳ ವರಮಾನದ ಏರಿಕೆಯ ಪ್ರಮಾಣವನ್ನು ಕಡಿತಗೊಳಿಸಿ, ಕೆಳವರ್ಗ-ಜಾತಿಗಳ ವರಮಾನದ ಏರಿಕೆಯ ಪ್ರಮಾಣವನ್ನು ತೀವ್ರಗೊಳಿಸುವ ಕ್ರಮಗಳನ್ನು ಅಳವಡಿಸಿಕೊಳ್ಳಲು ಜಾತಿಗಣತಿ ವರದಿ ಅಗತ್ಯವಾಗಿದೆ. ಈ ರೀತಿಯ ಭಿನ್ನ ನೀತಿಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಅನಾದಿಕಾಲದಿಂದ ಹರಿದುಕೊಂಡು ಬರುತ್ತಿರುವ ಜಾತಿ ಆಧಾರಿತ ತಾರತಮ್ಯಗಳು, ಅಸಮಾನತೆಗಳು, ಅಸಹಿಷ್ಣುತೆ ಮುಂತಾದವುಗಳನ್ನು ತೊಡೆದು ಹಾಕಬಹುದು.

ನಮ್ಮಲ್ಲಿ ತಾರತಮ್ಯಗಳು ಹೇಗೆ ಶಾಸನಾತ್ಮಕವಾಗಿ ಹರಿಯುತ್ತಿವೆ ಅನ್ನುವುದಕ್ಕೆ ನಮ್ಮ ಅಲ್ಪಸಂಖ್ಯಾತ ಜನವರ್ಗಗಳ ಸ್ಥಿತಿಗತಿಯು ಸಾಕ್ಷಿಯಾಗಬಲ್ಲದು. ನಮ್ಮ ಸಮಾಜದಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಸರಿಸುಮಾರು ಶೇ. 14ರಷ್ಟಿರುವ ಅಲ್ಪಸಂಖ್ಯಾತರ ಬಗ್ಗೆ ಜನಗಣತಿಯಲ್ಲಿ ಅವಕಾಶ ನೀಡಿಲ್ಲ. ಅಲ್ಪಸಂಖ್ಯಾತ ಸಮುದಾಯ ಅನ್ನುವುದು ಅಖಂಡವಾದುದೇನಲ್ಲ. ಅದರೊಳಗೆ ಅನೇಕ ಸಣ್ಣ-ಪುಟ್ಟ ದುಸ್ಥಿತಿಯನ್ನು ಹೇಳಿಕೊಳ್ಳಲು ಸಾಧ್ಯವಿಲ್ಲದಷ್ಟು ಅಭದ್ರತೆ-ಅಸಹಾಯಕತೆ, ವಿಕಲತೆ ಎದುರಿಸುತ್ತಿರುವ ಜಾತಿ-ಒಳಜಾತಿಗಳಿವೆ. ಜಾತಿಗಣತಿ ಮೂಲಕ ಇಂತಹ ಅಲ್ಪಸಂಖ್ಯಾತ ಸಮುದಾಯಗಳ ಒಳಸಮಸ್ಯೆಗಳನ್ನು ತಿಳಿದುಕೊಳ್ಳಲು ಇದೊಂದು ಸಾಧನವಾಗಿದೆ. ಜಾತಿಗಣತಿ ಅನ್ನುವುದು ಸಾಮಾಜಿಕ ಭದ್ರತೆಯನ್ನು ಇನ್ನಷ್ಟು ಗಟ್ಟಿಗೊಳಿಸುವ ಕ್ರಮವೇ ವಿನಾ ಸಾಂಸ್ಕೃತಿಕ ಸಾಮ್ರಾಜ್ಯಶಾಹಿಗಳು ಅಬ್ಬರಿಸುತ್ತಿರುವಂತೆ ಸಾಮಾಜಿಕ ಭದ್ರತೆಯನ್ನು ಸಡಿಲಗೊಳಿಸುವ ಕ್ರಮವಲ್ಲ.

ಜಾತಿಗಣತಿ ಅನ್ನುವುದು ಜಾತಿ ವಿನಾಶದ ಒಂದು ಕ್ರಮವಾಗಿದೆ. ಇದರ ಬಗ್ಗೆ ಅಣಕವಾಡುವುದು ಸುಲಭ. ಆದರೆ ಇದೊಂದು ಕಟುಸತ್ಯ. ದಲಿತರಿಗೆ, ಹಿಂದುಳಿದವರಿಗೆ ನೀಡಿರುವ ಸಂವಿಧಾನಾತ್ಮಕ ಮೀಸಲಾತಿ ಏಳು ದಶಕಗಳು ತುಂಬಿಲ್ಲ. ಅನೇಕ ಶತಮಾನಗಳ ಕಾಲ ಸಾಂಸ್ಕೃತಿಕ ಮೀಸಲಾತಿಯನ್ನು ಅನುಭವಿಸಿಕೊಂಡು ಬರುತ್ತಿರುವ ಜಾತಿ-ವರ್ಗಗಳು, ಆಗಲೇ ಅದರ ಬಗ್ಗೆ ಪ್ರಚ್ಛನ್ನವಾಗಿ ಉನ್ನತ ವರ್ಗ, ಶುದ್ಧತೆ ಬಗ್ಗೆ ಜಾಗೃತಿಯಾಗಿರುವ ವರ್ಗ ವಿರೋಧವನ್ನು ಹುಟ್ಟು ಹಾಕುತಿವೆ. ಮೀಸಲಾತಿಯನ್ನು ಮರುಪರಿಶೀಲಿಸಬೇಕು ಎಂಬ ಕರೆಯ ಹಿಂದಿರುವುದು ಈ ಬಗೆಯ ಕುತಂತ್ರವಾಗಿದೆ. ಮೀಸಲಾತಿಯನ್ನು ಪಡೆದವರ ಮನಸ್ಸಿನಲ್ಲಿಯೇ ಅದರ ಬಗ್ಗೆ ಅನುಮಾನಗಳು ಹುಟ್ಟುವಂತೆ ಮಾಡಲಾಗುತ್ತಿದೆ. ಅಲ್ಪಸಂಖ್ಯಾತರ ಆಹಾರ ಸಂಸ್ಕೃತಿಯನ್ನು ತಿರಸ್ಕರಿಸುವಂತೆ ಹಿಂಸೆಯ ಮೊರೆ ಹೋಗಿರುವವರ ಮುಂದಿನ ಗುರಿ ದಲಿತರ ಆಹಾರ ಸಂಸ್ಕೃತಿಯಾಗಿದೆ. ದಲಿತರಿಗೆ ಒಂದು ಬಗೆಯಲ್ಲಿ ಪಾಠ ಕಲಿಸುವ ತಂತ್ರಕ್ಕೆ ದೇಶದ ವಿವಿಧ ಭಾಗಗಳಲ್ಲಿ ಚಾಲನೆ ನೀಡಲಾಗಿದೆ.

ಈ ಎಲ್ಲ ಬಗೆಯ ಸಾಂಸ್ಕೃತಿಕ ದಬ್ಬಾಳಿಕೆಯ, ಅಟ್ಟಹಾಸದ ವಿರುದ್ಧ ಹೋರಾಟ ನಡೆಸಬೇಕಾಗಿದೆ. ಅದಕ್ಕಾಗಿ ನಮಗೆ ಸಂವಿಧಾನವಾಗಲಿರುವ ಜಾತಿಗಣತಿ ವರದಿಯನ್ನು ಪ್ರಕಟಿಸುವಂತೆ ಸರ್ಕಾರದ ಮೇಲೆ ಒತ್ತಾಯ ಹೇರಬೇಕಾಗಿದೆ. ಕೇವಲ ಅದನ್ನು ಪ್ರಕಟಿಸಲು ಮಾತ್ರವಲ್ಲ, ಅದರ ಒಳನೋಟಗಳನ್ನು ಆಧಾರವಾಗಿಟ್ಟುಕೊಂಡು ಅಭಿವೃದ್ಧಿ ನೀತಿಗಳನ್ನು ಅಳವಡಿಸಿಕೊಳ್ಳುವಂತೆ ಜನಾಭಿಪ್ರಾಯ ಸಂಘಟಿಸುವ ಅಗತ್ಯವಿದೆ.

ರಕ್ಷಣಾ ಉತ್ಪಾದನೆಯ ಖಾಸಗೀಕರಣ

ಸಾರ್ವಭೌಮತೆ ಮತ್ತು ರಾಷ್ಟ್ರೀಯ ಅಭಿವೃದ್ಧಿಗೆ ಕುತ್ತು



ರಕ್ಷಣಾ ಉತ್ಪಾದನೆಯ ಖಾಸಗೀಕರಣ ಭಾರತದಲ್ಲಿಯೂ ಅಮೆರಿಕಾ ಮಾದರಿಯ 'ಮಿಲಿಟರಿ ಕೈಗಾರಿಕಾ ಕೂಟ'ದ ಉದಯ-ಕ್ಕೆ ಕಾರಣವಾಗಿ ಹೆಚ್ಚೆಚ್ಚು ಶಸ್ತ್ರಾಸ್ತ್ರಗಳು ಮತ್ತು ಆಕ್ರಮಣಕಾರಿ ರಾಷ್ಟ್ರೀಯ ಸಂಕುಚಿತವಾದದ ಬೇಡಿಕೆಗೆ ಕುಮ್ಮಕ್ಕು ಕಲ್ಪಿಸುತ್ತದೆ. ಅದು ರಾಷ್ಟ್ರೀಯ ಅಭಿವೃದ್ಧಿಯ ಆದ್ಯತೆಗಳನ್ನೇ ವಿಕೃತಗೊಳಿಸಲಿದೆ ಹಾಗೂ ಸಾಮಾಜಿಕ ಕಲ್ಯಾಣವನ್ನು ಅಪಾಯಕ್ಕೆ ಸಿಲುಕಿಸಲಿದೆ.



ಪ್ರಕಾಶ ಕಾರಟ್

ದೇಶದಲ್ಲಿನ ರಕ್ಷಣಾ ಉತ್ಪಾದನೆ ಪ್ರಕ್ರಿಯೆಯ ಖಾಸಗೀಕರಣಕ್ಕೆ ಮುನ್ನುಡಿ ಬರೆಯಲು ಮೋದಿ ಸರಕಾರ ಮುಂದಾಗಿದೆ. ರಕ್ಷಣಾ ಉತ್ಪಾದನೆ ಮತ್ತು ಉನ್ನತ ತಂತ್ರಜ್ಞಾನದ ಶಸ್ತ್ರಾಸ್ತ್ರಗಳ ತಯಾರಿ-ಕೆಗೆ ಮುಂದೆ ಬರುವಂತೆ ಅದು ವಿದೇಶಿ ಮತ್ತು ಭಾರತೀಯ ಖಾಸಗಿ ಕಂಪೆನಿಗಳಿಗೆ ಆಹ್ವಾನ ನೀಡುತ್ತಿದೆ. ಇದು ದೇಶದ ಸಾರ್ವಭೌಮತೆ ಮತ್ತು ದೇಶದ ಭವಿಷ್ಯದ ಹಾದಿಯಲ್ಲಿ ಭಾರೀ ದುಷ್ಪರಿಣಾಮಗಳನ್ನು ಬೀರಲಿದೆ.

ರಕ್ಷಣಾ ಉತ್ಪಾದನೆಯ ತನ್ನ ಹೊಸ ನೀತಿಯನ್ನು ರಕ್ಷಣಾ ಖಾತೆ ಅಂತಿಮಗೊಳಿಸಿದೆ. ದೇಶೀಯ ಭಾರತೀಯ ಕಂಪೆನಿಗಳಿಂದ ಆರು ವ್ಯೂಹಾತ್ಮಕ ಪಾಲುದಾರ(ಎಸ್‌ಪಿ)ರನ್ನು ಗುರುತಿಸಲು ಅದು ನಿರ್ಧರಿಸಿದೆ. ಈ ಕಂಪೆನಿಗಳು ಭಾರತದಲ್ಲಿ ರಕ್ಷಣಾ ಉತ್ಪಾದನೆ ಸಂಸ್ಥೆಗಳನ್ನು ಕಟ್ಟುವ ನಿಟ್ಟಿನಲ್ಲಿ ವಿದೇಶಿ ಶಸ್ತ್ರಾಸ್ತ್ರ ಕಂಪೆನಿಗಳೊಂದಿಗೆ ಭಾಗೀದಾರಿಕೆ ನಿರ್ವಹಿಸಲಿವೆ.

ಹೊಸ ನೀತಿಯು ಖಾಸಗೀ ವಲಯದ ವ್ಯೂಹಾತ್ಮಕ ಭಾಗೀದಾರರಿಗೆ ರಕ್ಷಣಾ ಉತ್ಪಾದನೆಯಲ್ಲಿ ನಾಲ್ಕು ವಿಭಾಗಗಳನ್ನು ತೆರೆದು ಕೊಡುವ ಯೋಚನೆ ಹೊಂದಿದೆ. ಅವೆಂದರೆ ಹೆಲಿಕಾಪ್ಟರ್, ಏಕ ಎಂಜಿನ್ ಯುದ್ಧ ವಿಮಾನ, ಜಲಾಂತರ್ಗಾಮಿಗಳು ಮತ್ತು ಶಸ್ತ್ರಸಜ್ಜಿತ ಯುದ್ಧ ವಾಹನಗಳು.

ಟಾಟಾ ಗ್ರೂಪ್, ರಿಲಯನ್ಸ್ ಇಂಡಿಯಾ ಲಿಮಿಟೆಡ್, ರಿಲಯನ್ಸ್ ಎಡಿಎಜಿ, ಮಹೀಂದ್ರಾ ಗ್ರೂಪ್, ಲಾರ್ಸನ್ ಅಂಡ್ ಟೂಬ್ರೊ, ಭಾರತ್ ಫೋರ್ಜ್ ಮತ್ತು ಅಶೋಕ್ ಲೈಲ್ಯಾಂಡ್-ಹಿಂದುಜಾ ಗ್ರೂಪ್ ಮತ್ತಿತರ ಕೆಲವು ದೊಡ್ಡ ಕಾರ್ಪೊರೇಟ್ ಕಂಪೆನಿಗಳು ಈಗಾಗಲೇ ರಕ್ಷಣಾ ಉತ್ಪಾದನೆ ಕ್ಷೇತ್ರವನ್ನು ಪ್ರವೇಶಿಸಿವೆ. ಈ ಕಂಪೆನಿಗಳ ಪೈಕಿ ಆರನ್ನು ಆರಂಭಿಕ ವ್ಯೂಹಾತ್ಮಕ ಪಾಲುದಾರ ಕಂಪೆನಿಗಳನ್ನಾಗಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ರಕ್ಷಣಾ ಉತ್ಪಾದನೆಯಲ್ಲಿ ಶೇಕಡಾ 100ರಷ್ಟು ವಿದೇಶಿ ನೇರ ಬಂಡವಾಳ ಹೂಡಲು ಅವಕಾಶ ನೀಡುವುದಾಗಿ ಘೋಷಿಸುವ ಮೂಲಕ ಸರಕಾರ ಈ ಕ್ಷೇತ್ರದ ಖಾಸಗೀಕರಣದ ನೀಲನಕ್ಷೆಯನ್ನು ಸಿದ್ಧಪಡಿಸಿದೆ. ರಕ್ಷಣಾ ಉತ್ಪಾದನೆಯ ಸ್ವದೇಶೀಕರಣದ ಹೆಸರಿನಲ್ಲಿ, ಜಂಟಿ ಉತ್ಪಾದನಾ ಸಂಸ್ಥೆಗಳನ್ನು ಸ್ಥಾಪಿಸಲು ದೇಶೀಯ ಕಂಪೆನಿಗಳು ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳ ಜೊತೆ ಕೈಜೋಡಿಸಲು ಅವಕಾಶ ಕಲ್ಪಿಸಲಾಗಿದೆ.

ಪ್ರಸಕ್ತ ಬಹುತೇಕ ರಕ್ಷಣಾ ಉತ್ಪಾದನೆಯನ್ನು ಸಾರ್ವಜನಿಕ ರಂಗದ ಉದ್ದಿಮೆಗಳು ಮತ್ತು ಯುದ್ಧ ಸಾಮಗ್ರಿಗಳ ಕಾರ್ಖಾನೆಗಳು ನಡೆಸುತ್ತಿವೆ. ಸಾರ್ವಜನಿಕ ರಂಗಕ್ಕೆ ಮೀಸಲಾದ ಉತ್ಪಾದನೆಯ ಶೇಕಡಾ 60ರಿಂದ 70ರಷ್ಟಕ್ಕೆ ಸರಕಾರವು ಪರವಾನಿಗೆ ತೆಗೆದಿದೆ. ಮೊದಲ ಹಂತದಲ್ಲಿ ರಕ್ಷಾಣಾ ಕ್ಷೇತ್ರದ ಸಾರ್ವಜನಿಕ ರಂಗದ ಉದ್ದಿಮೆ(ಪಿಎಸ್‌ಯು)ಗಳ ಶೇಕಡಾ 25ರಷ್ಟು ವ್ಯವಹಾರವನ್ನು ಖಾಸಗಿಯವರಿಗೆ ವಹಿಸಲು ಸರಕಾರ ಯೋಜಿಸುತ್ತಿದೆ.

ರಕ್ಷಣಾ ಉತ್ಪಾದನೆಯಲ್ಲಿ ಖಾಸಗಿ ವಲಯದ ಪಾತ್ರ ಹೆಚ್ಚುತ್ತಾ ಹೋದಂತೆ ರಕ್ಷಣಾ ಪಿಎಸ್‌ಯುಗಳ ಖಾಸಗೀಕರಣ ಮತ್ತು ಬಂಡವಾಳ ಹಿಂತೆಗೆತ ಪ್ರಕ್ರಿಯೆ ವೇಗ ಜಾಸ್ತಿಯಾಗುತ್ತದೆ. ಇದೇ ಮೊದಲ ಬಾರಿಗೆ ಒಂದು ರಕ್ಷಣಾ ಪಿಎಸ್‌ಯುವನ್ನು ಅಂ-ದರೆ ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್ (ಬೆಮೆಲ್) ಅನ್ನು ಖಾಸಗಿಯವರಿಗೆ ಶೇಕಡಾ 26 ಶೇರನ್ನು 'ವ್ಯೂಹಾತ್ಮಕ ಮಾರಾಟ' ಮಾಡುವ ಮೂಲಕ ಖಾಸಗೀಕರಿಸಲಾಗುತ್ತಿದೆ. ಬೆಮೆಲ್ ಸಾರ್ವಜನಿಕ ರಂಗದ ಅತಿ ದೊಡ್ಡ ರಕ್ಷಣಾ ಉತ್ಪಾದನೆ ಸಂಸ್ಥೆಗಳಲ್ಲಿ ಒಂದಾಗಿದೆ. ಈ ಪ್ರಮುಖ ಸಂಸ್ಥೆಯನ್ನು ಖಾಸಗಿಯವರಿಗೆ ಒಪ್ಪಿಸುವುದರಿಂದ ಭಾರತದಲ್ಲಿ ಅಪಾರ ಆದಾಯ ತರುವ ಶಸ್ತ್ರಾಸ್ತ್ರ ಉತ್ಪಾದನೆ



ಅಮೆರಿಕಾದ ಮಿಲಿಟರಿ-ಕೈಗಾರಿಕಾ ಕೂಟದ ಬಗ್ಗೆ ಇನ್ನೊಂದು ಅಮರಿಕನ್ ವ್ಯಂಗ್ಯಚಿತ್ರ. ಈ ಗೂಳಿಯ ಹೊಟ್ಟೆ ತುಂಬಿಸಲು ಎಲ್ಲೆಲ್ಲ ಕಡಿತ ಮಾಡಬೇಕು ಎಂದು ತಲೆಕಡಿಸಿಕೊಳ್ಳುತ್ತಿರುವ ಅಮೆರಿಕಾದ ರಾಜಕೀಯ ಪಕ್ಷಗಳು

ವಲಯ ನಿಮಗಾಗಿ ಮುಕ್ತವಾಗಿದೆ ಎಂದು ವಿದೇಶಿ ಮತ್ತು ದೇಶೀಯ ಖಾಸಗಿ ಶಸ್ತ್ರಾಸ್ತ್ರ ಉತ್ಪಾದಕರಿಗೆ ಸಂದೇಶ ರವಾನಿಸಿದಂತಾಗುತ್ತದೆ.

ರಕ್ಷಣಾ ಉತ್ಪಾದನೆ ವಲಯದ ಖಾಸಗೀಕರಣ ವಿಚಾರ ಬಂದಾಗ ರಾಷ್ಟ್ರೀಯ ಸಾರ್ವಭೌಮತೆಯ ವಿಷಯ ಬಹಳಷ್ಟು ಪ್ರಸ್ತುತವಾಗುತ್ತದೆ. ಭಾರತ-ಅಮೆರಿಕ ಮಿಲಿಟರಿ ಒಡಂಬಡಿಕೆ ಮತ್ತು ಅಮೆರಿಕದೊಂದಿಗೆ ಮಾಡಿಕೊಳ್ಳಲಾದ ಸಮರಸಾಗಾಣಿಕೆ ವಿನಿಮಯ ಒಪ್ಪಂದದ ಹಿನ್ನೆಲೆಯಲ್ಲಿ ವಿದೇಶಿ ಶಸ್ತ್ರಾಸ್ತ್ರ ಉತ್ಪಾದಕರ ಪ್ರವೇಶವನ್ನು ನೋಡಬೇಕಾಗುತ್ತದೆ. ಅಮೆರಿಕ ಮತ್ತು ಭಾರತೀಯ ಸಶಸ್ತ್ರ ಪಡೆಗಳನ್ನು ತೆಕ್ಕೆ ಹಾಕಿರುವುದು ಮತ್ತು ಅವುಗಳ 'ಅಂತರ್‌ಕಾರ್ಯಾಚರಿಸುವಿಕೆ'ಯು (ಇಂಟರ್-ಆಪರೆಬಿಲಿಟಿ) ದೇಶದಲ್ಲಿನ ರಕ್ಷಣಾ ಉತ್ಪಾದನೆಯ ವಿಧಾನವನ್ನು ನಿರ್ಧರಿಸಲಿದೆ. ಈ ಪ್ರಕ್ರಿಯೆಯಲ್ಲಿ ಭಾರತ ಮತ್ತು ವಿದೇಶೀ ದೊಡ್ಡಕಾರ್ಪೊರೇಟ್‌ಗಳನ್ನು ಒಳಗೊಳ್ಳಲಾಗುತ್ತದೆ.

ಎಡಿಎಜಿ ರಿಲಯನ್ಸ್ ಡಿಫೆನ್ಸ್ ಅಂಡ್ ಎಂಜಿನಿಯರಿಂಗ್ ಕಂಪೆನಿಯು ಪಿಪವಾವ್‌ನ್ಲಿರುವ ತನ್ನ ಹಡಗುಕಟ್ಟೆಯಲ್ಲಿ ಅಮೆರಿಕದ ಏಳನೇ ನೌಕಾ ವಿಭಾಗದ ಯುದ್ಧ ನೌಕೆಗಳ ರಿಪೇರಿ ಮತ್ತು ನಿರ್ವಹಣಾ ಸೇವೆಗೆ ಸಂಬಂಧಿಸಿ ಅದಾಗಲೇ ಒಪ್ಪಂದ ಮಾಡಿಕೊಂಡಿದೆ. ಇದು ಸಮರಸಾಗಾಣಿಕೆ ವಿನಿಮಯದ ಒಪ್ಪಂದದ ಅಡಿಯಲ್ಲಿ ಬರುತ್ತದೆ. ಇದರ ಪ್ರಕಾರ ಅಮೆರಿಕದ ಯುದ್ಧ ನೌಕೆಗಳು ನಿರ್ವಹಣೆ ಮತ್ತು ರಿಪೇರಿಗಾಗಿ ಭಾರತದ ಬಂದರುಗಳಲ್ಲಿ ಲಂಗರು ಹಾಕಬಹುದಾಗಿದೆ. ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಅಮೆರಿಕದ ಸಶಸ್ತ್ರ ಪಡೆಗಳೊಂದಿಗೆ ಭಾರತೀಯ ಕಾರ್ಪೊರೇಟ್‌ಗಳು ಕೈಜೋಡಿಸುವುದರಿಂದ ಭಾರತದ ಸಾರ್ವಭೌಮತ್ವದ ಮೇಲೆ ಹಾಗೂ ಪ್ರಮುಖ ರಕ್ಷಣಾ ಹಾಗೂ ಸಮರನೀತಿ ರೂಪೀಕರಣದಲ್ಲಿ ಅತಿಕ್ರಮಣದ ಆತಂಕಕಾರಿ ಪ್ರಶ್ನೆಗಳು ಉದ್ಭವವಾಗುತ್ತವೆ.

ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ದೊಡ್ಡ ಕಾರ್ಪೊರೇಟ್ ಕಂಪೆನಿಗಳ ಪ್ರವೇಶವು ಭಾರತದಲ್ಲಿ ಒಂದು 'ಮಿಲಿಟರಿ ಕೈಗಾರಿಕಾ ಸಂಕೀರ್ಣ' ಸ್ಥಾಪನೆಗೆ ಅಡಿಗಲ್ಲು ಹಾಕುತ್ತದೆ. ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಕಾರ್ಪೊರೇಟ್ ಕಂಪೆನಿಗಳು ದೊಡ್ಡ ಪ್ರಮಾಣದಲ್ಲಿ ಒಳಗೊಳ್ಳುವುದರಿಂದ ಭಾರತದ ರಕ್ಷಣೆ ಮತ್ತು ವಿದೇಶ ನೀತಿಯನ್ನು ರೂಪಿಸುವಲ್ಲಿ ಹೊಸ ಲೆಕ್ಕಾಚಾರಗಳು ಉಂಟಾಗುತ್ತವೆ.

ಅಮೆರಿಕದಲ್ಲಿ ದೊಡ್ಡ ಶಸ್ತ್ರಾಸ್ತ್ರ ತಯಾರಕರು-ಸಶಸ್ತ್ರ ಪಡೆಗಳು-ಸರಕಾರದ ಕೂಟವು ಮಿಲಿಟರಿಶಾಹಿ ಮತ್ತು ಅಮೆರಿಕದ ಆಕ್ರಮಣಕಾರಿ ಯುದ್ಧಗಳಿಗೆ ಇಂಬು ನೀಡುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಭಾರತ ಕೂಡ ಅದೇ ರೀತಿಯ ವಿಧಾನವನ್ನು ಅಳವಡಿಸಿಕೊಳ್ಳುವುದರಿಂದ ಹೆಚ್ಚೆಚ್ಚು ಶಸ್ತ್ರಾಸ್ತ್ರಗಳು ಮತ್ತು ಆಕ್ರಮಣಕಾರಿ ರಾಷ್ಟ್ರೀಯ ಸಂಕುಚಿತವಾದದ ಬೇಡಿಕೆಗೆ ಕುಮ್ಮಕ್ಕು ಕಲ್ಪಿಸುತ್ತದೆ. ಈ ರೀತಿಯಾಗಿ ಭಾರತದಲ್ಲಿ ರಕ್ಷಣಾ ಉತ್ಪಾದನೆಯ ಖಾಸಗೀಕರಣವು ಗಂಭೀರ ದುಷ್ಪರಿಣಾಮಗಳಿಂದ ತುಂಬಿದೆ. ಅದು ರಾಷ್ಟ್ರೀಯ ಅಭಿವೃದ್ಧಿಯ ಆದ್ಯತೆಗಳನ್ನೇ ವಿಕೃತಗೊಳಿಸಲಿದೆ ಹಾಗೂ ಸಾಮಾಜಿಕ ಕಲ್ಯಾಣವನ್ನು ಅಪಾಯಕ್ಕೆ ಸಿಲುಕಿಸಲಿದೆ.

ರಕ್ಷಣಾ ಉತ್ಪಾದನೆಯ ಖಾಸಗೀಕರಣಕ್ಕೆ ತಡೆ ಹಾಕಲೇ ಬೇಕು. ಅದರ ಬದಲು, ತಂತ್ರಜ್ಞಾನದ ಉನ್ನತೀಕರಣ ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿಯನ್ನು ಹೆಚ್ಚಿಸುವ ಮುಖೇನ ಸಾರ್ವಜನಿಕ ವಲಯದಲ್ಲಿ ರಕ್ಷಣಾ ಉತ್ಪಾದನೆಯ ಅವಕಾಶವನ್ನು ವಿಸ್ತರಿಸುವ ಮೂಲಕ ರಕ್ಷಣಾ ಉತ್ಪಾದನೆಯ ಸ್ವದೇಶೀಕರಣ ನಡೆಯಬೇಕಾಗಿದೆ. **ಅನು:ವಿಶ್ವ**

ಅಧಿಕಾರದ ಮೂರು ವರ್ಷಗಳು ಮುಗಿಯುತ್ತಿರುವಾಗ ದೇಶ ಮತ್ತು ಜನತೆಯ ಮೇಲೆ ನಾಲ್ಕು ನಿಟ್ಟಿನಿಂದ ಪ್ರಹಾರ



ಸೀತಾರಾಮ್ ಯೆಚುರಿ

ಬಿಜೆಪಿ ಸರಕಾರ ಅಧಿಕಾರದಲ್ಲಿ ಮೂರು ವರ್ಷಗಳನ್ನು ಪೂರೈಸಿದ್ದನ್ನು ತನ್ನ ಟ್ರೇಡ್‌ಮಾರ್ಕ್ ಆಡಂಬರದೊಂದಿಗೆ ವೈಭವೋಪೇತವಾಗಿ ಆಚರಿಸುತ್ತಿದೆ. ವಾಸ್ತವವಾಗಿ ಬಹುಪಾಲು ಭಾರತೀಯ ಜನತೆಯ ದೃಷ್ಟಿಯಿಂದ ನೋಡಿದರೆ ಇಂತಹ ಆಚರಣೆಯ ಸಂದರ್ಭ ಏನೂ ಇಲ್ಲ. ಏಕೆಂದರೆ ಭಾರತೀಯ ಜನತೆಯ ಬದುಕು ಈ ಮೂರು ವರ್ಷಗಳಲ್ಲಿ ತೀವ್ರವಾಗಿ ಹದಗೆಟ್ಟಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಅಡಿಯಲ್ಲಿ ಈ ಬಿಜೆಪಿ ಸರಕಾರ ತನ್ನ ಪಕ್ಷದ ನಿಜವಾದ ಚಾರಿತ್ರ್ಯವನ್ನು , ಅಂದರೆ ಅದು ಆರೆಸ್ಸೆಸ್‌ನ ರಾಜಕೀಯ ಅಂಗ ಎಂಬುದನ್ನು ಅನಾವರಣಗೊಳಿಸಿದೆ. ನಮ್ಮ ಜಾತ್ಯತೀತ ಪ್ರಜಾಸತ್ತಾತಕ ಗಣರಾಜ್ಯವನ್ನು ಒಂದು ಉನ್ನತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವ ತನ್ನ ಸೈದ್ಧಾಂತಿಕ ಯೋಜನೆಯನ್ನು ಅನುಸರಿಸುತ್ತಿದೆ.

ಈ ಪ್ರಕ್ರಿಯೆಯಲ್ಲಿ ಸರಕಾರ ಭಾರ ಮತ್ತು ಇಲ್ಲಿಯ ಜನತೆಯ ಮೇಲೆ ನಾಲ್ಕು ನಿಟ್ಟಿನ ದಾಳಿಯನ್ನು ಹರಿಯ ಬಿಟ್ಟಿದೆ.

ಒಂದು ಮಟ್ಟದಲ್ಲಿ ಕೋಮುವಾದಿ ಧ್ರುವೀಕರಣದಲ್ಲಿ ತೀಕ್ಷ್ಣ ಏರಿಕೆಯಾಗಿದೆ, ದಲಿತರು ಮತ್ತು ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದ ಮೇಲೆ ಕೊಲೆಗಡುಕ ದಾಳಿಗಳು ಹೆಚ್ಚುತ್ತಿವೆ.

ಎರಡನೆಯದಾಗಿ, ನವ-ಉದಾರವಾದಿ ಆರ್ಥಿಕ ಸುಧಾರಣೆಗಳನ್ನು ಹಿಂದೆಂದಿಗಿಂತಲೂ ಆಕ್ರಮಣಕಾರೀ ರೀತಿಯಲ್ಲಿ ಅನುಸರಿಸಲಾಗುತ್ತಿದೆ.

ಮೂರನೆಯದಾಗಿ, ಹೆಚ್ಚುತ್ತಿರುವ ಸರ್ವಾಧಿಕಾರಶಾಹಿ ಪ್ರವೃತ್ತಿಗಳು ಪ್ರಜಾಪ್ರಭುತ್ವ ಮತ್ತು ಸಂಸದೀಯ ಸಂಸ್ಥೆಗಳನ್ನು ಬುಡಮೇಲು ಮಾಡುತ್ತಿವೆ.

ಮತ್ತು ಕೊನೆಯದಾಗಿ, ಭಾರತವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ ಕಿರಿಯ ಭಾಗೀದಾರನ ಮಟ್ಟಕ್ಕೆ ಇಳಿಸಲಾಗಿದೆ.

ಆದ್ದರಿಂದ ಈ ಮೂರು ವರ್ಷಗಳಲ್ಲಿ ಭಾರತೀಯ ಜನತೆಯ ಮೇಲೆ ಸರ್ವತೋಮುಖ ದಾಳಿಗಳನ್ನು ನೋಡುತ್ತಿದ್ದೇವೆ. ಜನಗಳ ಅಸಂತೃಪ್ತಿ ಬಿಜೆಪಿ ಸರಕಾರ ಮತ್ತು ಅದರ ಧೋರಣೆಗಳ ವಿರುದ್ಧ ಹರಿಹಾಯದಂತೆ ಅದನ್ನು ಹಿಂದುತ್ವ ಮಾದರಿಯ ರಾಷ್ಟ್ರೋನ್ಮಾದ, ಕುಡು ದೇಶಭಕ್ತಿಯತ್ತ ತಿರುಗಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಐಕ್ಯ ಹೋರಾಟಗಳ ಶಕ್ತಿ ಮಾತ್ರವೇ ಸರಕಾರ ತನ್ನ ಧೋರಣೆಯ ದಿಕ್ಕನ್ನು ಜನಗಳ ಬದುಕನ್ನು ಉತ್ತಮ ಪಡಿಸುವತ್ತ ಮತ್ತು ದೇಶದ ಗಣತಂತ್ರ ಸ್ವರೂಪವನ್ನು ಕಾಯ್ದುಕೊಳ್ಳುವತ್ತ ಬದಲಿಸುವಂತೆ ಒತ್ತಡ ಹಾಕಬಲ್ಲದು ಎಂಬುದನ್ನು ಈ ಮೂರು ವರ್ಷಗಳು ತೋರಿಸಿಕೊಟ್ಟಿವೆ.



ಮೋದಿ ಹಬ್ಬ
ವ್ಯಂಗ್ಯಚಿತ್ರ:
ಸತೀಶ ಆಚಾರ್ಯ

ಮೋದಿ ಸರಕಾರದ ಮೂರು ವಿಫಲ ವರ್ಷಗಳಲ್ಲಿ..

ಪ್ರಧಾನ ಮಂತ್ರಿಗಳು ‘ಅಚ್ಛೇ ದಿನ್’ಗಳ ಆಶ್ವಾಸನೆಗಳನ್ನು ನೀಡಿ ಮೂರು ವರ್ಷಗಳಾಗುತ್ತಿವೆ. ಆ ಆಶ್ವಾಸನೆಗಳೆಲ್ಲ ಎಲ್ಲಿ ಮಾಯವಾದವು ಎಂದು ಜನಗಳು ಆಶ್ಚರ್ಯ ಪಡುತ್ತಿದ್ದರೆ, ಪ್ರಧಾನ ಮಂತ್ರಿಗಳಾದಿಯಾಗಿ ಆಳುವ ಪಕ್ಷದ ಮುಖಂಡರೆಲ್ಲ ಭವಿಷ್ಯದ ಚುನಾವಣೆಗಳನ್ನು ಗೆಲ್ಲುವುದು ಹೇಗೆ ಎಂಬುದರ ಮೇಲೆಯೇ ಗಮನ ಕೇಂದ್ರೀಕರಿಸಿದಂತಿದೆ. ಅದಕ್ಕಾಗಿ ಪ್ರತಿದಿನ ಎಂಬಂತೆ ವಿಐಪಿ ಕಾರುಗಳ ಮೇಲೆ ಕೆಂಪು ದೀಪಗಳನ್ನು ತೆಗೆಯುವುದು ಮುಂತಾದ ಹೊಸ ಹೊಸ ಟ್ರಿಕ್ಕುಗಳು, ಪದಗಳ ಕಸರತ್ತು ನಡೆಯುತ್ತಲೇ ಇವೆ. ಈಗ 15 ದಿನಗಳ ‘ಸಾಧನೆಗಳ ಉತ್ಸವ’ ಆರಂಭವಾಗಿದೆ. ದೇಶದ ಎರಡು ಮುಖ್ಯ ಜನವಿಭಾಗಗಳಾದ ಕಾರ್ಮಿಕರು ಮತ್ತು ರೈತರಿಗೆ ನೀಡಿದ ಆಶ್ವಾಸನೆಗಳ ಗತಿಯೇನಾಗಿದೆ ಎಂಬುದರ ಒಂದು ಪಕ್ಷಿನೋಟವನ್ನು ಕಳೆದ ಸಂಚಿಕೆಯಲ್ಲಿ ನೋಡಿದ್ದಿರಿ. ಇಲ್ಲಿ ಈ ಮೂರು ವರ್ಷಗಳ ಕೊನೆಯಲ್ಲಿ ಈ ಸರಕಾರದ ಇನ್ನಷ್ಟು ‘ಸಾಧನೆ’ಗಳ ನೋಟ.

ಭೀಕರತೆಯನ್ನು ಸಾಮಾನ್ಯಗೊಳಿಸಿದ್ದೇ ಸಾಧನೆ



ಆಳುವ ಪಕ್ಷದ ‘ಪರಿವಾರ’ದವರು ವಿವಿಧ ಧಾರ್ಮಿಕ ಸಂದರ್ಭಗಳನ್ನು ತಮ್ಮ ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವುದು ಕಂಡು ಬರುತ್ತಿದೆ. ಇದರ ತಕ್ಷಣದ ಉದ್ದೇಶ ಕೋಮುಧ್ರುವೀಕರಣ ತಂದು ಚುನಾವಣೆಗಳಲ್ಲಿ ಪ್ರಯೋಜನ ಪಡೆಯುವುದು ಮತ್ತು ದೀರ್ಘಗಾಮಿ ಉದ್ದೇಶವೆಂದರೆ ಮುಗ್ಧ ಜನಗಳಲ್ಲಿ ದ್ವೇಷ ಮತ್ತು ಹುಸಿ ಹೆಮ್ಮೆಯನ್ನು ಆಧರಿಸಿದ ಹಿಂದೂಧರ್ಮದ ಬ್ರಾಹ್ಮಣವಾದೀ ಆವೃತ್ತಿಯನ್ನು ತೂರಿಸಿ ದೇಶದ ವೈವಿಧ್ಯತೆಯನ್ನು ಧ್ವಂಸ ಮಾಡುವುದು.

ಉತ್ತರಪ್ರದೇಶದ ದಾದ್ರಿಯಲ್ಲಿ ಮಹಮ್ಮದ್ ಅಖ್ಲಾಕ್, ಝಾರ್ಖಂಡ್‌ನ ಲಾತೇಹಾರ್‌ನಲ್ಲಿ ಮಹಮ್ಮದ್ ಮಜ್ಲೂಮ್ ಮತ್ತು 12 ವರ್ಷದ ಇನಾಯತುಲ್ಲ ಖಾನ್, ರಾಜಸ್ತಾನದ ಅಲವರ್‌ನಲ್ಲಿ ಪೆಹಲೂ ಖಾನ್, ಮತ್ತೆ ಕಳೆದ ತಿಂಗಳಷ್ಟೇ ಉತ್ತರ ಪ್ರದೇಶದ ಬುಲಂದ್‌ಶಹರ್‌ನಲ್ಲಿ ಗುಲಾಮ್ ಅಹ್ಮದ್, ಅಸ್ಸಾಂನಲ್ಲಿ ಅಬು ಹನೀಫ, ರಿಯಾಜುದ್ದೀನ್ ಅಲಿ ಮತ್ತು ಕಳೆದ ವಾರವಷ್ಟೇ ಜಂಶೇದ್‌ಪುರದ ‘ಬಳಿ ಇಬ್ಬರು ಪೋಲೀಸ್ ಅಧಿಕಾರಿಗಳು ಮತ್ತು ಅವರ 30 ಸಿಬ್ಬಂದಿಯ ಎದುರೇ ಇನ್ನೂ ನಾಲ್ಕು ಮಂದಿಯನ್ನು ಕೊಚ್ಚಿ ಹಾಕಿದ್ದು.......

ಇದು ಇಲ್ಲಿಗೇ ನಿಲ್ಲುವಂತೆ ಕಾಣುತ್ತಿಲ್ಲ. ಸರಕಾರದ ವಕ್ತಾರರು, ಅವರಿಗೆ ಸಂಬಂಧಪಟ್ಟ ‘ಪರಿವಾರ’ದವರು ಈ ಮೂರು ವರ್ಷಗಳಲ್ಲಿ ಕೋಮುಗಲಭೆಗಳ ಸಂಖ್ಯೆಯೇನೂ ತೀವ್ರವಾಗಿ ಹೆಚ್ಚಿಲ್ಲವಲ್ಲ ಎಂದು ಸವಾಲು ಹಾಕುತ್ತಾರೆ. ಇದು ಭಾಗಶಃ ನಿಜ. ಆದರೆ ಇಲ್ಲಿನ ಕಳವಳಕಾರಿ ಸಂಗತಿಯೆಂದರೆ ಕೋಮುವಾದದ ಸ್ವರೂಪ ಬದಲಾಗಿದೆ. ಈ ಮೇಲಿನ ಪಟ್ಟಿಯೇ ಅದಕ್ಕೆ ಸಾಕ್ಷಿ. ಮೇಲೆ ಹೇಳಿದಂತಹ ಘಟನೆಗಳು ಮತ್ತು ಇಂತಹ, ಇನ್ನೂ ಹಲವಾರು ಘಟನೆಗಳು ‘ಕೋಮು ಗಲಭೆ’ಗಳೆಂದೇ ಪೋಲಿಸ್ ದಾಖಲೆಗಳಲ್ಲಿ ಸೇರುವುದಿಲ್ಲ.


ಈ ಮೂರು ವರ್ಷಗಳಲ್ಲಿ ಕೋಮುವಾದಿ ಶಕ್ತಿಗಳು ತಮ್ಮ ಕಥನದ ಸ್ವರೂಪವನ್ನೇ ಬದಲಿಸುವಲ್ಲಿ ಯಶಸ್ವಿಯಾಗಿವೆ. ಈಗ ಜಾತ್ಯತೀತತೆ ಮತ್ತು ಕೋಮುವಾದದ ಪ್ರಶ್ನೆಯನ್ನು ಹಿಂದಕ್ಕೆ ತಳ್ಳಿ ಗೋರಕ್ಷಣೆ, ಗೋಮಾಂಸ ನಿಷೇಧ, ಘರ್ ವಾಪಸಿ, ರೋಮಿಯೊ-ನಿಗ್ರಹ, ರಾಷ್ಟ್ರದ್ರೋಹ ಇತ್ಯಾದಿ ಘೋಷಣೆಗಳಲ್ಲಿ ಮರೆಮಾಚಿಸುವಲ್ಲಿ ಯಶಸ್ವಿಯಾಗಿವೆ.

ಈ ಪ್ರತಿಯೊಂದು ಭೀಕರ ಘಟನೆ ನಡೆದ ಮೇಲೆ ಮಾಧ್ಯಮಗಳಲ್ಲಿ ಮತ್ತು ಬೇರೆಡೆಗಳಲ್ಲಿ ತೀವ್ರ ವಾದ-ವಿವಾದ ನಡೆಯುತ್ತದೆ, ಆದರೆ ಬೇರೆ ವಿಷಯಗಳಲ್ಲಿ ಬಾಯ್ತುಂಬ ಮಾತಾಡುವ ಪ್ರಧಾನ ಮಂತ್ರಿಗಳು ದಿವ್ಯಮೌನ ತಳೆಯುತ್ತಾರೆ, ಇತರ ಸಂಬಂಧಪಟ್ಟ ಮಂತ್ರಿಗಳೂ, ಸರಕಾರದ ಬೇರೆ ವಕ್ತಾರರೂ ಈ ಘಟನೆಗಳನ್ನು ಖಂಡಿಸುವ ಗೋಜಿಗೆ ಹೋಗುವುದಿಲ್ಲ, ಮೋದಿ ಸರಕಾರ ‘ಸಬ್‌ಕಾ ಸಾಥ್, ಸಬ್ ಕಾ ವಿಕಾಸ್’ನಲ್ಲಿ ನಂಬಿಕೆಯಿಟ್ಟಿದೆ ಎನ್ನುವ ಮಂತ್ರ ಜಪಿಸುತ್ತಾರೆ. ಪೋಲೀಸ್ ಮತ್ತು ಅಧಿಕಾರಶಾಹಿ ಅವರ ಬಾಲ ಹಿಡಿಯುತ್ತಾರೆ.

ಮತ್ತೊಂದು ಕಡೆಯಲ್ಲಿ ಅಷ್ಟೇನೂ ಜಾಣರಲ್ಲದ ಮಂತ್ರಿಗಳು ಈ ಭೀಕರತೆಗಳನ್ನು ಸಮರ್ಥಿಸುತ್ತಾರೆ, ಸಂಘ ಪರಿವಾರದ ಇತರ ಘಟಾನುಘಟಿಗಳಂತೂ ಯಾವುದನ್ನೂ ಲೆಕ್ಕಿಸದೆ ಮನಬಂದಂತೆ ಮಾತಾಡುತ್ತಾರೆ. ಬಿಜೆಪಿಯ ವಕ್ತಾರರು, ಹಿಂದುತ್ವ ಪ್ರಚಾರ ಯಂತ್ರ, ಮುಖ್ಯಧಾರೆಯ ಮಾಧ್ಯಮದ ಒಂದು ವಿಭಾಗ, ಜತೆಗೆ ಸಾಮಾಜಿಕ ಮಾಧ್ಯಮಗಳಲ್ಲಿನ ‘ಟ್ರೋಲ್’ ಪಡೆಗಳು ಎಲ್ಲವೂ ಸೇರಿ ಈ ಘಟನೆಗಳ ಗಂಭೀರತೆಯನ್ನು ಮತ್ತು ಸಹಜ ಆಕ್ರೋಶವನ್ನು ತೇಲಿಸಿ ಬಿಡುವ ಕಥನಗಳಲ್ಲಿ ತೊಡಗುತ್ತಾರೆ. ಭೀಕರ ಸಂಗತಿಗಳನ್ನು ಜನರು ಸಾಮಾನ್ಯ ಸಂಗತಿ ಎಂಬಂತೆ ಸ್ವೀಕರಿಸುವ ವಾತಾವರಣ ಸೃಷ್ಟಿಯಾಗುತ್ತಿದೆ.

“.. ಇವೆಲ್ಲವೂ ದೇಶದ ಸಾಮಾಜಿಕ ಹಂದರವನ್ನು ಕೆಡಿಸುತ್ತಿವೆ, ಮತ್ತು ಇದು ಸಮುದಾಯಗಳ ನಡುವೆ ಸಹ-ಅಸ್ತಿತ್ವದ ಒಟ್ಟಾರೆ ವಾತಾವರಣವನ್ನು ಖಂಡಿತವಾಗಿಯೂ ಕದಡಿಸುತ್ತದೆ. ನಿರ್ದಿಷ್ಟವಾಗಿ ದೇಶಾದ್ಯಂತ ಮುಸ್ಲಿಮ್ ಸಮುದಾಯದಲ್ಲಿ ಅತ್ಯಂತ ಅಭದ್ರತೆ ಮತ್ತು ಸಂದೇಹದ ಹಾಗೂ ಪಾರಂಪರಿಕವಾಗಿ ಶಾಂತಿ ಮತ್ತು ಸಾಮರಸ್ಯದಿಂದ ಬದುಕಿದ್ದ ಸಮುದಾಯಗಳ ನಡುವೆ ಕೋಮು ಸೌಹಾರ್ದವನ್ನು ಕೆಡಿಸುವ ವಾತಾವರಣವನ್ನು ಸೃಷ್ಟಿಸುತ್ತಿದೆ. ಇಂತಹ ವಿಲಕ್ಷಣ ವರ್ತನೆಯನ್ನು ಸಹಿಸುವುದೂ ಇಲ್ಲ, ಅದನ್ನು ಶಿಕ್ಷಿಸದೆ ಬಿಡುವುದೂ ಇಲ್ಲ ಹಾಗೂ ಏನೇ ಆಗಲಿ, ಪ್ರಭುತ್ವ ಭಾರತದ ಜಾತ್ಯತೀತ ಸ್ವರೂಪವನ್ನು ರಕ್ಷಿಸುತ್ತದೆ ಎಂಬ ಬಲವಾದ ಸಂದೇಶ ಸರಕಾರದ ಅತ್ಯುನ್ನತ ವಲಯಗಳಿಂದ ಬರುವ ಅಗತ್ಯವಿದೆಯೆಂಬುದು ನಮ್ಮ ಬಲವಾದ ನಂಬಿಕೆ” ಎಂದು 2016ರಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು ಕೇಂದ್ರ ಗೃಹಮಂತ್ರಿಗಳಿಗೆ ಬರೆದ ಪತ್ರದಲ್ಲಿ ಆಗ್ರಹಿಸಿದ್ದರು. ಆದರೆ ಗುಜರಾತಿನ ಉನಾದಲ್ಲಿ ಸ್ವಯಂಘೋಷಿತ ಗೋರಕ್ಷಕರು ದಲಿತರ ಮೇಲೆ ಮಾಡಿದ ಹಲ್ಲೆಯನ್ನು ಮೋದಿಯವರು ಒಂದು ಬಾರಿ ಖಂಡಿಸಿದ್ದು ಬಿಟ್ಟರೆ ಮತ್ತಾವ ಖಂಡನೆಗಳೂ ಸರಕಾರದ ಅತ್ಯುನ್ನತ ವಲಯಗಳಿಂದ ಬಂದೇ ಇಲ್ಲ.

ಬದಲಿಗೆ, ಆಳುವ ಪಕ್ಷದ ‘ಪರಿವಾರ’ದವರು ವಿವಿಧ ಧಾರ್ಮಿಕ ಸಂದರ್ಭಗಳನ್ನು ತಮ್ಮ ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವುದು ಕಂಡು ಬರುತ್ತಿದೆ. ಇದರ ತಕ್ಷಣದ ಉದ್ದೇಶ ಚುನಾವಣೆಗಳಲ್ಲಿ ಪ್ರಯೋಜನ ಪಡೆಯುವುದು ಮತ್ತು ದೀರ್ಘಗಾಮಿ ಉದ್ದೇಶವೆಂದರೆ ಮುಗ್ಧ ಜನಗಳಲ್ಲಿ ದ್ವೇಷ ಮತ್ತು ಹುಸಿ ಹೆಮ್ಮೆಯನ್ನು ಆಧರಿಸಿದ ಹಿಂದೂಧರ್ಮದ ಬ್ರಾಹ್ಮಣವಾದೀ ಆವೃತ್ತಿಯನ್ನು ತೂರಿಸಿ ದೇಶದ ವೈವಿಧ್ಯತೆಯನ್ನು ಧ್ವಂಸ ಮಾಡುವುದು.



‘ಸಬ್ ಕಾ ವಿಕಾಸ್’ ಮುಖವಾಡ ಕಳಚಿದೆ

ಮೂರನೇ ವರ್ಷ ಮುಗಿಯುತ್ತಿರುವಂತೆ ಮೋದಿಯವರ ‘ವಿಕಾಸ ಪುರುಷ’ನ ಇಮೇಜನ್ನು ದೇಶದ ಆರ್ಥಿಕ ಪರಿಸ್ಥಿತಿ ಸಂಪೂರ್ಣವಾಗಿ ಬಯಲಿಗೆ ಎಳೆಯುತ್ತಿರುವಾಗ ಬಿಜೆಪಿ ಸರಕಾರ ತನ್ನ ನಿಜವಾದ ಕೋಮುವಾದಿ ಸ್ವರೂಪವನ್ನು ಅದರೆಲ್ಲ ಕರಾಳತೆಯೊಂದಿಗೆ ಪ್ರದರ್ಶಿಸಲು ಮುಂದಾಗಿರುವುದು ಪ್ರಜಾಪ್ರಭುತ್ರವವಾದಿಗಳು ಮತ್ತು ಜಾತ್ಯತೀತವಾದಿಗಳ ಮುಂದಿರುವ ದೊಡ್ಡ ಸವಾಲು.

ಮೋದಿ ಸರಕಾರದ ಮೂರನೇ ವರ್ಷ ಮುಗಿಯುತ್ತಿರುವಂತೆ ಕೋಮುವಾದಿ ಹಿಂದುತ್ವದ ಪ್ರಚಾರ ಟಾಪ್ ಗೇರಿಗೆ ಬಂದಿದೆ. ಉತ್ತರಪ್ರದೇಶದ ಚುನಾವಣಾ ಪ್ರಚಾರದಲ್ಲಿ ಇದು ಸ್ಪಷ್ಟವಾಗಿ ಕಂಡು ಬಂದಿದೆ. ಅಮಿತ್ ಷಾ ಅಂಡ್ ಕೊ ಕಟ್ಟಿದ ಮುಸ್ಲಿಂ ಪ್ರಾಬಲ್ಯವಿರುವ ರಾಜ್ಯದ ಪಶ್ಚಿಮ ಭಾಗದಲ್ಲಿ ‘ಹಿಂದೂ ವಲಸೆ’ ಮತ್ತಿತರ ‘ಹಿಂದೂ ತುಷ್ಟೀಕರಣ’ದ ಅಪಪ್ರಚಾರಗಳ ಅಡಿಪಾಯದ ಮೇಲೆ ಸ್ವತಃ ಪ್ರಧಾನ ಮಂತ್ರಿಗಳೇ ದ್ವೇಷ ಪ್ರಚಾರದ ಸೌಧ ಕಟ್ಟಲು ‘ಸ್ಮಶಾನ-ಕಬ್ರಿಸ್ತಾನ’, ‘ದೀಪಾವಳಿ-ರಂಜಾನ್’ ಅಬ್ಬರಗಳ ಮೂಲಕ ನೇತೃತ್ವ ನೀಡಿದರು.

ಅದರೊಂದಿಗೆ ಕೋಟ್ಯಂತರ ರೂಪಾಯಿಗಳನ್ನು ಚೆಲ್ಲಿ ಚುನಾವಣೆಯಲ್ಲಿ ಗಳಿಸಿದ ವಿಜಯದ ನಂತರ ಇದನ್ನು ಯಾವ ನಾಚಿಕೆಯೂ ಇಲ್ಲದೆ ಮುಂಚೂಣಿಗೆ ತರಲಾಗಿದೆ. ಕೇಸರಿ ಪಡೆಗಳ ಅತ್ಯಂತ ವಿಭಜನಕಾರೀ ಮುಖವಾದ ಯೋಗಿ ಆದಿತ್ಯನಾಥರನ್ನು ಮುಖ್ಯಮಂತ್ರಿಯಾಗಿ ನೇಮಿಸಿದ್ದು ವಿಷಮಯ ಚುನಾವಣಾ ಪ್ರಚಾರದ ಮುಂದುವರಿಕೆಯಾಗಿ ಕಂಡರೂ ಇದು ಮೋದಿಯವರ ದುರುದ್ದೇಶಪೂರ್ಣ ಆಯ್ಕೆ ಎಂಬುದರಲ್ಲಿ ಸಂದೇಹವಿಲ್ಲ. ಇದು ಈ ಅತ್ಯಂತ ವಿಭಜನಕಾರಿ ಮುಖವೇ ಬಿಜೆಪಿಯ ನಿಜವಾದ ಮುಖ ಎಂದು ದೇಶದ ಅತ್ಯಂತ ಹೆಚ್ಚು ಜನಸಂಖ್ಯೆಯ ರಾಜ್ಯದಲ್ಲಿ ಪ್ರದರ್ಶಿಸಲು ಮೋದಿ-ಷಾ ನೇತೃತ್ವ ಸಿದ್ಧವಾಗಿರುವುದರ ಸಂಕೇತ.

ಹೊಸ ಮುಖ್ಯಮಂತ್ರಿ ಹಿಂದುತ್ವ ಪಡೆಗಳಿಗೆ ನಿರಾಶೆ ಉಂಟು ಮಾಡಿಲ್ಲ. ‘ಕಾನೂನುಬಾಹಿರ’ ಕಸಾಯಿಖಾನೆಗಳ ವಿರುದ್ಧ ಕಾರ್ಯಾಚರಣೆಯೊಂದಿಗೆ ಇದನ್ನು ಆರಂಭಿಸಲಾಯಿತು., ವಾಸ್ತವವಾಗಿ ಇದು ರಾಜ್ಯದಲ್ಲಿ ಮಾಂಸ ಉತ್ಪಾದನೆಯಲ್ಲಿ ತೊಡಗಿರುವ ಬಹುಪಾಲು ಮುಸ್ಲಿಮರು ಹಾಗೂ ದಲಿತರೇ ಆಗಿರುವ 25 ಲಕ್ಷ ಜನಗಳ ಜೀವನಾಧಾರದ ಮೇಲೆ ಮಾತ್ರವಲ್ಲ, ಕೋಟ್ಯಂತರ ಜನಗಳ ಆಹಾರ ಪದ್ಧತಿಯ ಮೇಲೆ ನಡೆಸಿದ ನೇರ ಪ್ರಹಾರ. ಇದು ಹೊಸ ಸರಕಾರದ ಹಿಂದುತ್ವವಾದಿ ಆಶಯದ ಸಂಕೇತವೂ ಆಗಿತ್ತು. ಇದು ಈ ರಾಜ್ಯದಲ್ಲೂ, ದೇಶದ ಇತರೆಡೆಗಳಲ್ಲೂ, ಮುಖ್ಯವಾಗಿ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಕೇಸರಿ ಪಡೆಗಳು ಆಕ್ರಮಣಕಾರಿಯಾಗಿ ಮುಂದೊತ್ತಲು ಇನ್ನಷ್ಟು ಪ್ರೋತ್ಸಾಹ ಒದಗಿಸಿದೆ.

* **ಬಿಜೆಪಿ ಆಳ್ವಿಕೆಯ ರಾಜ್ಯಗಳು ‘ಜಂಗಲ್ ರಾಜ್ಯ’ಗಳಾಗುವ ಎಲ್ಲ ಲಕ್ಷಣಗಳನ್ನೂ ಪ್ರದರ್ಶಿಸುತ್ತಿರುವುದು, ಈ ಬಗ್ಗೆ ಏನೇನೂ ಆತಂಕ ಇಲ್ಲದಿರುವುದು ‘ಉತ್ತಮ ಆಳ್ವಿಕೆ’ಯ ಘೋಷಣೆ ನೀಡಿದ ಮೋದಿ ಆಳ್ವಿಕೆಯ ಮೂರನೇ ವರ್ಷದ ಕೊನೆಯಲ್ಲಿನ ಮತ್ತೊಂದು ‘ಸಾಧನೆ’.** ಏಕೆಂದರೆ ಕಾನೂನು ವ್ಯವಸ್ಥೆಯ ತಮ್ಮ ಕೆಲಸವನ್ನು ಗಂಭೀರವಾಗಿ ತೆಗೆದುಕೊಂಡ ಸಹರಾನ್‌ಪುರ ಮತ್ತು ಆಗ್ರಾದ ಹಿರಿಯ ಪೋಲಿಸ್ ಅಧಿಕಾರಿಗಳ ವರ್ಗಾವಣೆ ಹಿಂದುತ್ವ ಪಡೆಗಳಿಗೆ ಹೊಸ ಹುಮ್ಮಸ್ಸು ನೀಡಿದರೆ, ಇನ್ನೊಂದೆಡೆಯಲ್ಲಿ ಕಾನೂನು-ವ್ಯವಸ್ಥೆಯ ಪ್ರಶ್ನೆಗಳನ್ನೂ ಉಂಟು ಮಾಡಿದೆ.

* **ಕಾಶ್ಮೀರದಲ್ಲಿನ ಈಗಿನ ಶೋಚನೀಯ ಪರಿಸ್ಥಿತಿ ಹಿಂದುತ್ವವಾದಿಗಳ ಇನ್ನೊಂದು ಪ್ರಮುಖ ‘ಸಾಧನೆ’.** ಅಲ್ಲಿ ಮೋದಿ ಆಳ್ವಿಕೆಯ ಮೂರನೇ ವರ್ಷದಲ್ಲಿ ಪರಿಸ್ಥಿತಿ ಸತತವಾಗಿ ಹದಗಡುತ್ತ ಈಗ ಅದು ಒಂದು ಸಾಮೂಹಿಕ ಬಂಡಾಯದ ಸ್ವರೂಪವನ್ನು ಪಡೆಯುತ್ತಿದೆ. ಶ್ರೀನಗರ ಲೋಕಸಭಾ ಉಪಚುನಾವಣೆಯಲ್ಲಿ ಕೇವಲ 7% ಮತದಾನ, ಮರುಮತದಾನ ನಡೆದ ಕಡೆಗಳಲ್ಲಿ ಕೇವಲ 3% ಮತದಾನ ಕಾಶ್ಮೀರಿಗಳಲ್ಲಿ ಭಾರತದ ಬಗ್ಗೆ ವ್ಯಾಪಕವಾಗುತ್ತಿರುವ ಪರಕೀಯ ಭಾವನೆಯನ್ನು ವ್ಯಕ್ತಪಡಿಸಿದರೂ, ಮೋದಿ ಸರಕಾರಕ್ಕೆ ಈ ಬಗ್ಗೆಯೂ ಕಾಳಜಿಯಿದ್ದಂತಿಲ್ಲ. ಸ್ವತಃ ಬಿಜೆಪಿ ಭಾಗವಾಗಿರುವ ಸರಕಾರದ ಮುಖ್ಯಮಂತ್ರಿಗಳು ಕೇಳಿಕೊಂಡರೂ ಒಂದು ರಾಜಕೀಯ ಸಂವಾದ ಆರಂಭಿಸಲು ಮೋದಿ ಸರಕಾರ ಸಿದ್ಧವಿಲ್ಲ. ತಾನೆಷ್ಟು ‘ಕಠಿಣ’ ನಿಲುವನ್ನು ತಳೆಯಬಲ್ಲೆ ಎಂದು ಪ್ರದರ್ಶಿಸುವ ಗೀಳನ್ನೇ ಅದು ಹಚ್ಚಿಕೊಂಡಂತಿದೆ. ರಾಜಕೀಯ ಸಮಸ್ಯೆಯೊಂದಕ್ಕೆ ಇಂತಹ ‘ಭದ್ರತೆ’ಯ ಪರಿಹಾರ ಸಾಧ್ಯವಿಲ್ಲವಾದ್ದರಿಂದ ಈ ‘ಕಠಿಣ ನಿಲುವು’ ವಿಫಲವಾಗುವದು ಖಂಡಿತ.

ಆದರೆ ಮೋದಿ ಸರಕಾರದ ಈ ವಿಫಲತೆಯನ್ನು ಕೂಡ ಹಿಂದುತ್ವವಾದಿ ಶಕ್ತಿಗಳು ತಮ್ಮ ಯಶಸ್ಸು ಎಂದೇ ಕಾಣುತ್ತಿವೆ ಎಂಬುದು ಮಾತ್ರ ವಿಪರ್ಯಾಸ. ಏಕೆಂದರೆ ಕಾಶ್ಮೀರದಲ್ಲಿನ ಕ್ಷೋಭೆಯನ್ನು ಜಮ್ಮು ಸೇರಿದಂತೆ ದೇಶದ ಇತರೆಡೆಗಳಲ್ಲಿ ಕೋಮು ಧ್ರುವೀಕರಣವನ್ನು ಮತ್ತಷ್ಟು ತೀಕ್ಷ್ಣಗೊಳಿಸಲು ಬಳಸಬಹುದು ಎಂಬುದು ಅದರ ಹುನ್ನಾರ. ದೇಶದಲ್ಲಿ ತನ್ನ ಪ್ರಾಬಲ್ಯವನ್ನು ಇನ್ನಷ್ಟು ಭದ್ರಗೊಳಿಸಿಕೊಳ್ಳುವ ಕೋಮುಧ್ರುವೀಕರಣದ ಅದರ ತಂತ್ರಕ್ಕೆ ಪಾಕಿಸ್ತಾನ ಹೊರಗಿನ ಉಪಕರಣವಾದರೆ, ಕಾಶ್ಮೀರ ಒಳಗಿನ ಉಪಕರಣ.

* **ಜಾತ್ಯತೀತ ಸಂಶೋಧನೆಯ ಮೇಲೆ, ನಿರ್ದಿಷ್ಟವಾಗಿ ಜೆಎನ್‌ಯು ಮತ್ತಿತರ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಮೇಲೆ ಸರ್ವತೋಮುಖ ದಾಳಿಯನ್ನು ಹಿಂದುತ್ವ ಪಡೆಗಳು ತಮ್ಮ ಮಗದೊಂದು ‘ಸಾಧನೆ’ ಎಂದು ಪರಿಗಣಿಸುತ್ತಿವೆ.** ಮೋದಿ ಆಳ್ವಿಕೆಯ



ದಲಿತರ ಸಂಕಷ್ಟಗಳನ್ನು ಹೆಚ್ಚಿಸಿದ ವರ್ಷಗಳು

"ಸಬ್ ಕಾ ಸಾಥ್, ಸಬ್ ಕಾ ವಿಕಾಸ್" ಎಂಬ ಮೋದಿ ಚುನಾವಣಾ ಘೋಷಣೆ ಅಂಚಿಗೆ ತಳ್ಳಲ್ಪಟ್ಟ ಎಲ್ಲಾ –ಮುಸ್ಲಿಮರಿಗೆ, ದಲಿತರಿಗೆ, ಆದಿವಾಸಿಗಳಿಗೆ – ಸಮುದಾಯಗಳಿಗೂ ಕ್ರೂರ ಜೋಕ್ ಆಗಿಬಿಟ್ಟಿದೆ. ಮೋದಿ ಆಡಳಿತದ ಈ ಮೂರು ವರ್ಷಗಳಲ್ಲಿ ಅವರ ಸಂಕಷ್ಟಗಳೂ ಹಲವು ಪಟ್ಟು ಹೆಚ್ಚಿವೆ. ಇದು ದಲಿತರ ಮಟ್ಟಿಗೆ ಬಹಳ ನಿಜ. ದಲಿತರ ಮೇಲೆ ಬಿಜೆಪಿ ಸರಕಾರ ಮತ್ತು ಸಂಘ ಪರಿವಾರ ಯುದ್ಧವೇ ಘೋಷಿಸಿಬಿಟ್ಟಂತಿದೆ. ಗೋವುಗಳಿಗೆ ದಲಿತರಿಗಿಂತ ಹೆಚ್ಚು ಆದ್ಯತೆ ದೊರಕಿದೆ. ಗೋರಕ್ಷಣೆಯ ಹೆಸರಲ್ಲಿ ದಲಿತರ ಬೇಟೆ ನಡೆಯುತ್ತಿದೆ.

ದಲಿತರ ಮಟ್ಟಿಗೆ ಬಿಜೆಪಿಯ ದುರಾಡಳಿತವನ್ನು ಕಳೆದ ಚುನಾವಣೆಯ ಭರವಸೆಗಳಲ್ಲಿ ಅವರು ಎಷ್ಟರ ಮಟ್ಟಿಗೆ ಜಾರಿ ಮಾಡಿದ್ದಾರೆ ಎಂದು ಪರಿಶೀಲಿಸುವುದರಿಂದ ತಿಳಿಯಬಹುದು:



"ಮಲ ಹೊರುವ ಪದ್ಧತಿಯ ಮೂಲೋತ್ಪಾಟನೆ" ಎಲ್ಲಿ?

"ಮಲ ಹೊರುವ ಪದ್ಧತಿಯ ಮೂಲೋತ್ಪಾಟನೆ ಮಾಡುವುದು" ಬಿಜೆಪಿಯ ಚುನಾವಣಾ ಭರವಸೆಗಳಲ್ಲಿ ಒಂದಾಗಿತ್ತು. 2011 ಜನಗಣತಿ ಪ್ರಕಾರ ಸುಮಾರು 26 ಲಕ್ಷ ಒಣ ಶೌಚಾಲಯಗಳಿವೆ. ಅದಕ್ಕೆ ಕನಿಷ್ಟ 2 ಲಕ್ಷ ಮಲ ಹೊರುವ ಅಮಾನವೀಯ ಕೆಲಸ ಮಾಡುವವರು ಬೇಕು. (ಚರಂಡಿಗಳು, ರೈಲ್ವೇ ಟ್ರಾಕ್‌ಗಳನ್ನು ಸ್ವಚ್ಛಗೊಳಿಸುವವರನ್ನು ತೆಗೆದುಕೊಂಡರೆ ಅದು ಇನ್ನೂ ದೊಡ್ಡ ಸಂಖ್ಯೆ ಆಗುತ್ತದೆ.) ಅವರ ಪುನರ್ವಸತಿಗೆ ಕನಿಷ್ಟ 800 ಕೋಟಿ ರೂ. ಬೇಕು. 2017–18ರ ಬಜೆಟ್ ಹಿಂದೆ ಪುನರ್ವಸತಿಗೆ ತೆಗೆದಿಟ್ಟ ಜುಜುಬಿ 10 ಕೋಟಿ ರೂ.ಗಳನ್ನು 5 ಕೋಟಿ ರೂ.ಗಳಿಗೆ ಕಡಿತ ಮಾಡಿದೆ. 2016 ಫೆಬ್ರುವರಿ 15ರವರೆಗೆ ಇರುವ ಮಾಹಿತಿ ಪ್ರಕಾರ ಕೇವಲ 7,573 ಮಲ ಹೊರುವ ಕಾರ್ಮಿಕರ ಪುನರ್ವಸತಿ ಮಾಡಲಾಗಿದೆ. ಅಂದರೆ 1.92 ಲಕ್ಷ ಕಾರ್ಮಿಕರ ಪುನರ್ವಸತಿ ಆಗಿಲ್ಲ. ಅಂದರೆ ಅವರು ಮಲ ಹೊರುವ ಅಮಾನವೀಯ ಕೆಲಸ ಮುಂದುವರೆಸಬೇಕಾಗಿದೆ. ಸ್ವಚ್ಛ ಭಾರತದ ಅಬ್ಬರದ ನಡುವೆಯೂ ಎಷ್ಟು ಒಣ ಶೌಚಾಲಯಗಳ ಬಳಕೆ ನಿಲ್ಲಿಸಲಾಗಿದೆ ಎಂಬ ಬಗ್ಗೆಯೂ ಮಾಹಿತಿ ಇಲ್ಲ.

"ಮಲ ಹೊರುವ ಪದ್ಧತಿಯ ಮೂಲೋತ್ಪಾಟನೆ" ಭರವಸೆಯು ಜಾರಿ, ಶೇ. 4 ರಷ್ಟು ಸಹ ಜಾರಿಯಾಗಿಲ್ಲ

ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳು
(ಮೂಲ: ಗೃಹ ಸಚಿವಾಲಯದ ವಾರ್ಷಿಕ ವರದಿ 2016–17)

ವರ್ಷ	2013	2015	ಶೇ. ಹೆಚ್ಚಳ
ಕೊಲೆ	676	813	20.3
ಅತ್ಯಾಚಾರ	2,073	2,541	22.6
ಇತರ ಅಪರಾಧಗಳು	16,797	27,017	64.8
ದಲಿತ ದೌರ್ಜನ್ಯ ತಡೆ ಕಾಯಿದೆ ಕೇಸುಗಳು	13,975	6,005	– 132.7

"ದಲಿತ, ಆದಿವಾಸಿಗಳ ಭದ್ರತೆಗೆ, ವಿಶೇಷವಾಗಿ ಅವರ ಮೇಲಿನ ದೌರ್ಜನ್ಯ ತಡೆಯಲು ಗರಿಷ್ಟ ಆದ್ಯತೆ" ಹುಸಿಯಾಗಿದೆ

"ದಲಿತ, ಆದಿವಾಸಿಗಳ ಭದ್ರತೆಗೆ, ವಿಶೇಷವಾಗಿ ಅವರ ಮೇಲಿನ ದೌರ್ಜನ್ಯ ತಡೆಯಲು ಗರಿಷ್ಟ ಆದ್ಯತೆ" ದಲಿತರಿಗೆ ಬಿಜೆಪಿಯ ಇನ್ನೊಂದು ಚುನಾವಣಾ ಭರವಸೆಯಾಗಿತ್ತು. ದಲಿತರ ಅಭದ್ರತೆಯೂ, ಅವರ ಮೇಲಿನ ದೌರ್ಜನ್ಯಗಳೂ ಈ ಮೂರು ವರ್ಷಗಳಲ್ಲಿ ಹಲವು ಪಟ್ಟು ಹೆಚ್ಚಿವೆ. ಬಿಜೆಪಿ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಮೇಲುಜಾತಿಯ ಜಾತಿವಾದಿಗಳಿಗೆ ಮತ್ತು ದುಷ್ಟ ಸಂಘ ಪರಿವಾರಕ್ಕೆ ಆನೆಯ ಬಲ ಬಂದಂತಾಗಿದೆ. ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾಗಿವೆ. ಗುಜರಾತಿನ ಊನಾದಿಂದ ಇತ್ತೀಚಿನ ಸಹರಾನಪುರದ ವರೆಗೆ ದೊಡ್ಡ ಪ್ರಮಾಣದ ದೌರ್ಜನ್ಯಗಳೂ ನಡೆದಿವೆ. ಕೇಂದ್ರ ಹಾಗೂ ರಾಜ್ಯಗಳಲ್ಲಿನ ಸರಕಾರಗಳು, ಮತ್ತು ಸಂಘ ಪರಿವಾರ ಈ ದೌರ್ಜನ್ಯಗಳನ್ನು ತಡೆಯಲು ಕಿರು ಬೆರಳೆತ್ತಿಲ್ಲ. ಮಾತ್ರವಲ್ಲ, ಈ ದೌರ್ಜನ್ಯಗಳನ್ನ ಎಸಗುವ ಶಕ್ತಿಗಳಿಗೆ ಕುಮ್ಮಕ್ಕು ಕೊಡುತ್ತಿವೆ, ನೇರವಾಗಿ ನೇತೃತ್ವ ಕೊಡುತ್ತಿವೆ ಅಥವಾ ಭಾಗವಹಿಸುತ್ತಿವೆ.

ದಲಿತರ ಮೇಲೆ ಎಲ್ಲಾ ರೀತಿಯ ದೌರ್ಜನ್ಯಗಳು 2013ರಿಂದ 2015ರ ಅವಧಿಯಲ್ಲಿ (ಈ ಕೆಳಗಿನ ಕೋಷ್ಟಕ ತೋರಿಸುವಂತೆ) ಶೇ. 20ರಿಂದ ಶೇ. 60ರ ವರೆಗೆ ಹೆಚ್ಚಿವೆ. ಆದರೆ ದಲಿತ ದೌರ್ಜನ್ಯ ತಡೆ ಕಾಯಿದೆ ಕೇಸುಗಳು ಮಾತ್ರ ಅರ್ಧದಷ್ಟು ಕಡಿಮೆಯಾಗಿವೆ. ದಲಿತರ ಮೇಲೆ ಎಲ್ಲಾ ರೀತಿಯ ದೌರ್ಜನ್ಯಗಳು ಗಣನಿಯವಾಗಿ ಹೆಚ್ಚಿರುವಾಗ, ದೌರ್ಜನ್ಯ ತಡೆ ಕಾಯಿದೆ ಕೇಸುಗಳು ಮಾತ್ರ ಕಡಿಮೆಯಾಗುವುದು ನಂಬಲರ್ಹವಾದ ಸಂಖ್ಯೆ ಅಲ್ಲ. ಮೋದಿ ಸರಕಾರ ಜಿಡಿಪಿ ಮುಂತಾದ ಹಲವು ಪ್ರಮುಖ ಸೂಚಕಗಳೊಂದಿಗೆ ಮಾಡಿದಂತೆ ಇಲ್ಲೂ ಅಂಕೆ–ಸಂಖ್ಯೆ ತಿರುಚುವ ಕೆಲಸ ಮಾಡಿವೆ. ಪೋಲಿಸರು ದಲಿತ ದೌರ್ಜನ್ಯ ತಡೆ ಕಾಯಿದೆ ಕೇಸುಗಳನ್ನು ರಿಜಿಸ್ಟರ್ ಮಾಡದಿರಲು ನಿರ್ದೇಶನದಿಂದ ಹಿಡಿದು ಇತರ ಅಂಕೆ–ಸಂಖ್ಯೆ ತಿರುಚುವ ಕ್ರಮಗಳನ್ನು ಕೈಗೊಂಡಿದೆ ಎಂಬುದು ಸ್ಪಷ್ಟ.

ದಲಿತರ ಮೇಲೆ ಎಲ್ಲಾ ರೀತಿಯ ದೌರ್ಜನ್ಯಗಳು ಶೇ. 20 ರಿಂದ 60ರ ವರೆಗೆ ಗಣನಿಯವಾಗಿ ಹೆಚ್ಚಿವೆ.

ಮೀಸಲಾತಿ ಉದ್ಯೋಗಗಳೂ ಇಲ್ಲ

ದಲಿತ ಸಮುದಾಯ ಯಾವುದೇ ಆಸ್ತಿ ಇಲ್ಲದಿರುವ ಸಮುದಾಯ. ಸರಕಾರಿ–ಸಾರ್ವಜನಿಕ ಉದ್ಯಮಗಳ ಕ್ಷೇತ್ರಗಳಲ್ಲಿ ಉದ್ಯೋಗಗಳು ಸಮುದಾಯದ ಮುನ್ನಡೆಗೆ ಮುಖ್ಯ ಆಧಾರವಾಗಿತ್ತು. ನವ–ಉದಾರವಾದಿ ಅಜೆಂಡಾದ ಪ್ರಕಾರ ಖಾಸಗೀಕರಣದಿಂದ ಈ ಉದ್ಯೋಗಗಳು ಕಡಿಮೆಯಾಗುತ್ತಿವೆ. ಇರುವ ಮೀಸಲಾದ (ಬ್ಯಾಕ್ ಲೊಗ್) ಉದ್ಯೋಗಗಳನ್ನು ದಲಿತರಿಗೆ ಒದಗಿಸಲು ವಿಶೇಷ ಪ್ರಯತ್ನವನ್ನೂ ಬಿಜೆಪಿ ಸರಕಾರ ಮಾಡಿಲ್ಲ. 2008ರ ನಂತರ ಬ್ಯಾಕ್ ಲೊಗ್ ತುಂಬಿಸಲು ವಿಶೇಷ ಕ್ರಮ ಕೈಗೊಳ್ಳಲಾಗಿಲ್ಲ. ಮಾತ್ರವಲ್ಲ, ಸಂಘ ಪರಿವಾರ (ಮರಾಠಾ, ಜಾಟ್ ಮುಂತಾದ) ಪ್ರಬಲ ಸಮುದಾಯಗಳ ಮೀಸಲಾತಿಯ ಕೂಗಿಗೆ ಬೆಂಬಲ ಕೊಡುವ ಮೂಲಕ ದಲಿತರಿಗೆ ಮೀಸಲಾತಿಯ ಬಗ್ಗೆ ಮೇಲುಜಾತಿಯವರಿಗೆ ಇರುವ ಅಸಹನೆ ಆಕ್ರೋಶ ಹೆಚ್ಚಿಸಿ ಅದಕ್ಕೆ ಕುತ್ತು ತರಲು ಪ್ರಯತ್ನಿಸುತ್ತಿದೆ.

ದಲಿತರ ಅಭಿವೃದ್ಧಿ ಯೋಜನೆ ಹೂಡಿಕೆ ಕಡಿತ

ದಲಿತರ ಅಭಿವೃದ್ಧಿಗೆ ವಿಶೇಷ ಅಂಗ ಯೋಜನೆಯು (ಎಸ್.ಸಿ.ಪಿ.) ಅವಕಾಶವಿದ್ದು, ಅದರ ಉಸ್ತುವಾರಿಯನ್ನು ಯೋಜನಾ ಆಯೋಗ ನೋಡಿಕೊಳ್ಳುತ್ತಿತ್ತು. ಅದರಲ್ಲಿ ತೆಗೆದಿಡುವ ಹಣ ದಲಿತರ ಜನಸಂಖ್ಯಾ ಪ್ರಮಾಣದಲ್ಲಿ ಇರಬೇಕಾಗಗಿತ್ತು. ಬಿಜೆಪಿ ಸರಕಾರ ಬಂದ ಕೂಡಲೇ ಯೋಜನಾ ಆಯೋಗವನ್ನು ರದ್ದು ಮಾಡಿದೆ. 2017 ಬಜೆಟಿನಲ್ಲಿ ಜನಸಂಖ್ಯಾ ಪ್ರಮಾಣದಲ್ಲಿ ದಲಿತ ಉಪ ಯೋಜನೆಗೆ ಇರಬೇಕಾದ ರೂ. 91 ಸಾವಿರ ಕೋಟಿ ಬದಲು ಕೇವಲ ರೂ. 52 ಸಾವಿರ ಕೋಟಿ (ಅಂದರೆ 55%) ಕೊಟ್ಟಿದೆ. ಇದೇ ರೀತಿ ಆದಿವಾಸಿ ಅಭಿವೃದ್ಧಿ ಯೋಜನೆಗೆ ಇರಬೇಕಾದ ರೂ. 47 ಸಾವಿರ ಕೋಟಿ ಬದಲು ರೂ. 32 ಸಾವಿರ (ಅಂದರೆ ಶೇ. 66.5) ಕೋಟಿ ಕೊಟ್ಟಿದೆ. ಇಟ್ಟ ಮೊತ್ತವನ್ನೂ ದಲಿತ–ಆದಿವಾಸಿಗಳ ಅಭಿವೃದ್ಧಿಗೆ ಮೀಸಲಾದ ಯೋಜನೆಗಳ ಬದಲು ಸಾಮಾನ್ಯ ಆಡಳಿತ ಮುಂತಾದ ಇತರ ವಿಷಯಗಳಿಗೆ ಖರ್ಚು ಮಾಡಲಾಗುತ್ತಿದೆ. ಉದಾಹರಣೆಗೆ ಸ್ಕಾಲರ್ ಶಿಪ್‌ಗಳಿಗೆ ತೆಗೆದಿಟ್ಟ ಹಣದಲ್ಲಿ ಹಿಂದಿನ ವರ್ಷಗಳಿಂದ ರೂ. 11,276 ಕೋಟಿ ರೂ. ಉಳಿದಿದೆ. ಅಂದರೆ ದಲಿತ–ಆದಿವಾಸಿಗಳ ಅಭಿವೃದ್ಧಿಗೆ ಮೀಸಲಾದ ಯೋಜನೆಗಳಿಗೆ ಹಣವನ್ನು ವಿನಿಯೋಗಿಸಲಾಗಿಲ್ಲ.

ಬಿಜೆಪಿಯ ಬೊಗಳೆಗಳಿಗೆ ಕೇರಳ ಎಲ್.ಡಿ.ಎಫ್. ಪರ್ಯಾಯ

ದಲಿತರಿಗೆ ಬಿಜೆಪಿಯ ಈ ಬೊಗಳೆ ಭರವಸೆಗಳಿಗೆ ಬದಲಿಯಾಗಿ ಕೇರಳ ಮತ್ತು ತ್ರಿಪುರಾ ಸರಕಾರಗಳು ದಲಿತ/ಆದಿವಾಸಿ ಉಪಯೋಜನೆಗಳನ್ನು ಅಕ್ಷರಶಃ ಜಾರಿ ಮಾಡಿವೆ. ಉದಾಹರಣೆಗೆ ಈ ವರ್ಷ ಕೇರಳದ ಬಜೆಟಿನಲ್ಲಿ ಜನಸಂಖ್ಯಾ ಪ್ರಮಾಣ (ಶೇ. 9.10) ಕ್ಕಿಂತಲೂ ಹೆಚ್ಚಿನ ಮೊತ್ತ ರೂ. 2600 ಕೋಟಿ ರೂ. (ಬಜೆಟಿನ ಶೇ. 9.81)ಗಳನ್ನು ದಲಿತ ಉಪಯೋಜನೆಗೆ ತೆಗೆದಿಡಲಾಗಿದೆ. ಜನಸಂಖ್ಯಾ ಪ್ರಮಾಣ (ಶೇ. 1.45)ಕ್ಕಿಂತಲೂ ಹೆಚ್ಚಿನ ಮೊತ್ತ ರೂ. 751 ಕೋಟಿ ರೂ. (ಬಜೆಟಿನ ಶೇ. 2.83)ಗಳನ್ನು ಆದಿವಾಸಿ ಉಪಯೋಜನೆಗೆ ತೆಗೆದಿಡಲಾಗಿದೆ. ಕೇರಳ ಸರಕಾರ ದಲಿತ/ಆದಿವಾಸಿ ಉಪಯೋಜನೆಗಳಿಗೆ ತೆಗೆದಿಟ್ಟ ಪ್ರಮಾಣ ದೇಶದ ಯಾವುದೇ ರಾಜ್ಯಕ್ಕಿಂತಲೂ ಹೆಚ್ಚು.

ಕಾರ್ಪೊರೇಟ್ ಸುಸ್ತಿದಾರರಿಗೆ ವರದಾನ!

ಕಾರ್ಪೊರೇಟ್‌ಗಳಿಗೆ ರಿಯಾಯ್ತಿಗಳ ಮೆಲೆ ರಿಯಾಯ್ತಿಗಳು ಮೋದಿ ಸರಕಾರದ ಮೂರು ವರ್ಷಗಳ ಅಮೋಘ ದಾಖಲೆ. ಯಾವ ಹಣದ ಥೈಲಿಗಳು ತನಗೆ ಅಧಿಕಾರ ಕೊಡಿಸಿವೆಯೋ ಅವರಿಗೆ ಅವರ ಹಣಕಾಸು ಪ್ರಮಾದ, ಅದಕ್ಷತೆಗಳಿಂದ ರಕ್ಷಣೆ ನೀಡಲು ಬದ್ಧವಾಗಿರುವ ಸರಕಾರ ತನ್ನ ಈ ದಿವಾಳಿಕೋರ ದಾರಿಯನ್ನು ಬದಲಿಸುವುದಾದರೂ ಹೇಗೆ ಸಾಧ್ಯ?

2008ರ ಜಾಗತಿಕ ಹಣಕಾಸು ಬಿಕ್ಕಟ್ಟನ್ನು ಎದುರಿಸುವಷ್ಟು ದಷ್ಟಪುಷ್ಟವಾಗಿದ್ದ ಭಾರತದ ಬ್ಯಾಂಕಿಂಗ್ ವ್ಯವಸ್ಥೆ, ವಿಶೇಷವಾಗಿ ಸಾರ್ವಜನಿಕ ವಲಯದ ವ್ಯವಸ್ಥೆ, ಇಂದು ಬಿಕ್ಕಟ್ಟನ್ನು ಎದುರಿಸುತ್ತಿದೆ. 'ಕಾರ್ಯನಿರ್ವಹಿಸದ ಆಸ್ತಿ'(ಎನ್‌ಪಿಎ)ಗಳು ಎಂದು ಹೇಳಲಾಗುವ ಹಿಂದಿರುಗಿ ಬರುವ ನಿರೀಕ್ಷೆ ಇಲ್ಲದ ಸುಸ್ತಿಸಾಲಗಳ ಅಪಾರ ಮೊತ್ತ ಈ ವಲಯದ ಅಸ್ತಿತ್ವಕ್ಕೇ ಬೆದರಿಕೆ ಒಡ್ಡಿದೆ. ಇವನ್ನು ಕೆಟ್ಟ ಸಾಲಗಳೆಂದೂ ಕರೆಯಲಾಗುತ್ತಿದೆ.

ಇದು ಯುಪಿಎ ಸರಕಾರದ ಬಳುವಳಿ ಎಂದು ಬಿಜೆಪಿ ಹಣಕಾಸು ಮಂತ್ರಿಗಳು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ನಿಜ, ಯುಪಿಎ ಸರಕಾರ ಕಾರ್ಪೊರೇಟ್‌ಗಳಿಗೆ ಅನುಕೂಲ ಮಾಡಿಕೊಡುವಲ್ಲಿ ಬಹಳ ಉದಾರವಾಗಿದ್ದರಿಂದ ಈ ಸಮಸ್ಯೆ ಹುಟ್ಟಿಕೊಂಡಿತು. ಮೋದಿ ಸರಕಾರ ಅಧಿಕಾರಕ್ಕೆ ಬರುವ ವೇಳೆಗೆ ಅದು 2.3ಲಕ್ಷ ಕೋಟಿ ರೂ. ತಲುಪಿತ್ತು. ಆದರೆ ಈಗ ಅದು ಸುಮಾರು ಮೂರು ಪಟ್ಟಾಗಿದೆ, 6.8ಲಕ್ಷ ಕೋಟಿ ರೂ.ಗೇರಿದೆ. ಸಾರ್ವಜನಿಕ ವಲಯದ ಕೆಟ್ಟ ಸಾಲಗಳ ಮೊತ್ತ ಅದು ನೀಡಿರುವ ಒಟ್ಟು ಸಾಲಗಳ 11% ದಾಟುತ್ತಿದೆ. ಯುಪಿಎ ಹಿಡಿಯಷ್ಟು ಕಾರ್ಪೊರೇಟ್‌ಗಳಿಗೆ ಲಕ್ಷ ಕೋಟಿಗಟ್ಟಲೆ ರೂ.ಗಳ ಸಾಲಗಳನ್ನು ಕೊಡುವಂತೆ ಸಾರ್ವಜನಿಕ ವಲಯದ ಬ್ಯಾಂಕುಗಳ ಮೇಲೆ ಒತ್ತಡ ಹಾಕಿದ್ದರೆ, ಈಗ ಬಿಜೆಪಿ ಸರಕಾರ ಅವೇ ಕಾರ್ಪೊರೇಟ್‌ಗಳಿಗೆ ಪಾವತಿ ಬಾಕಿಗಳನ್ನು ಮುಂದುವರೆಸಲು ನೆರವು ನೀಡುತ್ತಿದೆ. ರಿಝರ್ವ್ ಬ್ಯಾಂಕಿನ ಮರು ಹಣ ನೀಡಿಕೆ ಮತ್ತು ಸಾಲ 'ಪುನರ್‌ರಚನೆ' ಸ್ಕೀಮುಗಳ ಮೂಲಕ ಈ ನೆರವು ಒದಗಿಸಲಾಗುತ್ತಿದೆ.

ಈ 'ಪನರ‍್ರಚನೆ' ಸ್ಕೀಮುಗಳೆಂದರೆ ಹಿಂದಿರುಗಿಸದ ಸಾಲಗಳನ್ನು ತೀರಿಸಲು ಹೊಸ ಸಾಲಗಳನ್ನು ಕೊಡುವುದು, ಅಥವ ಮರುಪಾವತಿ ಶರತ್ತುಗಳನ್ನು ಸಡಿಲಗೊಳಿಸುವುದು, ಬಡ್ಡಿ ಪಾವತಿ ಸದ್ಯಕ್ಕೆ ಬೇಡ ಎನ್ನುವುದು ಇತ್ಯಾದಿ. ಕಳೆದ ಮೂರು ವರ್ಷಗಳಲ್ಲಿ ಈ ಹೆಸರಿನಲ್ಲೇ ಕಾರ್ಪೊರೇಟ್‌ಗಳ 3.5ಲಕ್ಷ ಕೋಟಿ ರೂ.ಗಳಷ್ಟು ಮೊತ್ತದ ಸಾಲಗಳಿಗೆ 'ಪರಿಹಾರ' ಒದಗಿಸಲಾಗಿದೆ.

ವಿಜಯ ಮಲ್ಯ ಬ್ಯಾಂಕುಗಳಿಗೆ ನಾಮ ಹಾಕಿದ ಪ್ರಕರಣ ಕುಖ್ಯಾತವಾಗಿದೆ. ಆದರೆ ಮೋದಿಯವರ ಸ್ವಂತ ಚಮಚಾ ಬಂಡವಾಳಿಗರ ಕೆಟ್ಟ ಸಾಲಗಳ ಮೊತ್ತ ಇನ್ನೂ ಹೆಚ್ಚಿದೆ. ಅವುಗಳು ಏಕೋ ಅಷ್ಟೊಂದು 'ಖ್ಯಾತಿ'

ಪುಟ 10 ಕ್ಕೆ

ಸಂವಿಧಾನಿಕ ಹಕ್ಕುಗಳ ಮೇಲೆ ಎಡೆಬಿಡದ ಪ್ರಹಾರಗಳು

ಮೂರು ವರ್ಷಗಳ ಮೋದಿ ಸರಕಾರದ ಆಳ್ವಿಕೆ ಮೂಲಭೂತವಾಗಿ ಅದೊಂದು ಪ್ರಜಾಪ್ರಭುತ್ವ–ವಿರೋಧಿ ಸರಕಾರ ಎಂಬುದನ್ನು ಹೆಜ್ಜೆ–ಹೆಜ್ಜೆಗೂ ಸಾಬೀತು ಮಾಡುತ್ತ ಬಂದಿದೆ. ಅದರ ಈ ಎಲ್ಲ ಪ್ರಜಾಪ್ರಭುತ್ವ–ವಿರೋಧಿ ನಡೆವಳಿಕೆಗಳು, ಸಂವಿಧಾನದ ಮೇಲೆ ದಾಳಿಗಳು ಅನಿರೀಕ್ಷಿತವೇನಲ್ಲ. ಆದರೂ ಇವೀಗ ಮೂರು ವರ್ಷಗಳ ಕೊನೆಯಲ್ಲಿ ಮೋದಿಯವರ ಬಗ್ಗೆ ಅಲ್ಪ–ಸ್ವಲ್ಪ ಅಭಿಮಾನ ಇದ್ದವರನ್ನೂ ಬೆಚ್ಚಿ ಬೀಳಿಸುತ್ತಿವೆ.

2014ರಲ್ಲಿ ಲೋಕಸಭೆಗೆ ಆರಿಸಲ್ಪಟ್ಟ 282 ಬಿಜೆಪಿ ಸದಸ್ಯರಲ್ಲಿ ಒಬ್ಬ ಸಿಖ್ ಮತ್ತು ಒಬ್ಬ ಈಶಾನ್ಯ ಭಾರತದ ಒಬ್ಬ ಬೌದ್ಧ ವ್ಯಕ್ತಿ ಬಿಟ್ಟರೆ ಬೇರೆ ಯಾರೂ ಅಲ್ಪಸಂಖ್ಯಾತ ಸಮುದಾಯಗಳ ವ್ಯಕ್ತಿಗಳಿಲ್ಲ. 20%ಕ್ಕಿಂತಲೂ ಹೆಚ್ಚು ಅಲ್ಪಸಂಖ್ಯಾತರಿರುವ ಒಂದು ಪ್ರಜಾಪ್ರಭುತ್ವದಲ್ಲಿ ಭಾರೀ ಬಹುಮತ ಪಡೆದ ಆಳುವ ಪಕ್ಷ ಇದನ್ನು ಪ್ರತಿನಿಧಿಸುತ್ತಿಲ್ಲ ಎಂದರೆ ಅದು ಆ ಪಕ್ಷದ ಪ್ರಜಾಪ್ರಭುತ್ವ–ವಿರೋಧಿ ಸ್ವರೂಪಕ್ಕೆ ಹಿಡಿದ ಕನ್ನಡಿ. ಆದರೆ ಬಿಜೆಪಿಗೆ ಇದರ ಬಗ್ಗೆ ತುಸುವಾದರೂ ಪರಿವೆ ಇಲ್ಲ. ಮೂರು ವರ್ಷಗಳ ನಂತರ ಕಾಲು ಭಾಗದಷ್ಟು ಮುಸ್ಲಿಂ ಸಮುದಾಯವನ್ನು ಹೊಂದಿರುವ ಉತ್ತರಪ್ರದೇಶದ ವಿಧಾನ ಸಭಾ ಚುನಾವಣೆಗಳಿಗೆ ಅಭ್ಯರ್ಥಿಗಳ ಪಟ್ಟಿಯಲ್ಲಿಯೇ ಒಬರೇ ಒಬ್ಬ ಮುಸ್ಲಿಂ ಅಥವ ಇತರ ಅಲ್ಪಸಂಖ್ಯಾತರ ಹೆಸರುಗಳಿರಲಿಲ್ಲ.

ಆದರೆ ಪ್ರಜಾಪ್ರಭುತ್ವದ ಬಗ್ಗೆ ಬಿಜೆಪಿಯ ತಿರಸ್ಕಾರ ಇಲ್ಲಿಗೇ ನಿಂತಿಲ್ಲ. ಮೂರು ವರ್ಷಗಳ ಮೋದಿ ಸರಕಾರದ ಆಳ್ವಿಕೆ ಮೂಲಭೂತವಾಗಿ ಅದೊಂದು ಪ್ರಜಾಪ್ರಭುತ್ವ–ವಿರೋಧಿ ಸರಕಾರ ಎಂಬುದನ್ನು ಹೆಜ್ಜೆ–ಹೆಜ್ಜೆಗೂ ಸಾಬೀತು ಮಾಡುತ್ತ ಬಂದಿದೆ.

* ನೋಟು ರದ್ಧತಿ ಇದನ್ನು ಅತ್ಯಂತ ಸ್ಪಷ್ಟವಾಗಿ ತೋರಿಸಿದೆ. ದೇಶದ 90%ದಷ್ಟು ನೋಟುಗಳನ್ನು ಒಂದೇ ಏಟಿಗೆ ರದ್ದು ಮಾಡಿದ ಈ ಕ್ರಮದಿಂದ ದೇಶಕ್ಕೆ, ಜನರಿಗೆ ಆಗಿರುವ ಅಪಾರ ದುಷ್ಪರಿಣಾಮ, ಹಾನಿಗಳ ಬಗ್ಗೆ ಈ ಪತ್ರಿಕೆಯಲ್ಲಿ ಸಾಕಷ್ಟು ಬಾರಿ ಚರ್ಚಿಸಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಇಂತಹ ಮಹತ್ವದ ಕ್ರಮವನ್ನು ಕೈಗೊಳ್ಳುವಾಗ ಪ್ರಧಾನಿಗಳು ತಮ್ಮ ಸಂಪುಟದೊಳಗೂ ಸಮಾಲೋಚನೆ ನಡೆಸಲಿಲ್ಲ, ಇನ್ನು ಮಿತ್ರಪಕ್ಷಗಳನ್ನು, ಸಂಸತ್ತನ್ನು ಕೇಳುವುದಂತೂ ದೂರದ ಮಾತು. ಕೇವಲ ಅವರ ಕೆಲವು ಚಮಚಾಗಳೊಂದಿಗೆ ಸಮಾಲೋಚಿಸಿ ಈ ಅತ್ಯಂತ ವಿಚ್ಛಿದ್ರಕಾರಿ ಕ್ರಮವನ್ನು ಕೈಗೊಳ್ಳಲಾಯಿತು.
* ಪ್ರಜಾಪ್ರಭುತ್ವದ ವಿಧಿ–ವಿಧಾನಗಳನ್ನೆಲ್ಲ ಮೂಲೆಗೊತ್ತಿ, ಮತದಾರರು ತಮ್ಮನ್ನು ತಿರಸ್ಕರಿಸಿದ ಗೋವ ಮತ್ತು ಮಣಿಪುರದಲ್ಲಿ ತಮ್ಮ ಸರಕಾರಗಳನ್ನು ಕೂರಿಸುವಲ್ಲಿಯೂ ಇಂತಹುದೇ ಭಂಡತನದ ಪ್ರದರ್ಶನ ನಡೆಸಿದರು. ಇದಕ್ಕೆ ಮೊದಲು ಅರುಣಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಸರಕಾರವನ್ನು ಬಿಜೆಪಿ ಸರಕಾರವಾಗಿ ಪರಿವರ್ತಿಸಲಾಯಿತು.

ಪುಟ 10 ಕ್ಕೆ

ಕಾರ್ಪೊರೇಟ್ ಸುಸ್ತಿದಾರರಿಗೆ ವರದಾನ!

ಪುಟ 9 ರಿಂದ

ಪಡೆದಿಲ್ಲ.

* ಮೋದಿಯವರಿಗೆ ಆಗಾಗ ಹಾರಾಟಕ್ಕೆ ವಿಮಾನಗಳನ್ನು ಒದಗಿಸುವ ಅದಾನಿಯ ಕಂಪನಿಗಳ ಕೆಟ್ಟ ಸಾಲಗಳ ಮೊತ್ತ 70,000 ಕೋಟಿ ರೂ. ದಾಟಿದೆ ಎಂದು ಅಂದಾಜು ಮಾಡಲಾಗಿದೆಯಂತೆ. ಇವುಗಳಲ್ಲಿ ಬಹುಪಾಲು ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಪಡೆದದ್ದು.

* ಮುಕೇಶ್ ಅಂಬಾನಿಯವರ ಆರ್‌ಜಿಟಿಐಎಲ್‌ಗೆ ಮೋದಿಯವರು ಅಧಿಕಾರ ವಹಿಸಿಕೊಂಡ ನಂತರ ಸಾರ್ವಜನಿಕ ವಲಯದ ಬ್ಯಾಂಕುಗಳು ಉದಾರವಾಗಿ 4500 ಕೋಟಿ ರೂ.ಗಳ 'ಮರುಸಾಲ' ನೀಡಿವೆ, ಮತ್ತು ಮರುಪಾವತಿ ಅವಧಿಯನ್ನು ಒಂದು ದಶಕಕ್ಕೂ ಹೆಚ್ಚಿನ ಅವಧಿಗೆ ವಿಸ್ತರಿಸಲಾಗಿದೆ.

* ಹಣಕಾಸು ಮಂತ್ರಿಗಳ ಪ್ರಕಾರ ಈ ಹೆಚ್ಚಿನ ಕೆಟ್ಟ ಸಾಲಗಳು ವಿದ್ಯುತ್ ಉತ್ಪಾದನೆ, ಮೂಲರಚನೆ, ಗಣಿಗಾರಿಕೆ ಮತ್ತು ಉಕ್ಕು ವಲಯದ ಕಂಪನಿಗಳದ್ದು, ಇವೆಲ್ಲ ದೊಡ್ಡ ಕುಳಗಳ ಒಡೆತನದಲ್ಲಿರುವವುಗಳು. ಅವು ನಿರೀಕ್ಷಿತ ಮಟ್ಟದಲ್ಲಿ ಬೆಳೆಯಲಿಲ್ಲವಾದ್ದರಿಂದ ಸಾಲ ಮರುಪಾವತಿಗೆ ಕಷ್ಟವಾಗಿದೆಯಂತೆ. ಆದರೆ ಇವುಗಳೆಲ್ಲ ತಮ್ಮ ಸ್ಥಾವರಗಳನ್ನು ನಿರ್ಮಾಣ ಮಾಡಿದ್ದು ರೈತರು ಮತ್ತು ಆದಿವಾಸಿಗಳಿಮದ ಕಸಿದುಕೊಂಡ ಸಾವಿರಾರು ಎಕ್ರೆ ಜಮೀನುಗಳಲ್ಲಿ ಎಂಬುದನ್ನು ಮರೆಯುವಂತಿಲ್ಲ.

ಈ ಬಿಲಿಯಾಧಿಪತಿ ಒಡೆಯರುಗಳು ಸುಸ್ತಿ ಮಾಡಿಕೊಂಡ ಸಾಲಗಳಿಗೆ ಪ್ರತಿಯಾಗಿ ಆ ಕಂಪನಿಗಳ ಶೇರುಗಳನ್ನು ಬ್ಯಾಂಕುಗಳಿಗೆ ವರ್ಗಾಯಿಸುವಂತೆ, ಅಥವ ಅವರು ಈ ಕಂಪನಿಗಳಲ್ಲಿ ಹೊಸ ಬಂಡವಾಳ ಹೂಡುವಂತೆ ಮಾಡುವ 'ಬದಲು ಈ ಒಡೆಯರ ಮೇಲ ಯಾವುದೇ ಜವಾಬ್ದಾರಿ ಹಾಕದೆ ಸರಕಾರ ಸಾಲ ಮರುಪಾವತಿಗೆ ಮತ್ತೆ ಸಾಲ ಕೊಡುವುದು, ಮರುಪಾವತಿ ಅವಧಿ ವಿಸ್ತರಿಸುವುದು, ಬಡ್ಡಿ ಪಾವತಿಗೆ ತಾತ್ಕಾಲಿಕ ತಡೆ ಮುಂತಾದ ಕ್ರಮಗಳನ್ನು ಕೈಗೊಂಡು ಉದಾರತೆ ತೋರಿದೆ. ಇದರಿಂದ ಮುಂದೆ ಬ್ಯಾಂಕುಗಳು ಇನ್ನೂ ಹೆಚ್ಚಿನ ನಷ್ಟಗಳನ್ನು ಅನುಭವಿಸಬೇಕಾಗುತ್ತದೆ.

ಯುಪಿಎ ಸರಕಾರದಂತೆ ಬಿಜೆಪಿ ಸರಕಾರದ ಪ್ರಕಾರವೂ, ಪಾಪ, 1.5ಲಕ್ಷ ಕೊಟಿ ರೂ.ಗಳ ಆಸ್ತಿ ಹೊಂದಿರುವ ಮುಕೇಶ್ ಅಂಬಾನಿಗೆ ಸಾಲ ಮರುಪಾವತಿ ಮಾಡಲು ಸರಕಾರದ ನೆರವು ಬೇಕಾಗಿದೆ, ಆದರೆ ತೀವ್ರ ಬರ, ಬೆಳೆ ಹಾನಿಗಳಿಂದ ಸಾಲ ಮರುಪಾವತಿ ಮಾಡಲಾಗದ ಈ ದೇಶದ ರೈತರಿಗೆ ಯಾವ ನೆರವೂ ಬೇಕಿಲ್ಲ, ಅವರು ತಮ್ಮ ಭೂಮಿಯನ್ನು ಮಾರಬೇಕು ಇಲ್ಲವೇ ಆತ್ಮಹತ್ಯೆ ಮಾಡಿಕೊಳ್ಳಬೇಕು!

ರೈತರು ಸಾಲ ಹಿಂದಿರುಗಿಸದಿದ್ದರೆ ಅವರ **ಹೆಸರುಗಳನ್ನು ಸಾರ್ವಜನಿಕಗೊಳಿಸಿ ಅವಮಾನ ಮಾಡುವ, ಅವರ ಅಲ್ಪಸ್ವಲ್ಪ ಆಸ್ತಿಗಳನ್ನೂ ಹರಾಜು ಹಾಕುವ ಸರಕಾರ ಸುಪ್ರಿಂ ಕೋರ್ಟ್ ಹೇಳಿದರೂ ಸಾಲ ಹಿಂದಿರುಗಿಸದ ದೊಡ್ಡ ಕಾರ್ಪೊರೇಟ್ ಕುಳಗಳ ಹೆಸರುಗಳನ್ನು ಪ್ರಕಟಿಸಲು ನಿರಾಕರಿಸುತ್ತಿರುವುದು ಏಕೆ ಎಂಬುದಕ್ಕೆ ಬಿಜೆಪಿ ಹಣಕಾಸು ಮಂತ್ರಿಗಳ ಬಳಿ ಸಬೂಬುಗಳಿಲ್ಲ.**


ತಮಿಳುನಾಡಿನ ರೈತರು ಹಲವು ದಿನಗಳ ಕಾಲ ದಿಲ್ಲಿಗೇ ಹೋಗಿ ಸಂಸತ್ತಿನ ಬಳಿ ಕೂತು ತಮ್ಮ ಸಂಕಟಗಳನ್ನು ತೋಡಿಕೊಂಡರೂ ಈ ಸರಕಾರ ಆ ಕಡೆ ಕಣ್ಣೆತ್ತಿಯೂ ನೋಡಲಿಲ್ಲ. ಅವರ ಒಟ್ಟು ಸಾಲ ಬಾಕಿ 75,000 ಕೋಟಿರೂ. ಆಗಿದ್ದರೆ, ಕೇವಲ ಒಬ್ಬ ಬಂಡವಾಳಿಗ, ಅದಾನಿಯ ಕಂಪನಿಗಳು ಬ್ಯಾಂಕುಗಳಿಗೆ ಕೊಡಬೇಕಾದ ಸಾಲ ಮೊತ್ತ 72,000 ಕೋಟಿ ರೂ. ಆದರೆ ಆತನಿಗೆ ಮಾತ್ರ ಸಾಲ ಮರುಪಾವತಿ ಮಾಡಲು ಉದಾರ ನೆರವು!

ಈ ಕೆಟ್ಟ ಸಾಲಗಳಲ್ಲಿ ಪೋಲಾಗಿರುವುದು ಬಹುಪಾಲು ಸಾರ್ವಜನಿಕರ ಉಳಿತಾಯಗಳು ಮತ್ತು ಜನತೆಗೆ ಸೇರಿದ ಸರಕಾರೀ ವಲಯದ ಹಣ. ಅಂ- ದರೆ ಬ್ಯಾಂಕುಗಳ ನಷ್ಟ ಎಂದರೆ ಜನಗಳದ್ದೇ ನಷ್ಟ. ಈ ನಷ್ಟಗಳ ಮೂಲಕ ಜನಗಳ ಹಣವನ್ನು ಲೂಟಿ ಮಾಡಿದ ಕಾರ್ಪೊರೇಟ್‌ಗಳಿಗೆ ಫ್ರೀ ಪಾಸ್!

ಅಷ್ಟೇ ಅಲ್ಲ, ರಿಝರ್ವ್ ಬ್ಯಾಂಕಿನಲ್ಲಿರುವ ಮೋದಿಯ ಪ್ರಿಯಜನರು ಈ ಕೆಟ್ಟ ಸಾಲಗಳ ಪರಿಹಾರಕ್ಕೆ ಅಮೋಘ ಸಲಹೆಗಳನ್ನು ಕೊಡುತ್ತಿದ್ದಾರೆ. ಇತ್ತೀಚೆಗೆ ಮೋದಿ ಸರಕಾರ ಡೆಪ್ಯುಟಿ ಗವರ್ನರ್ ಆಗಿ ನೇಮಿಸಿದ ವಿರಲ್ ಆಚಾರ್ಯ ಕೆಲವು ಬ್ಯಾಂಕುಗಳನ್ನು ಮತ್ತೆ ಖಾಸಗೀಕರಿಸಿ, ಇನ್ನು ಕೆಲವು ಬ್ಯಾಂಕುಗಳ ಶೇರುಗಳನ್ನು ಖಾಸಗಿಯವರಿಗೆ ಮಾರಿ ಅದರಿಂದ ಬರುವ ಹಣದಿಂದ ಈ ಕೆಟ್ಟ ಸಾಲಗಳ ಪ್ರಶ್ನೆಗೆ ಅಂತಿಮ ಪರಿಹಾರ ಪಡೆಯಬಹುದು ಎಂದಿದ್ದಾರೆ. ರಿಐರ್ವ್ ಬ್ಯಾಂಕ್ ಗವರ್ನರ್ ಅವರಂತೂ ಕೆಟ್ಟ ಸಾಲಗಳಿಂದ ಕಷ್ಟಕ್ಕೊಳಗಾಗಿರುವ ಬ್ಯಾಂಕುಗಳು ಸಹಜ ಸಾವು ಅನುಭವಿಸಲಿ ಎಂದು ಹೇಳುತ್ತಿದ್ದಾರೆ.

ಕೆಟ್ಟ ಸಾಲಗಳಿಂದ ನಷ್ಟಕ್ಕೆ ಒಳಗಾಗಿರುವ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಯಾರು ಖರೀದಿಸುತ್ತಾರೆ, ಅವನ್ನು ನಷ್ಟಕ್ಕೆ ಗುರಿಪಡಿಸಿದ ಅವೇ ಬಿಲಿಯಾಧಿಪತಿ ಕಾರ್ಪೊರೇಟ್ ಕುಳಗಳು ತಾನೇ? ಅವರ ಈ ಘನಂದಾರಿ ಕೆಲಸಕ್ಕೆ ಎಂತಹ ಅಮೋಘ ಬಕ್ಷೀಸು! ಚಮಚಾ ಬಂಡವಾಳಶಾಹಿ ಕಾಯಿಲೆ ಈ ಸರಕಾರದ ಅತ್ಯುನ್ನತ ಮಟ್ಟವನ್ನು ಹೇಗೆ ಆವರಿಸಿಕೊಂಡಿದೆ ಎಂಬುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕಿಲ್ಲ.

ಕಾರ್ಪೊರೇಟ್‌ಗಳಿಗೆ ರಿಯಾಯ್ತಿಗಳ ಮೆಲೆ ರಿಯಾಯ್ತಿಗಳು ಮೋದಿ ಸರಕಾರದ ಮೂರು ವರ್ಷಗಳ ಅಮೋಘ ದಾಖಲೆ. ಯಾವ ಹಣದ ಥೈಲಿಗಳು ತನಗೆ ಅಧಿಕಾರ ಕೊಡಿಸಿವೆಯೋ ಅವರಿಗೆ ಅವರ ಹಣಕಾಸು ಪ್ರಮಾದ, ಅದಕ್ಷತೆಗಳಿಂದ ರಕ್ಷಣೆ ನೀಡಲು ಬದ್ಧ ವಾಗಿರುವ ಸರಕಾರ ತನ್ನ ಈ ದಿವಾಳಿಕೋರ ದಾಯನ್ನು ಬದಲಿಸುವುದಾದರೂ ಹೇಗೆ ಸಾಧ್ಯ?



ಈಗ ರಾಜಕೀಯ ಪಕ್ಷಗಳಿಗೆ ಅನಾಮಧೇಯ ರಾಗಿ ವಂತಿಗೆ ನೀಡಲು ಕಾರ್ಪೊರೇಟ್ ಗಳಿಗೆ ಮುಕ್ತ ಅವಕಾಶ ನೀಡಿರುವಾಗ ಅವರೆಲ್ಲ ಇವರ ಎಂದೂ ಮುಗಿಯದ ಚುನಾವಣಾ ಪ್ರಚಾರಗಳಿಗೆ ಕೃತಜ್ಞತೆಯ ನಿಧಿಗಳ ಮಹಾಪೂರ ಹರಿಸುವುದರಲ್ಲಿ ಸಂದೇಹವೇನೂ ಇಲ್ಲ.

ಸಂವಿಧಾನಿಕ ಹಕ್ಕುಗಳ ಮೇಲೆ ಎಡೆಬಿಡದ ಪ್ರಹಾರಗಳು

ಪುಟ 9 ರಿಂದ

ಉತ್ತರಾಖಂಡದಲ್ಲೂ ಇಂತಹುದೆ ಪ್ರಯತ್ನ ನಡೆಸಲಾಯಿತು.

* ಅಪಾರ ಪ್ರಶ್ನೆಗಳಿದ್ದರೂ ಆಧಾರ್ ವ್ಯವಸ್ಥೆಯನ್ನು ಜನಗಳ ಗಂಟಲಲ್ಲಿ ತೂರುವ ಪ್ರಯತ್ನ ಈ ಸರಕಾರದ ಸರ್ವಾಧಿಕಾರಶಾಹಿಯ ಇನ್ನೊಂದು ಉದಾಹರಣೆ. ಸುಪ್ರಿಂ ಕೋರ್ಟ್‌ನ ಮಧ್ಯಂತರ ಆದೇಶವನ್ನೂ ಲೆಕ್ಕಿಸದೆ ಆಧಾರ್ ಕಾಯ್ದೆಯನ್ನು ಪಾಸು ಮಾಡಿಕೊಂಡಿದೆ. ಅದಕ್ಕೆ ಅನುಸರಿಸಿದ ದಾರಿಯೂ ಸರ್ವಾಧಿಕಾರಶಾಹಿತ್ವದಿಮದ ಕೂಡಿತ್ತು. ಅದನ್ನು ಹಣಕಾಸು ಮಸೂದೆ ಎಂದು ಹೆಸರಿಸಿ, ರಾಜ್ಯಸಭೆ ಚರ್ಚಿಸದಂತೆ ಮಾಡಲಾಯಿತು.

* ಹಣಕಾಸು ಮಸೂದೆಯೆಂಬುದು ಈ ಸರಕಾರ ಎಲ್ಲ ಭಿನ್ನಾಭಿಪ್ರಾಯಗಳನ್ನು ತುಳಿದು ಹಾಕಲು ಬಳಸುತ್ತಿರುವ ಇನ್ನೊಂದು ಪ್ರಜಾಪ್ರಭುತ್ವ-ವಿರೋಧಿ ತಂತ್ರ. ಅದನ್ನು ಮನಬಂದಂತೆ ಬಳಸುತ್ತಿರುವುದು ಈ ಸರಕಾರದ ಮತ್ತೊಂದು 'ಸಾಧನೆ'

* ಶೈಕ್ಷಣಿಕ ಸಂಶೋಧನಾ ಸಂಸ್ಥೆಗಳ ನೇಮಕಗಳಲ್ಲೂ ಇಂತಹುದೇ ನಿರ್ಲಕ್ಷ್ಯ ಧೋರಣೆ ಎದ್ದು ಕಂಡಿದೆ. ಇದಕ್ಕೆ ಇತ್ತೀಚಿನ ಉದಾಹರಣೆ ಎಂದರೆ ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿಯ ಮುಖ್ಯಸ್ಥರ ನೇಮಕ. ಇದರಲ್ಲಿ ಈಗ ಮೋದಿ ಭಕ್ತರ ನಡುವೆಯೇ ಮೇಲಾಟ.

* ಜೆಎನ್‌ಯು, ಹೈದರಾಬಾದ್ ಕೇಂದ್ರೀಯ ವಿವಿಯಲ್ಲಿ ಆರಂಭವಾದ ಭಿನ್ನಾಭಿಪ್ರಾಯಗಳನ್ನು ರಾಷ್ಟ್ರಭಕ್ತಿ, ರಾಜದ್ರೋಹದ ಹೆಸರಿನಲ್ಲಿ ತುಳಿಯುವ ಪ್ರವೃತ್ತಿ ಈಗ ಸಾರ್ವತ್ರಿಕವಾಗಿ ಬಿಟ್ಟಿದೆ. ಮೋದಿ ಮತ್ತು ಸಂಘಪರಿವಾರವನ್ನು ಒಪ್ಪದವರೆಲ್ಲ ದೇಶದ್ರೋಹಿಗಳು, ರಾಷ್ಟ್ರ-ವಿರೋಧಿಗಳು ಎಂಬ ಸರಳ ಸಮೀಕರಣ ಈ ಪ್ರಜಾಪ್ರಭುತ್ವ-ವಿರೋಧಿ ನಿಲುವಿನ ಪ್ರಖರ ಉದಾಹರಣೆ.

* ಈಗ ಉತ್ತರಪ್ರದೇಶದಲ್ಲಿ ಇದು ಪರಾಕಾಷ್ಠೆಯನ್ನು ತಲುಪುತ್ತಿದೆ. ಕಸಾಯಿಖಾನೆಗಳ ನಿಷೇಧ, ರೋಮಿಯೊ-ನಿಗ್ರಹ ಪಡೆಗಳು ಇತ್ಯಾದಿಗಳ ಮೂಲಕ ಸಂಘ ಪರಿವಾರದ ಮಧ್ಯಯುಗೀನ ಕಣ್ನೋಟವನ್ನು ಬಲಪ್ರಯೋಗದಿಂದ ಹೇರುವ ಪ್ರಯತ್ನ ನಡೆದಿದೆ. ಇದನ್ನು ಹೊಸ ಮಾದರಿಯಾಗಿ ಇತರ ರಾಜ್ಯಗಳಿಗೂ ಹರಡಿಸುವ ಪ್ರಯತ್ನ ನಡೆದಿದೆ.

ಅಧಿಕಾರ ವಹಿಸಿಕೊಂಡ ಕೂಡಲೇ ತನಗೆ ಬೇಕಾದ ಪ್ರಿಂಸಿಪಲ್ ಸೆಕ್ರೆಟರಿಯನ್ನು ನೇಮಸಿಕೊಳ್ಳಲು ಆಗಿದ್ದ ಕಾಯ್ದೆಯನ್ನು ಉಲ್ಲಂಘಿಸಲೂ ಹಿಂಜ- ರಿಯದ, ಅದಕ್ಕಾಗಿ ತನ್ನ ಮೊದಲ ಸುಗ್ರೀವಾಜ್ಞೆಯನ್ನು ಮೊದಲ ದಿನವೇ ಪ್ರಯೋಗಿಸಿದ, ನಂತರ ಸ್ವಲ್ಪ ದಿನಗಳಲ್ಲೇ ಹರ್ಯಾಣ ಮತ್ತು ರಾಜಸ್ತಾನದಲ್ಲಿ ಬಹುಪಾಲು ಗ್ರಾಮೀಣ ಮಹಿಳೆಯರು, ದಲಿತರು, ಬುಡಕಟ್ಟು ಜನಗಳು ಪಂಚಾಯತು ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ಅನರ್ಹಗೊಳಿಸುವ ಕ್ರಮಗಳನ್ನು ಕೈಗೊಂಡವರಿಂದ ಈ ಎಲ್ಲ ಪ್ರಜಾಪ್ರಭುತ್ವ-ವಿರೋಧಿ ನಡೆವಳಿಕೆಗಳು, ಸಂವಿಧಾನದ ಮೇಲೆ ದಾಳಿಗಳು ಅನಿರೀಕ್ಷಿತವೇನಲ್ಲ. ಆದರೂ ಇವೀಗ ಮೂರು ವರ್ಷಗಳ ಕೊನೆಯಲ್ಲಿ ಮೋದಿಯವರ ಬಗ್ಗೆ ಅಲ್ಪ- ಸ್ವಲ್ಪ ಅಭಿಮಾನ ಇದ್ದವರನ್ನೂ ಬೆಚ್ಚಿ ಬೀಳಿಸುತ್ತಿವೆ.

'ಸಬ್ ಕಾ ವಿಕಾಸ್' ಮುಖವಾಡ ಕಳಚಿದೆ

ಪುಟ 8 ರಿಂದ

ಎರಡನೇ ವರ್ಷದಲ್ಲಿ ಜಾತ್ಯತೀತ ವಿದ್ಯಾರ್ಥಿ ಸಂಘಟನೆಗಳು ಮತ್ತು ಎಡಪಂಥೀಯ ವಿದ್ಯಾರ್ಥಿ ಆಂದೋಲನದ ಕಾರ್ಯಕರ್ತರ ಮೇಲೆ ನೇರ ದಾಳಿ ನಡೆದರೆ, ಮೂರನೇ ವರ್ಷದಲ್ಲಿ ಈ ಸಂಸ್ಥೆಗಳಲ್ಲಿ ಸಂಶೋಧನೆಗೆ ಪ್ರವೇಶದ ಮೇಲೆಯೇ ದಾಳಿ ನಡೆದಿದೆ. ಇದರ ಇನ್ನೊಂದು ಫಲಶ್ರುತಿಯೆಂದರೆ ಪ್ರಜಾಸತ್ತಾತ್ಮಕ ಶೈಕ್ಷಣಿಕ ವಾತಾವರಣದ ನಾಶ. ಇದು ಈ ಶಿಕ್ಷಣ ಸಂಸ್ಥೆಗಳ ಪ್ರತಿಷ್ಠೆಗೆ ಮಸಿ ಬಳೆಯುತ್ತಿದೆ.

ಮತ್ತೊಂದೆಡೆ, ಇತ್ತೀಚೆಗೆ ಸುದ್ದಿಯಾಗಿರುವ ಆರೆಸ್ಸೆಸ್‌ನ 'ಗರ್ಭ ಸಂಸ್ಕಾರ' ಯೋಜನೆ ಭಾರತೀಯ ವಿಜ್ಞಾನವನ್ನು ನಗೆಪಾಟಲು ಮಾಡುತ್ತಿದೆ. ಹಿಟ್ಲರನ 'ಸುಸಂತಾನಶಾಸ್ತ್ರ'ದಿಂದ ಪ್ರೇರಣೆ ಪಡೆದಿರುವ ಈ ಯೋಜನೆ ಮತ್ತೊಮ್ಮೆ ಸಂಘ ಪರಿವಾರದ ಜನಾಂಗದ್ವೇಷಿ ಪೂರ್ವಾಗ್ರಹಗಳನ್ನು ತೆರೆದಿಟ್ಟಿದೆ.

ಆದರೆ ಇವೆಲ್ಲವೂ ಹಿಂದುತ್ವ ಪಡೆಗಳಿಗೆ ಮೋದಿ ಆಳ್ವಿಕೆಯ 'ಸಾಧನೆಗಳೇ ತಾನೇ! ಆರೆಸ್ಸೆಸ್ ಪ್ರಾಯೋಜಿತ ಶಿಕ್ಷಣ ಧೋರಣೆ ಇನ್ನೂ ಪೂರ್ಣವಾಗಿ ರೂಪ ಪಡೆಯದಿದ್ದರೂ ಅದರ ಅನುಷ್ಠಾನ ವಿವಿಧ ಹಂತಗಳಲ್ಲಿ ನಡೆಯುತ್ತಿದೆ.

* **ಉತ್ತರ ಪ್ರದೇಶದ ಚುನಾವಣಾ ವಿಜಯದ ನಂತರ ಸಂಘ ಪರಿವಾರ ಎಡಪಕ್ಷಗಳ ಮೇಲೆ, ನಿರ್ದಿಷ್ಟವಾಗಿ ಸಿಪಿಐ(ಎಂ) ಮೇಲೆ ಗುರಿಯಿಟ್ಟಿದೆ.** ಇದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ಅವರ 'ಹಿಂದೂರಾಷ್ಟ್ರ' ನಿರ್ಮಾಣದ ಯೋಜನೆಗೆ ಅಡ್ಡಿಯಾಗಿರುವ ಮೂರು ಶತ್ರುಗಳಲ್ಲಿ ಮುಸ್ಲಿಮರು ಮತ್ತು ಕ್ರೈಸ್ತರೊಂದಿಗೆ ಕಮ್ಯುನಿಸ್ಟರೂ ಸೇರಿದ್ದಾರೆ. ಇದರ ಪ್ರಕಾರ ಕೇರಳದಲ್ಲಿ ಎಲ್‌ಡಿಎಫ್ ಸರಕಾರದ ಮೇಲೆ ದಾಳಿ ನಡೆಸಲು ಕೇಂದ್ರದ ಮೋದಿ ಸರಕಾರವನ್ನು ಬಳಸಿಕೊಳ್ಳುವ ಪ್ರಯತ್ನ ನಡೆದಿದೆ. ತ್ರಿಪುರಾದಲ್ಲಿ ಕಮುನಿಸ್ಟ್-ವಿರೋಧಿ ರಂಗವನ್ನು ಕಟ್ಟುವ ಪ್ರಯತ್ನ ನಡೆಸಿದ್ದರೆ, ಪಶ್ಚಿಮ ಬಂಗಾಲದಲ್ಲಿ ಬಹುಸಂಖ್ಯಾತ ಕೋಮುವಾದವನ್ನು ಬೆಳೆಸುವ ಪ್ರಯತ್ನ ನಡೆಯುತ್ತಿದೆ, ಟಿಎಂಸಿ ಅಲ್ಪಸಂಖ್ಯಾತರನ್ನು ಬಳಸಿ ಕೊಳ್ಳುತ್ತಿರುವುದು ಇದರಲ್ಲಿ ಅದಕ್ಕೆ ನೆರವು ಒದಗಿಸುತ್ತಿದೆ. ಇವೆಲ್ಲ ಪ್ರಯತ್ನಗಳು ನಾಲ್ಕನೇ ವರ್ಷದಲ್ಲಿ ಇನ್ನಷ್ಟು ತೀವ್ರಗೊಳ್ಳುವುದು ಖಂಡಿತ.

ಅಂಕಸಾಪುರ ಸರ್ಕಾರಿ ಶಾಲೆ ಜಾಗ ಅತಿಕ್ರಮಣ.....

ಪುಟ 5 ರಿಂದ

ಗದಗ ಜಿಲ್ಲಾ ಸಮಿತಿಯಿಂದ ಸಮಿತಿ ಮನವಿ ಸಲ್ಲಿಸಲಾಯಿತು..

ಒಂದೆಡೆ ರಾಜ್ಯದಲ್ಲಿ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳು ಮುಚ್ಚುತ್ತಿವೆ. ಜಿಲ್ಲೆಯಲ್ಲಿ ಈಗಾಗಲೇ ಖಾಸಗಿ ಶಾಲೆಗಳಲ್ಲಿ ದಾಖಲಾತಿ ಹೆಸರಲ್ಲಿ ಡೋನೆಷನ್ ಮನಬಂದತೆ ಪ್ರಾರಂಭವಾಗಿದೆ. ಬಡ ಹಿಂದುಳಿದ ದಲಿತ ಅಲ್ಪಸಂಖ್ಯಾತರ ಮಕ್ಕಳು ಖಾಸಗಿ ಶಾಲೆಗಳಲ್ಲಿ ಡೋನೆಷನ್ ಪಿಡುಗಿನಿಂದ ಶಾಲೆಗಳಲ್ಲಿ ಓದುವುದು ತುಂಬಾ ದುರದುಷ್ಟಕರವಾಗಿದೆ. ಶಿಕ್ಷಣ ಹಕ್ಕು ಕಾಯ್ದೆ 1983 ಮತ್ತು 2009ರ ಆರ್.ಟಿಇ ಕಾಯ್ದೆ ಜಾರಿಯಾದರೂ ಜಿಲ್ಲೆಯಲ್ಲಿ ಸಮರ್ಪಕವಾಗಿ ಪಾಲನೆಯಾಗುತ್ತಿಲ್ಲ. ಆರ್.ಟಿ.ಇ ಸೀಟು ಮಧ್ಯವರ್ತಿಗಳ ಪಾಲಾಗುತ್ತಿವೆ. ಜಿಲ್ಲೆಯ ಬಹುತೇಕ ಖಾಸಗಿ ಶಾಲೆಗಳಲ್ಲಿ 30 ರಿಂದ 1 ಲಕ್ಷ ರೂ ವರೆಗೂ ವಸೂಲಿ ಮಾಡುವುದರ ಮೂಲಕ ಹಗಲು ದರೋಡೆ ಮಾಡುತ್ತಿದ್ದಾರೆ. ಹಾಗೂ ಅಕ್ರಮವಾಗಿ ಟ್ಯುಷನ್, ಟ್ಯೂಟರಿಯಲ್ಸ್, ಅನದೀಕೃತವಾಗಿ ICSC, CBSC ಹೆಸರಿನಲ್ಲಿ ಶಾಲೆಗಳು ನಡೆಯುತ್ತೀವೆ ಸಮ್ಮರ ಕ್ಯಾಂಪ್, (ಬೇಸಿಗೆ ತರಬೇತಿ ಕೇಂದ್ರ) ಗಳ ಇತ್ಯಾದಿ ಹೆಸರುಗಳಲ್ಲಿ ಶಿಕ್ಷಣವನ್ನು ವ್ಯಾಪಾರೀಕರಣ ಮಾಡಿ ಸರಕಾರದ ನಿಯಮಗಳನ್ನು ಉಲ್ಲಂಘನೆ ಮಾಡಿ ಹಗಲೂ ದರೋಡೆ ಮಾಡುತ್ತಿದ್ದರು ಸಂಬಂಧಿಸಿದ ಅಧಿಕಾರಿಗಳು ಮೌನ ವಹಿಸಿರುವುದೇಕೆ ಎಂದು ಕಿಡಿಕಾರಿದರು.

ಎಸ್‌ಎಫ್‌ಐ ಗದಗ ತಾಲ್ಲೂಕಾ ಅಧ್ಯಕ್ಷರಾದ ವಿರೇಶ ಬೆನಹಾಳ ಮಾತನಾಡಿ ನಿಯಮಗಳ ಪ್ರಕಾರ ಸರ್ಕಾರ ನಿಗದಿಪಡಿಸಿದಂತೆ ಅನುದಾನಿತ ಶಿಕ್ಷಣ ಸಂಸ್ಥೆಗಳು 500 ರೂ. ಅನುದಾನರಹಿತ ಶಿಕ್ಷಣ ಸಂಸ್ಥೆಗಳು ರೂ.600 ಗಳನ್ನು ಮಾತ್ರ ಅಭಿವೃದ್ಧಿ ಶುಲ್ಕ (ಡೆವಲಪ್‌ಮೆಂಟ್ ಫೀ)ನ್ನು ಸಂಗ್ರಹಿಸಲು ಅವಕಾಶವಿದೆ. ಈ ಹಣವನ್ನು ಒತ್ತಾಯದ ಮೂಲಕ ಸಂಗ್ರಹಿಸುವಂತಿಲ್ಲ. ಇದಕ್ಕೂ ಹೆಚ್ಚು ಸಂಗ್ರಹಿಸುವುದು ಕಾನೂನಿನ ಪ್ರಕಾರ ಅಪರಾಧ ಎಂದರು. ಈ ವೇಳೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಗದಗ ತಾಲ್ಲೂಕಾ ಸಮಿತಿ ಕಾರ್ಯದರ್ಶಿ ಸಾಗರ್ ಬೆಲೇರಿ, ಮಂಜುನಾಥ ಚಾಗಣ್ಣವರ, ಶಿವು ಪೂಜಾರ, ಕೃಷ್ಣ ಪೂಜಾರ, ಚೆನ್ನು ಡೊಳ್ಳಿನ ಬಸವರಾಜ ಬೀರಣ್ಣವರ, ಹನಮಂತ ಮಜ್ಜಿಗುಡ್ಡ, ಮಂಜು ಆರಿ, ವಿನಾಯಕ, ಚಂದ್ರು ರಾಠೋಢ ಇತರರು ಇದ್ದರು.

ಶಿವಾನಂದ ಬೋಸ್

ಬಿಜೆಪಿಯ ಬರ ಪ್ರವಾಸ: ಚುನಾವಣಾಡೋಂಗಿ ನಾಟಕ

'ಎತ್ತು ಏರಿಗೆ, ಕೋಣ ನೀರಿಗೆ' ಎಂಬಂತಹ ಸ್ಥಿತಿಯಲ್ಲಿರುವ ರಾಜ್ಯದ ಬಿಜೆಪಿ ಪಕ್ಷ ಮಳೆಗಾಲದ ಆರಂಭದಲ್ಲಿ ಬರ ಅಧ್ಯಯನಕ್ಕೆ ಹೊರಟಿದೆ! ಬಿರು ಬೇಸಿಗೆ ಕಾಲದಲ್ಲಿ ಜನರ ಬವಣೆಗಳತ್ತ ಕಿರು ನೋಟವನ್ನೂ ಬೀರದ ವಿರೋಧ ಪಕ್ಷಕ್ಕೆ ಬರದ ಬಗ್ಗೆ ಜ್ಞಾನೋದಯವಾಗಲು ಕಾರಣವಾದರೂ ಏನು? ಅವರೇ ಹೇಳಿಕೊಂಡಂತೆ ಸರಕಾರದ ವೈಫಲ್ಯಗಳನ್ನು ಎತ್ತಿತೋರಿಸಲು ಇದೀಗ ಹೊರಟಿರುವುದರ ಅರ್ಥ, ನಿಜ ಉದ್ದೇಶವೇನು?

ರಾಜ್ಯದ ಬಿಜೆಪಿಗೆ ಯಡ್ಯೂರಪ್ಪನವರನ್ನು ಅದ್ಯಕ್ಷರನ್ನಾಗಿಸಿದ ಬಳಿಕ ಹಂತ, ಹಂತವಾಗಿ ಹೆಚ್ಚುತ್ತಲೇ ಹೋದ ಭಿನ್ನಮತ ಇನ್ನೂ ಶಮನವೇ ಆಗಿಲ್ಲ, ಬದಲಾಗಿ ತೀವ್ರಗೊಳ್ಳುತ್ತಲೇ ಇದೆ. ಇತ್ತೀಚೆಗೆ ಮೈಸೂರಿನಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಯಾದರೂ ಇದಕ್ಕೆ ಇತಿಶ್ರೀ ಹಾಡಬಹುದೆಂಬ ನಿರೀಕ್ಷೆಯೂ ಹುಸಿಯಾಯಿತು. ಬದಲಾಗಿ ಅದೂ ಕೂಡ ಇವರ ಕದನದ ಕಣವಾಯಿತು. ಯಡ್ಯೂರಪ್ಪ ಮತ್ತು ಈಶ್ವರಪ್ಪನವರ ಬಣಗಳ ನಡುವಿನ ಬಡಿದಾಟವೆಂದು ಬಿಂಬಿಸಲಾಗುತ್ತಿರುವ ಈ ಕಿತ್ತಾಟ ಮೂಲತಃ ಅಧಿಕಾರ ಕೇಂದ್ರಿತ ಮತ್ತು ಇವರಾಚೆ ಅಧಿಕಾರಕ್ಕೆ ಕಾದಿರುವ ಹಲವು ನಾಯಕರ ಹಾಗೂ ಮುಖ್ಯವಾಗಿ ಆರೆಸ್ಸೆಸ್ ನ ಚದುರಂಗದಾಟ. ಆರೆಸ್ಸೆಸ್‌ಗೆ ಇವಾವುದೂ ಇತ್ಯರ್ಥವಾಗುವುದು ಬೇಕಿಲ್ಲ ಕೂಡ. ಈ ಕಿತ್ತಾಟದ ನಡುವೆಯೇ ತನ್ನ ಹಿಡಿತ ಮತ್ತಷ್ಟೂ ಬಲವಾಗಬೇಕು, ತನ್ನ ಮೂರನೆಯ ಸ್ವಯಂಸೇವಕನೊಬ್ಬನನ್ನು ಅಧಿಕಾರದ ಗಾಧಿಗೆ ತಂದು ಕೂಡಿಸುವ ದೀರ್ಘತಂತ್ರವನ್ನು ಅದು ಹೆಣೆದಿದೆ.

ಈ ಕಚ್ಚಾಟ ತೀವ್ರಗೊಂಡಷ್ಟೂ ಅದರ ಹಾದಿ ಸುಲಭ. ಈಗಲೇ ಮುಖ್ಯಮಂತ್ರಿ ಅಭ್ಯರ್ಥಿಯನ್ನು ನಿರ್ಧರಿಸಲಾಗುವ ಕಾರ್ಯಕಾರಿಣಿ ಎಂದೇ ಹೇಳಲಾಗುತ್ತಿದ್ದಾಗಲೇ ಸಂತೋಷ ಎನ್ನುವ ಸ್ವ.ಸೇ.ನನ್ನು ಅಲ್ಲಿ ಬಿಂಬಿಸಿದ್ದು. ಅದಕ್ಕೂ ಮೊದಲು ಸುರೇಶಕುಮಾರ್ ಹೆಸರನ್ನು ಸ್ಯಾಂಪಲ್‌ಗೆ ಕೆಲವರು ತೇಲಿಬಿಟ್ಟದ್ದರು. ಹೀಗಿರುವಾಗಲೂ ಕಚ್ಚಾಟದ ಶಮನಕ್ಕೆ ತಾನು ಯತ್ನಸುತ್ತಿದ್ದೇನೆಂಬ ಸೋಗನ್ನು ಆರೆಸ್ಸೆಸ್ ಬಿಟ್ಟಿಲ್ಲ. ಇರಲಿ ಎಂದು ಸಂಧಾನ ಮಾಡಲು ಮಾದಾರ ಚನ್ನಯ್ಯ ಸ್ವಾಮಿಯವರಿಗೆ ಮದ್ಯವರ್ತಿ ಪಾತ್ರ ವಹಿಸಲು ಹೇಳಿದ್ದಾರೆ. ಆ ಆದೇಶ ಪಾಲನೆಗೆ ಅವರೂ ಓಡಾಡುತ್ತಿದ್ದಾರೆ.(ಪುಕ್ಕಟೆ ಪ್ರಚಾರ, ಮೇಲಾಗಿ ಕರ್ನಾಟಕದ 'ಯೋಗಿ' ತಾವಾಗಬಹುದೆಂಬ ಭ್ರಮೆಯಲ್ಲಿ!) ಹೀಗೆ ಬಿಜೆಪಿ ನಾಯಕರ ಪುಕ್ಕಟೆ ಮನೋರಂಜನೆಯ ನಡುವೆ ಈ ಬರಗಾಲದ ಪ್ರವಾಸ!

ಬರಗೆಟ್ಟವರ ಬರ ಪ್ರವಾಸ!

ಬಿಜೆಪಿ ನಾಯಕರ ಇಂತಹ ಪ್ರವಾಸ ಹೊಸದೂ ಅಲ್ಲ. ಈ ಹಿಂದೆ 2016 ಡಿಸೆಂಬರ್ ಮತ್ತು 2017 ರ ಜನವರಿಯಲ್ಲಿ ಒಂದು ಸುತ್ತಿನ ಬರ ಪ್ರವಾಸ ಮಾಡಿದ್ದರು. ಆಗಲೂ ತೀವ್ರ ಜಗಳದ ಶಮನಕ್ಕೆಂದು ಹೊರಟಿದ್ದರು. ಈಶ್ವರಪ್ಪನವರನ್ನು ಈ ತಂಡದಿಂದ ಕೈ ಬಿಡಲಾಗಿತ್ತು. ಹೀಗಾಗಿ ಬರ ಪ್ರವಾಸ ಎಂಬುದು ಬಿಜೆಪಿ ಜಗಳ ಮರೆಸುವ ಒಂದು ಪ್ರಯತ್ನ.

ಈ ಬರಗಾಲದ ಪ್ರವಾಸ ಖಂಡಿತಕ್ಕೂ ಜನರ ಸಮಸ್ಯೆಗಳನ್ನು ಅರಿಯಲು ಅಥವಾ ಪರಿಹರಿಸಲು ಖಂಡಿತಕ್ಕೂ ಅಲ್ಲವೇ ಅಲ್ಲ ಎಂಬುದು ಅದರ ನಡೆ ಮತ್ತು ನುಡಿಗಳಲ್ಲಿ ಸ್ಪಷ್ಟವಾಗುತ್ತದೆ. ನಿಜ ಕಾಳಜಿ ಇದ್ದರೆ ರಾಜ್ಯ ಸರಕಾರ ನೀಡಿದ ವರದಿಯನ್ನು ಆಧರಿಸಿ ಅಥವಾ ಕೇಂದ್ರ ತಂಡ ಮಾಡಿದ ಸಮೀಕ್ಷೆ ಅನುಸರಿಸಿ ಅನುದಾನ ಬಿಡುಗಡೆ ಮಾಡಿಸಬಹುದಿತ್ತು. ಈ ಮೊದಲೇ ಗದ್ದಲ ಎಬ್ಬಿಸಬಹುದಿತ್ತು. ಆದರೆ ಇವಾವುವೂ ಬೇಕಿಲ್ಲ ಎಂಬುದೇ ಇಲ್ಲಿನ ವಿಚಾರ.

ಮೇ 18 ರಿಂದ ಆರಂಭಗೊಂಡ 36 ದಿನಗಳ ಈ ಪ್ರವಾಸದ ನೀಲ ನಕ್ಷೆ ಪ್ರಕಟಿಸಿದ ಯಡ್ಯೂರಪ್ಪನವರ ರೂಪುರೇಷೆಗಳೂ, ನಡೆಯುತ್ತಿರುವ ವಿದ್ಯಮಾನಗಳು ಸಹ ಪಡಿಸುತ್ತವೆ. ಈ ಪ್ರವಾಸಕ್ಕೆ' ಜನ ಸಂಪರ್ಕ ಅಭಿಯಾನ' ಎಂದು ಪ್ರಕಟಿಸಲಾಗಿದೆ. ಹೋದಲ್ಲೆಲ್ಲಾ ಬಿಜೆಪಿ ಕಾರ್ಯಕರ್ತರ ಸಭೆಗಳು–ಸಮಾವೇಶಗಳು, ನಾಯಕರೊಂದಿಗೆ ಸಮಾಲೋಚನೆಗಳು, ಸಂಭವನೀಯ ಹಾಗೂ ಕಣಕ್ಕಿಳಿಯಲು ಸಿದ್ಧವಿರುವ ಅಭ್ಯರ್ಥಿಗಳ ಬಗ್ಗೆ ಚರ್ಚೆ, ಕಾಂಗ್ರೆಸ್, ಜೆ.ಡಿ.ಎಸ್ ಪಕ್ಷಗಳ ಬಲಾಬಲಾ ಸಮೀಕ್ಷೆ, ಜಾತಿ ಸಮೀಕರಣ ವಿಶ್ಲೇಷಣೆ, ಕೊನೆಗೆ ಅಭ್ಯರ್ಥಿಗಳ ಕರಡು ಪಟ್ಟಿ ತಯಾರಿಕೆ, ಇತ್ಯಾದಿ, ಇತ್ಯಾದಿ. ಅಂದರೆಇಲ್ಲಿ ಬರ ಎಂಬುದಕ್ಕೆ ಜಾಗವೆಲ್ಲಿದೆ?

ದಲಿತರಿಗೆ ಅವಮಾನ

ಇದು ಪಕ್ಕಾ ರಾಜಕೀಯ ಚುನಾವಣಾ ಸಿದ್ಧತೆಯ ಯಾತ್ರೆ. ಬರ ವೆಂಬುದು ಒಂದು ನೆಪ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತವೆ. ಇದನ್ನು ಗಮನದಲ್ಲಿರಿಸಿಯೇ ಯಡ್ಯೂರಪ್ಪನವರ ತಂಡ ದಲಿತರ ಕಾಲೋನಿಗಳಿಗೆ ಭೇಟಿ ನೀಡುವುದು, ಅಲ್ಲಿ ಉಪಹಾರ, ಊಟ ಮಾಡುವುದು ನಡೆದೇ ಇದೆ. ವಾಲ್ಮೀಕಿ ಜನಾಂಗದ ಮನೆಗಳಿಗೂ, ಕುರುಬರ ಮನೆಗೂ ಭೇಟಿ ಮಾಡಲಾಗುತ್ತಿದೆ. ವಿಪರ್ಯಸ ಎಂದರೆ ಚಿತ್ರದುರ್ಗದಲ್ಲಿ ದಲಿತರ ಮನೆಗೆ ಹೋದ ಈ ನಾಯಕರು ತಿಂಡಿಯನ್ನು ಹೋಟೆಲಿನಿಂದ ತರಿಸಿ ತಿಂದರು! ಎಂತಹ ನಾಚಿಕೆಗೇಡು! ಇದು ದಲಿತರಿಗೆ ಬಗೆವ ದ್ರೋಹ, ಅವಮಾನವಲ್ಲವೇ? ದಲಿತರ ಮನೆಯಲ್ಲಿ ಊಟ ಮಾಡುವಾಗ ಈ ನಾಯಕರ ಮುಖದಲ್ಲಿ ಕಾರಿಕೊಳ್ಳುತ್ತಿದ್ದ ಅಸಹನೆ ಅಸಹ್ಯ ಹುಟ್ಟಿಸುವಂತಿತ್ತು! ಇದು ವ್ಯಾಪಕವಾಗಿ ಟೀಕೆಗೆ ಗುರಿಯಾಯಿತು. ಬಳಿಕ ಶಿಗ್ಗಾವಿಯಲ್ಲಿ ದಲಿತರ ಮನೆಯ ಊಟ ಮಾಡಿದರಂತೆ. ಮನದೊಳಗೆ ದಲಿತರು, ಕೆಳ ಜಾತಿ ಜನರ ಬಗ್ಗೆ ಅಸಹನೆ, ತಾರತಮ್ಯ ಭಾವನೆ ಇರಿಸಿಕೊಂಡಿರುವುದು ಖಂಡನೀಯ. ಇಂತಹ ವಂಚನೆಯ, ಢೋಂಗೀ ನಾಟಕಗಳಿಂದ ಹೇಗಾದರೂ ದಲಿತರ ಓಟು ಕಿತ್ತಿಕೊಳ್ಳಬೇಕೆಂಬ ಚುನಾವಣಾ ಕುತಂತ್ರ ಎದ್ದು ಕಾಣುತ್ತದೆ. ಉತ್ತರ ಪ್ರದೇಶ ಮತ್ತು ದೇಶದ ಇತ–ರೆಡೆ ಸಂಘ ಪರಿವಾರವು ದಲಿತರನ್ನು ಕಗ್ಗೊಲೆ, ಧಾಳಿಗಳನ್ನು ಮಾಡುತ್ತಿದ್ದರೆ, ಇತ್ತ ತಾನು ದಲಿತರ ಪರ ಎಂಬ ನಾಟಕ ಆಡುತ್ತಿದೆ.

ಚುನಾವಣಾ ತಾಲೀಮು

ಇವೆಲ್ಲವೂ ಮುಂದೆ ಆಗಸ್ಟ್‌ನಲ್ಲಿ ಅಮಿತ್ ಶಾ ಕರ್ನಾಟಕಕ್ಕೆ ಬರುವ ಮೊದಲಿನ ಸಿದ್ಧತೆಗಳಂತೆ!

ಒಂದೆಡೆ ಯಡ್ಯೂರಪ್ಪನ ಮೂಲಕ ಲಿಂಗಾಯತರ ಓಟು ಗ್ಯಾರಂಟಿ ಅಂದು ಕೊಂಡಿದ್ದರೆ, ಕಾಂಗ್ರೆಸ್ ನ ಅದ್ಯಕ್ಷರ ಬದಲಾವಣೆ ನಿರೀಕ್ಷೆಯಲ್ಲಿ ದಲಿತರ ಓಲೈಕೆಗೂ ಹೊರಟಿದೆ. ಒಂದಂತೂ ಸತ್ಯ, ಉತ್ತರ ಪ್ರದೇಶದ ಚುನಾವಣೆ ಬಳಿಕ ಅದಕ್ಕೆ ಮೂಡಿದ್ದ ಆಶೆ, ಕರ್ನಾಟಕದಲ್ಲಿಯೂ ಅಧಿಕಾರ ಹಿಡಿಯುವ ಭಾರೀ ಭರವಸೆ ಕ್ಷೀಣಿಸಿದೆ. ಒಂದೆಡೆ ಮೋದಿ ಸರಕಾರ ಏನೆಲ್ಲಾ ಮೋಡಿ ಮಾಡಲು ಯತ್ನಿಸದರೂ ಸರಕಾರ ಹೇರುತ್ತಿರುವ ಸಂಕಷ್ಟಗಳ ಬಗ್ಗೆ ಜನ ಎಚ್ಚರಗೊಳ್ಳುತ್ತಿರುವುದು, ಕೆಂದ್ರ ಸರಕಾರದ ವೈಫಲ್ಯಗಳು ಮತ್ತು ಆಂತರಿಕ ಕಿತ್ತಾಟಗಳಿಂದ ಜನ ಬೇಸರಿಸಿಕೊಳ್ಳುತ್ತಿದ್ದಾರೆ. ಹೀಗಾಗಿಯೇ ಯುದ್ದೋನ್ಮಾದ ಬಿತ್ತುವಲ್ಲಿ ಕೇಂದ್ರ ಸರಕಾರ ತೊಡಗಿದೆ.

ಬಿಜೆಪಿಯ ಈ ವಂಚಕ ಆಟಗಳನ್ನು ಜನ ಅರಿಯಬೇಕಿದೆ. ನಿಜ, ಕಾಂಗ್ರೆಸ್ ಸರಕಾರ ಬರ ಕಾಮಗಾರಿ, ಪರಿಹಾರ ಒದಗಿಸುವಲ್ಲಿ ಸಾಧ್ಯವಿರುವ ಮತ್ತು ಮಾಡಬೇಕಾದುದನ್ನೂ ಮಾಡದೇ ವಿಫಲವಾಗಿರುವುದನ್ನು ಪ್ರತಿಭಟಿಸಬೇಕು. ಆದರೆ ಅದೇ ಹೊತ್ತಿನಲ್ಲಿ ಜನರ ಅತೃಪ್ತಿ ಬಳಸಿ ಬಿಜೆಪಿ ಅಧಿಕಾರ ಹಿಡಿಯಲು ಅವಕಾಶವನ್ನೂ ನೀಡ ಕೂಡದು. ಎಚ್ಚರ ಸದಾ ಅಗತ್ಯ.

ಎಸ್. ವೈ. ಗುರುಶಾಂತ್

ಪ. ಬ. ಪೋಲೀಸ್ ದೌರ್ಜನ್ಯದ ವಿರುದ್ಧ ಪ್ರತಿಭಟನೆ





ಮೇ 22ರಂದು ಕೊಲ್ಕತಾದಲ್ಲಿ ಪಶ್ಚಿಮ ಬಂಗಾಲದ ರಾಜ್ಯ ಆಡಳಿತದ ಕೇಂದ್ರವಾದ ನಬನ್ನಾದಲ್ಲಿ ನೆರೆದಿದ್ದ ಶಾಂತಿಯುತ ಪ್ರತಿಭಟನಾಕಾರರೊಂದಿಗೆ ಟಿಎಂಸಿ ಸರಕಾರದ ಪೋಲೀಸರು ಅತ್ಯಂತ ಅಮಾನುಷವಾಗಿ ವರ್ತಿಸಿದ್ದಾರೆ. ಇದರಿಂದಾಗಿ 900ಕ್ಕೂ ಹೆಚ್ಚು ಪ್ರತಿಭಟನಾಕಾರರಿಗೆ ತೀವ್ರ ಗಾಯಗಳಾಗಿವೆ, ನೂರಕ್ಕೂ ಹೆಚ್ಚು ಮಂದಿ ಗಂಭೀರ ಸ್ಥಿತಿಯಲ್ಲಿದ್ದಾರೆ.

ರಾಜ್ಯದ ಎಡಪಂಥೀಯ ರೈತ ಮತ್ತು ಕೃಷಿಕೂಲಿಕಾರರ ಸಂಘಟನೆಗಳು ತಮ್ಮ 18 ಅಂಶಗಳ ಬೇಡಿಕೆಗಳ ಮೇಲೆ ಈ ಪ್ರತಿಭಟನಾ ಕಾರ್ಯಕ್ರಮಕ್ಕೆ ಕರೆ ನೀಡಿದ್ದವು. ಪಶ್ಚಿಮ ಬಂಗಾಲದ ಗ್ರಾಮೀಣ ಪ್ರದೇಶಗಳಲ್ಲಿ ಜನಗಳ ಮೇಲೆ ಹೇರಿರುವ ಸಂಕಟಗಳನ್ನು ಬಿಂಬಿಸುವ, ಇವುಗಳಿಂದ ಪರಿಹಾರ ಒದಗಿಸಲು ರಾಜ್ಯ ಸರಕಾರ ಜನಪರ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸುವ ಬೇಡಿಕೆಗಳಿವು.

ತೃಣಮೂಲ ಕಾಂಗ್ರೆಸ್ ಸರಕಾರದ ಈ ಗೂಂಡಾಗಿರಿಯನ್ನು ಖಂಡಿಸಿ ರಾಜ್ಯದ ಹಲವು ಕಡೆ ಪ್ರತಿಭಟನೆಗಳು ನಡೆದಿವೆ.

ನಾಳಿನ ಕಾರ್ಯಕ್ರಮಗಳು

- **ಮಹಾ ಕಾಲ್ನಡಿಗೆ ಜಾಥಾ,** ಮೇ 16–ಜೂನ್ 3, ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ
- **"ಸಂವಿಧಾನದ ಮೂಲಭುತ ಆಶಯಗಳು ಮತ್ತು ಸವಾಲುಗಳು" ವಿಚಾರ ಸಂಕಿರಣ,** ಮೇ 24, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಜನಸಂಘಟನೆ, ಮೈಸೂರು
- **ಕೆ.ಆರ್.ಶ್ರೀಯಾನ್ ಅಭಿನಂದನ ಮತ್ತು ಆತ್ಮಕಥನ ಲೋಕಾರ್ಪಣೆ,** ಮೇ 28, ಮಂಗಳೂರು
- **ಖಾಸಗೀಕರಣದ ವಿರುದ್ಧ ಸಾರ್ವಜನಿಕ ಉದ್ಯಮಗಳ ಮುಷ್ಕರ, ಮೈಸೂರು ಕೋಲಾರ** ಬಂದ್ ಮೇ 30, ಜೆ.ಎ.ಎಫ್.
- **"ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ" ಕಾರ್ಯಾಗಾರ,** ಜೂನ್ 3–4, ಸಿ.ಐ.ಟಿ.ಯು. ಬೆಂಗಳೂರು
- **ರಾಜ್ಯ ಮಟ್ಟದ "ಸಂವಿಧಾನ ಉಳಿಸಿ ದೇಶಪ್ರೇಮಿ" ಸಮಾವೇಶ** ಜೂನ್ 11, ಮೈಸೂರು
- **ಬಗರ್ ಹುಕುಂ ಸಕ್ರಮಕ್ಕೆ ಪ್ರಚಾರಾಂದೋಲನ,** ಕರ್ನಾಟಕ ಪ್ರಾಂತ ರೈತಸಂಘ, ಜೂನ್ 1–2ನೇ ವಾರ
- **ಕಟ್ಟಡ ಕಾರ್ಮಿಕರ ರಾಜ್ಯ ಸಮ್ಮೇಳನ** ಜುಲೈ 1–2, ಕುಂದಾಪುರ

ಈ ವಾರ ಚರಿತ್ರೆಯಲ್ಲಿ

ಮೇ 28 1955

ಅಸ್ಪೃಶ್ಯತೆ ಅಪರಾಧಗಳು ಕಾಯಿದೆ

ಸಂವಿಧಾನದ ಕಲಮು 17ರ ಪ್ರಕಾರ ಅಸ್ಪೃಶ್ಯತೆ ಮತ್ತು ಅದನ್ನು ಯಾವುದೇ ರೂಪದಲ್ಲಿ ಆಚರಿಸುವುದನ್ನು ನಿಷೇಧಿಸಲಾಯಿತು. ಆದರೆ ಆಹಾರ ಹಂಚಿಕೊಳ್ಳುವುದು, ದೇವಾಲಯ ಬಾವಿ ಮುಂತಾದ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶ, ಪ್ರಾರ್ಥನೆ ಮತ್ತು ಧಾರ್ಮಿಕ ವಿಧಿ–ವಿಧಾನಗಳನ್ನು ಆಚರಿಸುವುದರಲ್ಲಿ ತಾರತಮ್ಯಗಳು ಮುಂದುವರೆದಿದ್ದು, ಸಂವಿಧಾನಿಕ ನಿಷೇಧವನ್ನು ಜಾರಿಗೆ ತರಲು ಸಂವಿಧಾನ ಅಂಗೀಕರಿಸಿ 5 ವರ್ಷಗಳ ನಂತರ ಈ ಕಾಯಿದೆಯನ್ನು ಪಾರ್ಲಿಮೆಂಟು ಪಾಸು ಮಾಡಿತು. ಮೇಲೆ ಹೇಳಿದ ಆಚರಣೆಗಳನ್ನು ಅಸ್ಪೃಶ್ಯತೆ ಎಂದು ಪರಿಗಣಿಸುವುದು ಮತ್ತು ಅದನ್ನು ಆಚರಿಸುವ ವ್ಯಕ್ತಿ ಆಪಾದಿತ ಎಂದು ಪರಿಗಣಿಸುವುದು ಹಾಗೂ ಅದನ್ನು ಅಲ್ಲಗಳೆಯುವ ಜವಾಬ್ದಾರಿಯನ್ನು ಆಪಾದಿತನ ಮೇಲೆ ಹೊರಿಸುವುದು ಕಾಯಿದೆಯ ಮುಖ್ಯ ಅಂಶವಾಗಿತ್ತು. ಆದರೆ ಶಿಕ್ಷೆಯ ಪ್ರಮಾಣ ಮುಂತಾದ ಹಲವು ನ್ಯೂನತೆಗಳಿಂದಾಗಿ ಕಾನೂನಿನಲ್ಲಿ ಬದಲಾವಣೆ ತರಬೇಕಾಯಿತು. ಈಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು (ದೌರ್ಜನ್ಯಗಳ ತಡೆ) ಕಾಯಿದೆ 1989 ಮತ್ತು 1995ರಲ್ಲಿ ಅದರಡಿ ರೂಪಿಸಲಾದ ನಿಯಮಗಳು ಜಾರಿಯಲ್ಲಿವೆ.

ಬೆಳೆ ವಿಮೆ–ರೈತರಿಗಾಗಿಯೋ ಅಥವ ಖಾಸಗಿ ವಿಮಾಕಂಪನಿಗಳಿಗೋ?

ಬಿಜೆಪಿ ಸರಕಾರ ಜನವರಿ 13, 2016 ರಂದು ಬಹಳ ಸದ್ದುಗದ್ದಲಗಳ ನಡುವೆ 'ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ' (ಪಿಎಂಎಫ್‌ಬಿವೈ) ವನ್ನು ಪ್ರಕಟಿಸಿತು. ಈ ವರ್ಷ ಬಜೆಟ್ ಮಂಡಿಸುತ್ತ ಹಣಕಾಸು ಮಂತ್ರಿಗಳು "ಬಿತ್ತನೆ ಮಾಡುವಾಗ ರೈತರಿಗೆ ಹವಾಮಾನ ವೈಪರೀತ್ಯಗಳಿಂದ ಭದ್ರತೆ ಬೇಕೆನಿಸುತ್ತದೆ. ಈ ಬೆಳೆ ವಿಮಾ ಯೋಜನೆ ಆ ದಿಕ್ಕಿನಲ್ಲಿ ಒಂದು ದೊಡ್ಡ ಹೆಜ್ಜೆ. ಈ ಯೋಜನೆಯ ಅಡಿಯಲ್ಲಿ ರಕ್ಷಣೆಯನ್ನು 2016–17ರ 30% ಬೆಳೆ ಪ್ರದೇಶದಿಂದ 2017–18ರಲ್ಲಿ 40% ಕ್ಕೆ, 2018–19ರಲ್ಲಿ 50%ಕ್ಕೆ ಏರಿಸಲಾಗುವುದು. 2016–17ರ ಬಜೆಟ್ ಅಂದಾಜಿನಲ್ಲಿ ಕೊಟ್ಟಿದ್ದ 5500 ಕೋಟಿ ರೂ.ಗಳನ್ನು ಬಾಕಿ ಉಳಿದಿರುವ ದಾವೆಗಳ ಇತ್ಯರ್ಥಕ್ಕಾಗಿ 13240 ಕೋಟಿ ರೂ.ಗೆ ಪರಿಷ್ಕೃತ ಬಜೆಟಿನಲ್ಲಿ ಏರಿಸಲಾಯಿತು. 2017–18ಕ್ಕೆ 9000 ಕೋಟಿ ರೂ. ಕೊಟ್ಟಿದ್ದೇನೆ" ಎಂದರು. ಈ ಯೋಜನೆಯ ಅಡಿಯಲ್ಲಿ ವಿಮಾ ರಕ್ಷಣೆ 69 ಸಾವಿರ ಕೋಟಿ ರೂ.ನಿಂದ 1.42 ಲಕ್ಷ ಕೋಟಿ ರೂ.ಗೆ ಏರಿದೆ ಎಂದೂ ಅವರು ಹೇಳಿದರು.

ಆದರೆ ನಂತರ ಎಪ್ರಿಲ್ 7ರಂದು ರಾಜ್ಯಸಭೆಗೆ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯಮಂತ್ರಿಗಳು ನೀಡಿದ ಉತ್ತರದಲ್ಲಿ 2016–17ರ ಮುಂಗಾರು ಸೀಜನ್‌ನಲ್ಲಿ 4270.55 ಕೋಟಿ ರೂ.ಗಳ ದಾವೆಗಳನ್ನು ಇತ್ಯರ್ಥ ಮಾಡಲಾಗಿದೆ ಎಂದು ತಿಳಿಸಿದರು. ಇದು 2016–17 ರ ಬಜೆಟ್ ಅಂದಾಜಿಗಿಂತಲೂ ಕಡಿಮೆ. ಹಾಗಿದ್ದರೆ **'ಬಾಕಿ ದಾವೆ ಇತ್ಯರ್ಥ'ದ ಪ್ರಶ್ನೆ ಎಲ್ಲಿಂದ ಬಂತು ಎಂದು ಹಣಕಾಸು ಮಂತ್ರಿಗಳು ರೈತರಿಗೆ ಮತ್ತು ಸಾರ್ವಜನಿಕರಿಗೆ ವಿವರಿಸಬೇಕಾಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಹೇಳಿದೆ.**

ಹಣಕಾಸು ಮಂತ್ರಿಗಳು ಈ ವಿಮಾರಕ್ಷಣೆ ಒದಗಿಸಲು ಸರಕಾರ ನೆಚ್ಚಿಕೊಂಡಿರುವ ಖಾಸಗಿ ವಿಮಾಕಂಪನಿಗಳಿಗೆ ಪ್ರೀಮಿಯಂ ತೆರಲು ಸರಕಾರೀ ಖಜಾನೆಯಿಂದ ಅಂದರೆ ಜನಗಳ ಹಣವನ್ನು ಬಳಸಿದ್ದು ಸರಿಯೇ ಎಂಬ ಪ್ರಶ್ನೆ ಇದರಿಂದ ಸಹಜವಾಗಿ ಎದ್ದಿದೆ.

ಈ ಪಿಎಂಎಫ್‌ಬಿವೈ ಅಡಿಯಲ್ಲಿ ಸರಕಾರ ಪಟ್ಟಿ ಮಾಡಿದ ಖಾಸಗಿ ವಿಮಾ ಕಂಪನಿಗಳಿಗೆ, ಅಂದರೆ ಐಸಿಐಸಿಐ–ಲೊಂಬಾರ್ಡ್, ಇಫ್ಕೊ–ಟೋಕ್ಯೊ, ಚೋಳಮಂಡಲಂ ಎಂಎಸ್, ಬಜಾಜ್ ಅಲಯನ್ಸ್, ರಿಲಯನ್ಸ್, ಫ್ಯುಚರ್ ಜನರಾಲಿ, ಟಾಟಾ–ಎಐಜಿ, ಎಸ್‌ಬಿಐ ಜನರಲ್ ಮತ್ತು ಯುನಿವರ್ಸಲ್ ಸೊಂಪೊ ಕಂಪನಿಗಳಿಗೆ 2016–17ರಲ್ಲಿ ತೆತ್ತ ಪ್ರೀಮಿಯಂ ಮೊತ್ತ 21,500 ಕೋಟಿ ರೂ. ಆದರೆ ಎಪ್ರಿಲ್ 7, 2017 ರ ವರೆಗೆ ಬಂದಿರುವ 4270.55 ಕೋಟಿ ರೂ. ದಾವೆಗಳಲ್ಲಿ ಇತ್ಯರ್ಥ ಮಾಡಿರುವ ದಾವೆಗಳ ಮೊತ್ತ ಕೇವಲ 714.14 ಕೋಟಿ ರೂ. ಅಂದರೆ **ಮುಂಗಾರು ಸೀಜನ್ನಿನಲ್ಲಿ ಬಂದ ದಾವೆಗಳು ಇವು ಪಡೆದ ಪ್ರೀಮಿಯಂ ಮೊತ್ತದ ಕೇವಲ 20% ವಾದರೆ ಇತ್ಯರ್ಥ ಮಾಡಿದ್ದು ಕೇವಲ 3.31%.**

ಅಂದರೆ 21,000 ಕೋಟಿ ರೂ.ನ 97% ಜನತೆಯ ಹಣ ಈ ಖಾಸಗಿ ವಿಮಾ ಕಂಪನಿಗಳ ಲಾಭಕ್ಕೆ ಜಮಾ ಆಗಿದೆಯೇ? ಇದು ಎಐಕೆಎಸ್ ಮತ್ತು ಸಾರ್ವಜನಿಕರ ಮುಂದೆ ಎದ್ದಿರುವ ಪ್ರಶ್ನೆ.

ಹಿಂದಿನ ವರ್ಷ 2015–16ರಲ್ಲಿ ಬೆಳೆ ವಿಮಾಯೋಜನೆಗೆ ನೀಡಿದ ಮೊತ್ತ 5700 ಕೋಟಿ ರೂ. ಅಂದರೆ 2016–17 ರಲ್ಲಿ ವಿಮಾ ಕಂಪನಿಗಳು ಪಡೆದ ಪ್ರೀಮಿಯಂ ಮೊತ್ತ ಇದರ ನಾಲ್ಕು ಪಟ್ಟು.

ಹಿಂದಿನ ಬೆಳೆ ವಿಮಾ ಯೋಜನೆಗಳಲ್ಲಿ ರಕ್ಷಣೆ ಪಡೆದ ರೈತರ ಸಂಖ್ಯೆ 2013–14ರಲ್ಲಿ 332.35 ಲಕ್ಷ, 2014–15ರಲ್ಲಿ 370.32 ಲಕ್ಷ, 2015–16ರಲ್ಲಿ 407.45 ಲಕ್ಷ ಮತ್ತು 2016–17ರಲ್ಲಿ 562.96 ಲಕ್ಷ.

ಅಂದರೆ 2016–17ರಲ್ಲಿ ನಾಲ್ಕು ಪಟ್ಟು ಪ್ರೀಮಿಂಯಂ ಹೆಚ್ಚಳ ವಿಮಾರಕ್ಷಣೆ ಪಡೆದಿರುವ ರೈತರ ಸಂಖ್ಯೆಯಲ್ಲಿ ಹೆಚ್ಚಳಕ್ಕೆ ಅನುಗುಣವಾಗಿದೆಯೇ? 38% ಹೆಚ್ಚು ರೈತರಿಗೆ ವಿಮಾರಕ್ಷಣೆ ನೀಡಲು ನಾಲ್ಕು ಪಟ್ಟು ಪ್ರೀಮಿಯಂ ತೆರಬೇಕೇ?

ಸಹಜವಾಗಿ ಇದರಲ್ಲಿ ಒಂದು ಗಂಭೀರ ಹಗರಣದ ವಾಸನೆ ಇದೆ ಎನ್ನುವ ಎಐಕೆಎಸ್ ಅಭಿಪ್ರಾಯದಲ್ಲಿ ಹುರುಳಿದೆ.

ಈ ಹೊಸ ಫಸಲ್ ಬಿಮಾ ಯೋಜನೆ ಆರಂಭಿಸುವಾಗ ಎಐಕೆಎಸ್ ಖಾಸಗಿ ವಿಮಾ ಕಂಪನಿಗಳಿಗೆ ಇದನ್ನು ವಹಿಸುವ ಬದಲು ಸಾರ್ವಜನಿಕ ವಲಯದ ವಿಮಾಕಂಪನಿಗಳು ಕೇಂದ್ರ ಮತ್ತು ರಾಜ್ಯ ಸರಕಾರಗಳ ಗಮನಾರ್ಹ ಬೆಂಬಲದೊಂದಿಗೆ ಇದನ್ನು ನಿರ್ವಹಿಸುವಂತಾಗಬೇಕು ಎಂದು ಆಗ್ರಹಿಸಿತ್ತು.

38% ಹೆಚ್ಚು ರೈತರಿಗೆ ರಕ್ಷಣೆ ಒದಗಿಸಲು 400% ದಷ್ಟು ಹೆಚ್ಚು ಪ್ರೀಮಿಯಂ ತೆರುವುದು, ಖಾಸಗಿ ಕಂಪನಿಗಳ ಲಾಭಕೋರತನಕ್ಕೆ ಸಾರ್ವಜನಿಕ ಸಂಸನ್ಮೂಲಗಳನ್ನು ಇಚ್ಛಾಪೂರ್ವಕವಾಗಿ ಒದಗಿಸುವುದು ಒಂದು ಭ್ರಷ್ಟ ಆಚರಣೆ, ಪಕ್ಷಪಾತ ಮತ್ತು ರಾಜಕೀಯ ದುರುದ್ದೇಶದ ಹಣಕಾಸು ಇತ್ಯಾದಿಗಳ ವಿತರಣೆ ಎಂದು ಎಐಕೆಎಸ್ ಟೀಕಿಸಿದೆ.



ಚುನಾವಣಾ ಆಯೋಗದ ಪ್ರಕಾರವೂ ಚುನಾವಣಾ ಬಾಂಡ್ ಪ್ರತಿಗಾಮಿ ಹೆಜ್ಜೆ

"ಚುನಾವಣಾ ಬಾಂಡುಗಳ ಮೂಲಕ ಪಡೆದ ವಂತಿಗೆಗಳನ್ನು ವರದಿ ಮಾಡುವ ಅಗತ್ಯ ಇನ್ನು ಇಲ್ಲ ಎಂದು ಜನತಾ ಪ್ರಾತಿನಿಧ್ಯ ಕಾಯ್ದೆ, 1951ರ ಸೆಕ್ಷನ್ 29ಸಿ ಯ ತಿದ್ದುಪಡಿ ಒಂದು ಪ್ರತಿಗಾಮಿ ಕ್ರಮ. ಏಕೆಂದರೆ ಈ ಬದಲಾವಣೆಯಿಂದ ರಾಜಕೀಯ ವಂತಿಗೆಯಲ್ಲಿ ಪಾರದರ್ಶಕತೆಗೆ ಕುತ್ತು ಬರುತ್ತದೆ" ಎಂದು ಭಾರತದ ಚುನಾವಣಾ ಆಯೋಗ ಈ ಬಗ್ಗೆ ಪರಿಶೀಲಿಸುತ್ತಿರುವ ಕಾನೂನು ಮತ್ತು ಸಿಬ್ಬಂದಿ ಕುರಿತ ಸಂಸದೀಯ ಸ್ಥಾಯಿ ಸಮಿತಿಗೆ ಸಲ್ಲಿಸಿರುವ ಲಿಖಿತ ಉತ್ತರದಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಇಬ್ಬರು ಉಪ ಚುನಾವಣಾ ಆಯುಕ್ತರು ಸೇರಿದಂತೆ ಆಯೋಗದ ಹಿರಿಯ ಅಧಿಕಾರಿಗಳು ಸ್ಥಾಯಿ ಸಮಿತಿಯ ಮುಂದೆ ಹಾಜರಾಗಿ ಚುನಾವಣಾ ಸುಧಾರಣೆಗಳು ಮತ್ತಿತರ ವಿಷಯಗಳ ಬಗ್ಗೆ ಮಾತಾಡಿದರು ಎಂದು ವರದಿಯಾಗಿದೆ.

'ಅಚ್ಛೇ ದಿನ್'ಗಳ ಮೂರನೇ ವರ್ಷದ ಕೊನೆಯಲ್ಲಿ ನಿರ್ಮಾಣ ವಾಗುತ್ತಿರುವ 'ನವಭಾರತ'ದಲ್ಲಿ ಈ ವಾರ:

* ಆ ಕಾಶ್ಮೀರಿ ಯುವಕನ ಬದಲು ಕಾಸ್ಮಿರಕ್ಕೆ ಹೋಗಿ ಭಾರತದ ವಿರುದ್ಧ ಹೇಳಿಕೆ ನಿಡಿದರೆನ್ನಲಾದ ಪ್ರಖ್ಯಾತ ಲೇಖಕಿ ಅರುಂಧತಿರಾಯ್ ಅವರನ್ನು ಮಿಲಿಟರಿ ಜೀಪ್‌ಗೆ ಕಟ್ಟಬೇಕಾಗಿತ್ತು ಎಂದ ಚಿತ್ರ ನಟ ಹಾಗೂ ಈಗ ಬಿಜೆಪಿ ಎಂಪಿಯಾಗಿರುವ ಪರೇಶ್ ರಾವಲ್ ತಮ್ಮ ಟ್ವೀಟ್‌ನ್ನು ಹಿಂತೆಗೆದುಕೊಂಡಿದ್ದಾರೆ. ಆದರೆ ಇದು ಕಾವಿ ಪಡೆಗಳ 'ಸುಳ್ಳು ಸುದ್ದಿ' ಎಂದು ಸಾಬೀತಾಗಿರುವುದನ್ನು ತಿಳಿದು ನಾಚಿಕೆಯಿಂದ ಹಿಂತೆಗೆದು–ಕೊಂಡರೇ ಎಂದು ಗೊತ್ತಾಗಿಲ್ಲ.
* ಮಧ್ಯಪ್ರದೇಶದ ಬಿಜೆಪಿ ಮುಖಂಡ, ಸಾಧ್ವಿ ಋತಂಬರಾ ಅವರ ನಿಕಟ ಶಿಷ್ಯನನ್ನು ಸೆಕ್ಸ್ ಹಗರಣದಲ್ಲಿ ಬಂಧಿಸಲಾಗಿದೆ ಎಂಬ ಸುದ್ದಿಯ ಬಗ್ಗೆ ಟಿಪ್ಪಣಿ ಮಾಡಿದ ಜೆಎನ್‌ಯು ಸಂಶೋಧನಾ ವಿದ್ಯಾರ್ಥಿನಿ ಶೆಹಲಾ ರಶೀದ್ ಬಗ್ಗೆ ಟ್ವಿಟರ್‌ನಲ್ಲಿ ಹೊಲಸು ಟಿಪ್ಪಣಿ ಮಾಡಿದ ಹಾಡುಗಾರ ಅಭಿಜಿತ್ ಭಟ್ಟಾಚಾರ್ಯ ಅವರ ಟ್ವಿಟರ್ ಅಕೌಂಟ್ ಸಸ್ಪೆಂಡ್ ಆಗಿದೆ. ಆದರೆ ಆತನೇನೂ ಇದರಿಂದ ಬಾಯಿ ಮುಚ್ಚಿಕೊಳ್ಳುವುದಿಲ್ಲವಂತೆ.
* ಪರೇಶ್ ರಾವಲ್ ಟಿಪ್ಪಣಿ ಹಿಂತೆಗೆದುಕೊಳ್ಳುವಂತಾದ್ದು ಮತ್ತು ಅಭಿಜಿತ್ ಭಟ್ಟಾಚಾರ್ಯ ಅಕೌಂಟ್ ಸಸ್ಪೆಂಡ್ ಆಗಿರುವುದರಿಂದ 'ಬೇಸತ್ತು' ಇನ್ನೊಬ್ಬ ಹಾಡುಗಾರ ಸೋನು ನಿಗಮ್ ಟ್ವಿಟರ್ ತೊರೆ–ಯುತ್ತಾರಂತೆ!

"ಕಾಶ್ಮೀರಿಗಳಿಗೆ ಏನು ಸಂದೇಶ ನೀಡ ಬೇಕೆನ್ನುತ್ತೀರಿ?"

ಕಳೆದ ತಿಂಗಳು ಕಾಶ್ಮೀರ ಕಣಿವೆಯ ಬುದ್ಗಾಮ್‌ನಲ್ಲಿ ಒಬ್ಬ ಕಾಶ್ಮೀರಿ ನಾಗರಿಕನನ್ನು ಜೀಪ್ ಕಟ್ಟಿ 'ಮಾನವ ಗುರಾಣಿ'ಯಾಗಿ ಮಾಡಿದ್ದ ಸೇನಾ ಮೇಜರ್‌ಗೆ ಸೇನಾ ಮುಖ್ಯಸ್ಥರು ಪ್ರಶಂಸಾ ಪತ್ರ ನೀಡಿರುವ ವರದಿಗೆ ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಜಮ್ಮು–ಕಾಶ್ಮೀರ ರಾಜ್ಯ ಸಮಿತಿ ಕೇಂದ್ರ ಸರಕಾರವನ್ನು ಕೇಳಿರುವ ಪ್ರಶ್ನೆ.

ಸೇನಾ ಮೇಜರ್‌ನ ಈ ಕೃತ್ಯ ವ್ಯಾಪಕ ಟೀಕೆ, ವಿಮರ್ಶೆಗಳಿಗೆ ತುತ್ತಾಗಿತ್ತು. ನಿವೃತ್ತ ಸೇನಾಧಿಕಾರಿಗಳಲ್ಲೂ ಹಲವರು ಯಾವುದೇ ಕಾರಣಕ್ಕೂ ಇದು ಸರಿಯಾದ ಕೃತ್ಯ ಅಲ್ಲ ಎಂದಿದ್ದರು. ಭಾರತೀಯ ಸೇನೆ ಈ ಬಗ್ಗೆ ವಿಚಾರಣೆಯನ್ನೂ ಆರಂಭಿಸಿತು. ಈ ಘಟನೆ ಕೇಂದ್ರದ ಆಳುವ ಪಕ್ಷದೊಂದಿಗೆ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಸಮ್ಮಿಶ್ರ ಸರಕಾರದ ಮುಖ್ಯಮಂತ್ರಿಗಳಿಗೂ ಕಳವಳ ಉಂಟು ಮಾಡಿತ್ತು ರಾಜ್ಯ ಪೋಲೀಸರು ಸೇನೆಯ ವಿರುದ್ಧ ಎಫ್‌ಐಆರ್ ಹಾಕಿ ವಿಚಾರಣೆ ಆರಂಭಿಸಿದ್ದರು.

ಆದರೆ ಈ ನಡುವೆ ಸೇನಾ ಮುಖ್ಯಸ್ಥರು ಈ ಕೃತ್ಯ ನಡೆಸಿದ ಅಧಿಕಾರಿಗೆ ಪ್ರಶಂಸಾ ಪತ್ರ ನೀಡಿದ್ದಾರೆ ಎಂಬ ಸುದ್ದಿ ಹಲವರಿಗೆ ಆಶ್ಚರ್ಯ ತಂದಿದೆ. ಸಾಲದ್ದಕ್ಕೆ ರಕ್ಷಣಾ ಮಂತ್ರಿಯೂ ಆಗಿರುವ ಹಣಕಾಸು ಮಂತ್ರಿಗಳು ಯುದ್ಧ ಪ್ರದೇಶದಲ್ಲಿ ಸೇನಾಪಡೆಗಳು ತಮಗೆ ಸರಿ ಕಂಡ ಕ್ರಮಗಳನ್ನು ಕೈಗೊಳ್ಳುತ್ತವೆ ಎಮದು ಇದನ್ನು ಸಮರ್ಥಿಸಿಕೊಂಡಿದ್ದಾರೆ.

ಈ ಪ್ರಶಂಸೆಯ ನಂತರ ಈ ಅಧಿಕಾರಿ ಚುನಾವಣಾ ಸಿಬ್ಬಂದಿಯ ಪ್ರಾಣ ಉಳಿಸಲು ತಾನು ಹೀಗೆ ಮಾಡಿದೆ ಎಂದು ಹೇಳಿರುವುದಾಗಿ ವರದಿಯಾಗಿದೆ. ಆದರೆ ಆಗ ಬಂದ ಸುದ್ದಿ, ಮತ್ತು ಸ್ವತಃ ಮಾನವ ಗುರಾಣಿಯಾದ ವ್ಯಕ್ತಿ ಹೇಳಿರುವುದಕ್ಕೂ ಹೊಂದಾಣಿಕೆಯಾಗುತ್ತಿಲ್ಲ.

ಭಾರತೀಯ ಸೇನೆಯ ಪರಂಪರೆಗೆ ಒಪ್ಪದ ಉದ್ರೇಕಾರಿ ಕೃತ್ಯ ಎಸಗಿದ್ದಾರೆಂಬ ಆಪಾದನೆಗೆ ಒಳಗಾಗಿರುವ ಅಧಿಕಾರಿಯನ್ನು ಪ್ರಶಂಸಿಸುವುದು ಕಾಶ್ಮೀರಿಗಳ ಭಾವನೆಗಳನ್ನು ಉಪೇಕ್ಷಿಸುವಷ್ಟು ಸರಕಾರಕ್ಕೆ ಮುಖ್ಯವೆನಿಸಿದೆಯೇ ಎಂದು ಸಿಪಿಐ(ಎಂ) ಜಮ್ಮು–ಕಾಶ್ಮೀರ ಸಮಿತಿ ಕಳವಳ ವ್ಯಕ್ತಪಡಿಸಿದೆ. ಸೇನೆ ಆದೇಶಿಸಿರುವ ತನಿಖಾ ಕೋರ್ಟ್ ಈ ಘಟನೆಯ ಹೊಣೆಯನ್ನು ನಿರ್ಧರಿಸಬೇಕು, ಮಾನವ ಹಕ್ಕುಗಳ ಉಲ್ಲಂಘನೆಯಲ್ಲಿ ಶಾಮೀಲಾದವರಿಗ್ನೆ ಶಿಕ್ಷೆ ವಿಧಿಸಬೇಕು ಎಂದು ಅದು ಆಗ್ರಹಿಸಿದೆ.

ಆದರೆ ಭಾರತೀಯ ಸೇನೆಯೇ ನಡೆಸುತ್ತಿರುವ ವಿಚಾರಣೆಯ ಫಲಿತಾಂಶ ತಿಳಿಸುವ ಮೊದಲೇ ಈ ಪ್ರಶಂಸಾ ಪತ್ರವನ್ನು ಕೊಡುವ ತುರ್ತಾದರೂ ಏನಿತ್ತು ಎಂಬುದು ಹಲವರ ಪ್ರಶ್ನೆ. ಈ ಮೂಲಕ ಈ ವಿಚಾರಣೆಯ ದಿಕ್ಕಿನ ಮೇಲೂ ಪ್ರಭಾವ ಬೀರಲಾಗಿದೆ, ಬಹುಶಃ ಕಾಶ್ಮೀರ ಪ್ರಶ್ನೆಯನ್ನು ಕೇವಲ ಭದ್ರತೆಯ ಪ್ರಶ್ನೆಯಾಗಿ ಕಾಣುವ ಧೋರಣೆಗೆ ಅನುಗುಣವಾಗಿ ಈ ವಿಚಾರಣೆಯ ಮೇಲೆ ಪ್ರಭಾವ ಬೀರಲಿಕ್ಕಾಗಿಯೇ ಹೀಗೆ ಮಾಡಲಾಗುದೆಯೇ ಎಂಬ ಸಂದೇಹವೂ ಹಲವು ವಿಶ್ಲೇಷಕರದ್ದು.

'ಮಿಂಚಿನ ಪ್ರಹಾರ'ದ ವಿಫಲತೆ ಹಾಗೂ ಕಾಶ್ಮೀರ ಪ್ರಶ್ನೆಯಲ್ಲಿ ವಿಫಲತೆಯನ್ನೇ ಕೋಮುವಾದಿ ಪ್ರಚಾರಕ್ಕೆ ಬಳಸುವ ತಂತ್ರದ ಭಾಗ ಇದು ಎಂದು ಇನ್ನು ಕೆಲವು ವಿಶ್ಲೇಷಕರು ಅಭಿಪ್ರಾಯ ಪಡುತ್ತಿದ್ದಾರೆ.

ಉತ್ತರಪ್ರದೇಶದ ಸಹಾರ್ನ್‌ಪುರದಲ್ಲಿ ದಲಿತರ ಮೇಲೆ ಹಲ್ಲೆಗಳ ವಿರುದ್ಧ ಅಲ್ಲಿನ ಭೀಮ್ ಆರ್ಮಿ'ಯ ಯುವ ಮುಖಂಡನ ನೇತೃತ್ವದಲ್ಲಿ ದಿಲ್ಲಿಯ ಜಂತರ್ ಮಂತರ್‌ನಲ್ಲಿ ಮೇ 21 ರಂದು ಬೃಹತ್ ಪ್ರತಿಭಟನಾ ಸಭೆ.

–ಸುದ್ದಿ



ವ್ಯಂಗ್ಯಚಿತ್ರ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಮೇ 15, ಅರ್ಧ ಗಂಟೆಯ ಕಾಲ ಉತ್ತರಪ್ರದೇಶದ ತಿಕಂಪುರ್‌ನ ಹುತಾತ್ಮ ಬಿಎಸ್‌ಎಫ್ ಯೋಧ ಪ್ರೇಮ್ ಸಾಗರ್ ಮನೆಯಲ್ಲಿ ಒಂದು ಎಸಿ, ಒಂದು ಸೋಫ, ರತ್ನಗಂಬಳಿ, ಕಾವಿ ಟೇಬಲ್ ಕವರ್ ಬಂದವು. ಏಕೆಂದರೆ ಮುಖ್ಯಮಂತ್ರಿ ಯೋಗಿ ಅದಿತ್ಯನಾಥ್ ಅವರ ಮನೆಗೆ ಬರುವವರಿದ್ದರು. ಅದರೆ ಅವರು ಬಂದು ಹೋದ ಅರ್ಧಗಂಟೆಯಲ್ಲಿ ಅವನ್ನೆಲ್ಲ ಒಯ್ಯಲಾಯಿತು. ಮೇ 1 ರಂದು ಪಾಕಿಸ್ತಾನೀ ಗಡಿ ಪಡೆಯವರು ಇಬ್ಬರು ಬಿಎಸ್‌ಎಫ್ ಯೋಧರನ್ನು ಕೊಂದು ಅವರ ದೇಹಗಳನ್ನು ವಿರೂಪಗೊಳಿಸಿದರು. ಇವರಲ್ಲಿ ಒಬ್ಬರಾದ ಪ್ರೇಮ್ ಸಾಗರ್ ಕುಟುಂಬಕ್ಕೆ ಅಲ್ಲಿನ ಸರಕಾರ ಮಂಜೂರು ಮಾಡಿದ 4 ಲಕ್ಷ ರೂ. ಚೆಕ್ ಮತ್ತು 2ಲಕ್ಷ ಎಫ್‌ಡಿ ಕೊಡಲು ಅವರು ಬಂದಿದ್ದರು.

–ಸುದ್ದಿ



ವ್ಯಂಗ್ಯಚಿತ್ರ: ಶುಭನೀಲ್, ಡೆಕ್ಕನ್ ಕ್ರಾನಿಕಲ್

“ಗೋರಕ್ಷಕ”ರೆನ್ನುವವರು ರೈತ–ವಿರೋಧಿಗಳು



ಭಾರತದಲ್ಲಿ ಹಸುಗಳ ಸಂತತಿ ವಿನಾಶದ ಅಂಚಿನಲ್ಲಿದೆ. ಅದಕ್ಕೆ ಕಾರಣ ದನದ ಮಾಂಸ ಸೇವಿಸುವವರು ಮತ್ತು ಮಾರಾಟ ಮಾಡುವವರು, ಪ್ರಮುಖವಾಗಿ ಮುಸ್ಲಿಮರು. ಇದು ಬಿಜೆಪಿ ಮತ್ತು ಸಂಘ ಪರಿವಾರ ಮಾಡುತ್ತಿರುವ ಪ್ರಚಾರವನ್ನು ನಂಬಿದವರು ಮಾಡುವ ಆರೋಪ. ಅದೇ ಪ್ರಮಾಣದಲ್ಲಿ ದನದ ಮಾಂಸವನ್ನು ರಫ್ತು ಮಾಡುವ ಕಸಾಯಿಖಾನೆಗಳ ಮೇಲೂ ಇಂತಹ ಆರೋಪ ಬರಲಿದೆ.

ಈ ಆರೋಪದ ಅಸ್ತ್ರಗಳನ್ನು ಇಟ್ಟುಕೊಂಡಿರುವ ಬಿಜೆಪಿ ತನ್ನ ಬೆಂಬಲಿಗರ ನಡುವೆ ದಲಿತರು ಮತ್ತು ಅಲ್ಪಸಂಖ್ಯಾತರ ವಿರುದ್ಧ ಉದ್ರೇಕವನ್ನು ಸೃಷ್ಟಿ ಮಾಡುತ್ತಿದೆ. ಗೋಮಾತೆಯ ಪ್ರೀತಿ ಹೆಸರಲ್ಲಿ ಕೆಲವು ಸ್ವಯಂ ಘೋಷಿತ ಗೋ ರಕ್ಷಕರು, ಪೊಲೀಸರ ಮೌನ ಸಮ್ಮತಿಯೊಂದಿಗೆ ಮುಸ್ಲಿಮರು ಮತ್ತು ದಲಿತರನ್ನು ಆಗಿಂದಾಗ್ಗೆ ಹತ್ಯೆ, ಹಲ್ಲೆಗಳನ್ನು ನಡೆಸುವುದನ್ನು ಮಾಡುತ್ತಿದ್ದಾರೆ. ದನದ ಮಾಂಸ ಸೇವನೆ ಮತ್ತು ರಫ್ತಿಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿಯವರು “ಪಿಂಕ್ ರೆವುಲ್ಯೂಷನ್(ದನದ ಮಾಂಸ ಸೇವನೆ ಮತ್ತು ರಫ್ತು)’ ಎಂದು ಆಗಿಂದಾಗ್ಗೆ ಪ್ರಸ್ತಾಪಿಸುವ ಮೂಲಕ ಬೆಂಕಿಗೆ ಪೆಟ್ರೋಲ್ ಸುರಿಯುವ ಕೆಲಸ ಮಾಡುತ್ತಿದ್ದಾರೆ.

ಇಲ್ಲಿನ ವಾಸ್ತವಾಂಶ ಏನು? ದನದ ಮಾಂಸ ಸೇವನೆ ಮತ್ತು ರಫ್ತಿನಿಂದಾಗಿ ಗೋಜಾತಿ ವಿನಾಶದ ಅಂಚಿನಲ್ಲಿವೆಯೇ?

ಕಳೆದ ಹಲವು ವರ್ಷಗಳಿಂದ ದನದ ಮಾಂಸ ರಫ್ತು (ಎಮ್ಮೆ ಮತ್ತು ದನ) ಹೆಚ್ಚಾಗಿದೆ ಎಂಬುದು ನಿಜವಾದರೂ, ದೇಶದ ಎತ್ತು, ಹಸು ಮತ್ತು ಎಮ್ಮೆ. ಕೋಣಗಳ ಸಂಖ್ಯೆ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ವಾಸ್ತವವಾಗಿ ಇವುಗಳ ಸಂಖ್ಯೆಯಲ್ಲಿ ಏರಿಕೆ ಕಂಡಿದೆ. ಇವುಗಳ ಸಂಖ್ಯೆ 1992ರಲ್ಲಿ 28.9 ಕೋಟಿ ಇದ್ದದು 2012ಕ್ಕೆ 30.0 ಕೋಟಿಗೆ ಏರಿಕೆ ಕಂಡಿದೆ. ಹಾಲಿನ ಉತ್ಪಾದನೆ 1992ರಲ್ಲಿ 5.6 ಕೋಟಿ ಟನ್ ಇದ್ದದು 2016ಕ್ಕೆ 15.6 ಕೋಟಿ ಟನ್‌ಗೆ ಏರಿಕೆ ಕಂಡಿದೆ. ಈ ಪ್ರಾಣಿಗಳ ಸಂತತಿಯಲ್ಲಿ ಎತ್ತು ಮತ್ತು ಹಸುಗಳ ಸಂಖ್ಯೆ ಒಟ್ಟಾರೆಯಾಗಿ ಇಳಿಮುಖ ಕಂಡಿದ್ದರೆ ಎಮ್ಮೆಗಳ ಮತ್ತು ಕೋಣಗಳ ಸಂಖ್ಯೆ ನಿರಂತರವಾಗಿ ಏರಿಕೆ ಕಂಡಿದೆ. ಇಲ್ಲಿ ಎಮ್ಮೆ ಕೋಣಗಳ ಮಾಂಸವನ್ನು

ಕಳೆದ ಹಲವು ವರ್ಷಗಳಿಂದ ದನದ ಮಾಂಸ ರಫ್ತು (ಎಮ್ಮೆ ಮತ್ತು ದನ) ಹೆಚ್ಚಾಗಿದೆ ಎಂಬುದು ನಿಜವಾದರೂ, ದೇಶದ ಎತ್ತು, ಹಸು ಮತ್ತು ಎಮ್ಮೆ. ಕೋಣಗಳ ಸಂಖ್ಯೆ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ವಾಸ್ತವವಾಗಿ ಇವುಗಳ ಸಂಖ್ಯೆಯಲ್ಲಿ ಏರಿಕೆ ಕಂಡಿದೆ. ವಾಸ್ತವ ಏನೆಂದರೆ ಭಾರತದಲ್ಲಿ ಜಾನುವಾರುಗಳ ಆರ್ಥಿಕತೆ ಅತ್ಯುತ್ತಮವಾಗಿದೆ. ಇದು ಸಣ್ಣ ರೈತರಿಗೆ ತುಂಬಾ ಅಗತ್ಯವಾದ ಆರ್ಥಿಕ ನೆರವಿಗೆ ಕಾರಣವಾಗಿದೆ. ದನದ ಮಾಂಸದಂತೆ ತಲಾ ಹಾಲಿನ ಉತ್ಪಾದನೆಯೂ ಗಣನೀಯವಾಗಿ ಏರಿಕೆ ಕಂಡಿದೆ. ಗೋ ರಕ್ಷಣೆ ಹೆಸರಿನ ಈ ದಾಳಿಗಳಿಂದ ಅನುತ್ಪಾದಕವಾದ ಎತ್ತು ಮತ್ತು ಕೋಣಗಳನ್ನು ಅನಿವಾರ್ಯವಾಗಿ ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ರೈತರಿಗೆ ಬರಲಿದೆ. ಇದರಿಂದ ಅವುಗಳ ನಿರ್ವಹಣೆ ದುಬಾರಿಯಾಗಲಿದೆ. ನಿರಂತರ ಬರ ಮತ್ತು ಸಾಲದ ಸುಳಿಗೆ ಸಿಲುಕಿ ತತ್ತರಿಸಿರುವ ಸಣ್ಣ ಕೃಷಿ ಕುಟುಂಬಗಳನ್ನು ಮತ್ತಷ್ಟು ಪ್ರಪಾತಕ್ಕೆ ದೂಡಲಿದೆ

ರಫ್ತು ಮಾಡುತ್ತಿದ್ದರೂ ಎಮ್ಮೆ, ಕೋಣಗಳ ಸಂಖ್ಯೆ ನಿರಂತರವಾಗಿ ಏರಿಕೆ ಕಂಡಿದೆ. ಹೀಗಾಗಿ ಎತ್ತು, ಹಸುಗಳ ಸಂಖ್ಯೆ ಇಳಿಮುಖ ಕಾಣಲು ದನದ ಮಾಂಸ ರಫ್ತು ಕಾರಣವಲ್ಲ ಎಂಬುದು ಇದರಿಂದ ತಿಳಿಯಲಿದೆ.



ಕೌ..ಕೌ..ಕೌ.. ವ್ಯಂಗ್ಯಚಿತ್ರ:ಮಂಜುಲ್

ಕೇವಲ ಎತ್ತು ಮತ್ತು ಹಸುವಿನ ಸಂಖ್ಯೆ ಕುರಿತು ನಿಕಟವಾಗಿ ಗಮನಿಸಿದರೆ ಹಸುಗಳ ಸಂಖ್ಯೆಯಲ್ಲಿ ಯಾವುದೇ ಇಳಿಮುಖ ಕಂಡಿಲ್ಲ. ಬದಲಿಗೆ ನಿರಂತರವಾಗಿ ಏರಿಕೆ ದಾಖಲಿಸಿದೆ. 1992ರಲ್ಲಿ ಹಸುಗಳ ಸಂಖ್ಯೆ 10.3 ಕೋಟಿ ಇದ್ದಿದ್ದು 2012ಕ್ಕೆ 12.3 ಕೋಟಿಗೆ ಏರಿಕೆ ಕಂಡಿದೆ. ಇದೇ ಅವಧಿಯಲ್ಲಿ ಎತ್ತುಗಳ ಸಂಖ್ಯೆಯಲ್ಲಿ ಗಣನೀಯ ಇಳಿಮುಖ ಕಂಡಿದೆ. ಅಂದರೆ ಇವುಗಳ ಸಂಖ್ಯೆ 10.2 ಕೋಟಿಯಿಂದ 6.8 ಕೋಟಿಗೆ ಇಳಿದಿದೆ. ಎತ್ತುಗಳ ಸಂಖ್ಯೆ ಇಳಿದಿರುವುದು ಒಟ್ಟಾರೆ ಎತ್ತು ಮತ್ತು ದನಗಳ ಸಂಖ್ಯೆ ಕಡಿಮೆಯಾಗಲು ಕಾರಣವಾಗಿದೆ. ಒಂದು ವೇಳೆ ದನ ಮತ್ತು ಎತ್ತು ಮಾಂಸಕ್ಕೆ ಬೇಡಿಕೆ ಹೆಚ್ಚಿದ್ದರಿಂದ ಸಂಖ್ಯೆ ಇಳಿಮುಖ ಕಂಡಿದೆ ಎಂದಾದರೆ ಹಸುಗಳ ಸಂಖ್ಯೆಯೂ ಕಡಿಮೆಯಾಗಬೇಕಾಗಿತ್ತು. ಆದರೆ ಇಲ್ಲಿನ ಅಂತಹ ಪ್ರಮೇಯ ಇಲ್ಲ. ಎತ್ತುಗಳ ಸಂಖ್ಯೆ ಮಾತ್ರ ಇಳಿಮುಖ ಕಾಣಲು ಕಾರಣವೇನು?

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಎತ್ತು ಮತ್ತು ಹಸುಗಳಿಗೆ ಒಂದೇ ರೀತಿಯ ಮಾನ್ಯತೆ ಇದೆ. ಹಸುಗಳು ಹೈನುಗಾರಿಕೆ ಉದ್ದೇಶಕ್ಕಾದರೆ, ಎತ್ತುಗಳು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು. ಹೀಗಾಗಿ 1992ರಲ್ಲಿ ಹಸು ಮತ್ತು ಎತ್ತುಗಳ ಸಂಖ್ಯೆ ಸ್ವಲ್ಪ ಹೆಚ್ಚು ಕಡಿಮೆ ಸಮಾನವಾಗಿತ್ತು. ಆದರೆ ಎಮ್ಮೆಗಳ ವಿಷಯದಲ್ಲಿ ಕೋಣ ಬಿಟ್ಟು ಎಮ್ಮೆ ಮಾತ್ರ ಗ್ರಾಮೀಣ ಜನರ ಆದ್ಯತೆಯಾಗಿತ್ತು. ಕೋಣಗಳು ಕೃಷಿಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲ ಎಂದಾದಾಗ ರೈತರು ಅವುಗಳನ್ನು ಕಸಾಯಿಖಾನೆಗಳಿಗೆ ಅಟ್ಟುತ್ತಿದ್ದರು. ಇದರಿಂದ ಕೋಣಗಳ ಸಂಖ್ಯೆಗಿಂತಲೂ ಎಮ್ಮೆಗಳ ಸಂಖ್ಯೆ ಐದಾರು ಪಟ್ಟು ಹೆಚ್ಚಾಗಿರುತ್ತವೆ ಎಂಬುದು ಇದರಿಂದ ತಿಳಿಯಲಿದೆ. ಇಂದು ಇಂತದೇ ಬೆಳವಣಿಗೆ ಹಸು ಮತ್ತು ಎತ್ತಿನ ನಡುವೆ ಕಂಡುಬರುತ್ತಿದೆ. ಕಳೆದ 25 ವರ್ಷಗಳಲ್ಲಿ ಹಸುಗಳಿಗೆ ಹೋಲಿಸಿದರೆ ಎತ್ತುಗಳ ಸಂಖ್ಯೆ ಅರ್ಧದಷ್ಟು ಇಳಿಮುಖ ಕಂಡಿದೆ.

ಹಸಿರು ಕ್ರಾಂತಿ ಮತ್ತು ನಂತರದ ದಿನಗಳಲ್ಲಿ ಕೃಷಿಯಲ್ಲಿ ಯಾಂತ್ರೀಕರಣ ಹೆಚ್ಚಾಗಿದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ಎತ್ತುಗಳ ಸಂಖ್ಯೆ ಗಣನೀಯವಾಗಿ ಇಳಿಮುಖ ಕಂಡಿದೆ. ಉಳುವೆ, ಭೂಮಿ ಸಮತಟ್ಟು ಮಾಡುವುದು ಮತ್ತು ಕೃಷಿ ಉತ್ಪನ್ನಗಳ ಸಾಗಣೆಗೆ ಈ ಹಿಂದೆ ಎತ್ತುಗಳನ್ನು ಬಳಕೆ ಮಾಡಲಾಗುತ್ತಿತ್ತು. ಆದರೆ ಈಗ ಈ ಎಲ್ಲ ಚಟುವಟಿಕೆಗಳನ್ನು ಟ್ರ್ಯಾಕ್ಟರ್‌ಗಳ ಮೂಲಕ ಮಾಡಲಾಗುತ್ತಿದೆ. ಕೋಣದ ರೀತಿಯಲ್ಲೇ ಎತ್ತುಗಳಿಗೂ ಇಂದು ಕೃಷಿಯಲ್ಲಿ ಹೆಚ್ಚಿನ ಪಾತ್ರವಿಲ್ಲ. ಈ ಕಾರಣದಿಂದ ಅವುಗಳ ಸಂಖ್ಯೆಯಲ್ಲಿ ಇಳಿಮುಖ ಕಾಣುತ್ತಿದೆ.

ಬರ ಪರಿಸ್ಥಿತಿಯಲ್ಲಿ ಈ ಎತ್ತುಗಳು ಈಗಲೂ ರೈತರಿಗೆ ವಿಮೆ ಇದ್ದಂತೆ. ಹೇಗೆಂದರೆ ಸಣ್ಣ ರೈತರು ಬರ ಸಂದರ್ಭಗಳಲ್ಲಿ ಹಣಕಾಸಿನ ಬಿಕ್ಕಟ್ಟನ್ನು ಸರಿದೂಗಿಸಲು ಈ ಎತ್ತುಗಳನ್ನು ಮಾರಾಟ ಮಾಡುತ್ತಾರೆ.

ಗೋ ರಕ್ಷಕರು ದನಗಳನ್ನು ಮಾರಾಟ ಮಾಡುವವರು ಮತ್ತು ಕೊಲ್ಲುವವರನ್ನು ಹತ್ಯೆ ಮಾಡುವುದು ಮತ್ತು ಹಲ್ಲೆ ಮಾಡುತ್ತಿರುವುದು ವಾಸ್ತವವಾಗಿ ಸಣ್ಣ ರೈತರನ್ನು ಸಂಕಷ್ಟಕ್ಕೆ ದೂಡಲಿದೆ. ಬರಕ್ಕೆ ತುತ್ತಾಗಿರುವ ಮತ್ತು ಬಿಜೆಪಿ ಆಡಳಿತ ಇರುವ ಮಹಾರಾಷ್ಟ್ರದಲ್ಲೇ ಗೋರಕ್ಷಕರ ಕೃತ್ಯಗಳಿಂದಾಗಿ ದನಗಳ ದರಗಳು ಗಣನೀಯವಾಗಿ ಕುಸಿದಿದೆ. ಇದು ರೈತರ ಮೇಲೆ ಆರ್ಥಿಕ ಹೊರೆಯನ್ನು ಹೇರುತ್ತಿದೆ.

ವಾಸ್ತವ ಏನೆಂದರೆ ಭಾರತದಲ್ಲಿ ಜಾನುವಾರುಗಳ ಆರ್ಥಿಕತೆ ಅತ್ಯುತ್ತಮವಾಗಿದೆ. ಇದು ಸಣ್ಣ ರೈತರಿಗೆ ತುಂಬಾ ಅಗತ್ಯವಾದ ಆರ್ಥಿಕ ನೆರವಿಗೆ ಕಾರಣವಾಗಿದೆ. ದನದ ಮಾಂಸದಂತೆ ತಲಾ ಹಾಲಿನ ಉತ್ಪಾದನೆಯೂ ಗಣನೀಯವಾಗಿ ಏರಿಕೆ ಕಂಡಿದೆ. ಇವರೆಡೂ ಗೋಜಾತಿ ಸಂತತಿ ಏರಿಕೆಯಿಂದ ಇದು ಸಾಧ್ಯವಾಗಿದೆ. ಆದರೆ ಗೋ ರಕ್ಷಕರ ದಾಂಧಲೆಗಳು ರೈತರು, ದನಗಳ ವ್ಯಾಪಾರಿಗಳು, ಕಸಾಯಿಖಾನೆಗಳು, ದನದ ಮಾಂಸ ಸೇವನೆ ಮಾಡುವವರ ಮೇಲೆ ನಿರಂತರ ದಾಳಿಗಳನ್ನು ನಡೆಸುತ್ತಿರುವುದರಿಂದ ಸಣ್ಣ ರೈತರ ಬದುಕನ್ನೇ ಸಂಕಷ್ಟಕ್ಕೆ ದೂಡಿದೆ. ಗೋ ರಕ್ಷಣೆ ಹೆಸರಿನ ಈ ದಾಳಿಗಳಿಂದ ಅನುತ್ಪಾದಕವಾದ ಎತ್ತು ಮತ್ತು ಕೋಣಗಳನ್ನು ಅನಿವಾರ್ಯವಾಗಿ ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ರೈತರಿಗೆ ಬರಲಿದೆ. ಇದರಿಂದ ಅವುಗಳ ನಿರ್ವಹಣೆ ದುಬಾರಿಯಾಗಲಿದೆ. ನಿರಂತರ ಬರ ಮತ್ತು ಸಾಲದ ಸುಳಿಗೆ ಸಿಲುಕಿ ತತ್ತರಿಸಿರುವ ಸಣ್ಣ ಕೃಷಿ ಕುಟುಂಬಗಳನ್ನು ಮತ್ತಷ್ಟು ಪ್ರಪಾತಕ್ಕೆ ದೂಡಲಿದೆ. ಇದಕ್ಕೆ ಬಿಜೆಪಿ ಸರ್ಕಾರದ ಗೋ ರಾಜಕಾರಣವನ್ನೇ ದೂಷಿಸಬೇಕಾಗುತ್ತದೆ.

ಕೋಮುವಾದಿ ಹಿಂಸಾಚಾರಿಗಳಿಗೆ ಮತ್ತು ಕುರುಡಾಗಿರುವ ಸರಕಾರಗಳಿಗೆ ಜನಸಾಮಾನ್ಯರ ಸವಾಲು

ಅಲವರ್ ಕಾವಲುಕೋರ ದಾಳಿಗಳಿಗೆ ತುತ್ತಾದವರಿಗೆ ಎಐಕೆಎಸ್‌ನಿಂದ 15ಲಕ್ಷ ರೂ. ಪರಿಹಾರ ಸಂಗ್ರಹ

ಮೇ 24ರಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್)ಮತ್ತು ದಿಲ್ಲಿಯ ಡೆಮಾಕ್ರಟಿಕ್ ಹ್ಯೂಮನ್ ರೈಟ್ಸ್ ನೆಟ್‌ವರ್ಕ್(ಡಿಹೆಚ್‌ಆರ್‌ಎನ್) ದೇಶಾದ್ಯಂತ ಪ್ರಚಾರ ನಡೆಸಿ ಸಂಗ್ರಹಿಸಿದ 15 ಲಕ್ಷ ರೂ.ಗಳನ್ನು ರಾಜಸ್ತಾನದ ಅಲವರ್‌ನಲ್ಲಿ ಕೇಸರಿ ಕಾವಲುಕೋರ ಪಡೆಗಳ ಎಪ್ರಿಲ್ 21ರ ಕ್ರೌರ್ಯಕ್ಕೆ ಬಲಿಯಾದ ಹರ್ಯಾಣದ ಹಾಲು ಉತ್ಪಾದಕ ರೈತ ಪೆಹ್ಲೂ ಖಾನ್ ಕುಟುಂಬಕ್ಕೆ 10ಲಕ್ಷ ರೂ., ‘ಗೋರಕ್ಷಕ’ರ ವೇಷದ ಗೂಂಡಾಗಳ ದಾಳಿಯಿಂದ ತೀವ್ರವಾಗಿ ಗಾಯಗೊಂಡು ಇನ್ನೂ ಹಾಸಿಗೆ ಹಿಡಿದಿರುವ ಅಜ್ಮತ್‌ಗೆ 4ಲಕ್ಷ ರೂ. ಹಾಗೂ ತೀವ್ರ ಹಲ್ಲೆಯಿಂದ ಚೇತರಿಸಿಕೊಳ್ಳುತ್ತಿರುವ ರಫೀಕ್‌ಗೆ 1 ಲಕ್ಷ ರೂ. ಜೈಸಿಂಗ್‌ಪುರ ಜಿಲ್ಲೆಯ ಅವರ ಹಳ್ಳಿ ನೂಹ್‌ನಲ್ಲಿ ಏರ್ಪಡಿಸಿದ್ದ ಸಭೆಯೊಂದರಲ್ಲಿ ನೀಡಲಾಗಿದೆ.



ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಈ ಮೊತ್ತದ ಚೆಕ್‌ಗಳನ್ನು ಸಂಬಂಧಪಟ್ಟವರಿಗೆ ನೀಡಿದರು. ಡಿಹೆಚ್‌ಆರ್‌ಎನ್‌ನ ಸೆಭಾ ಫರೂಕಿ ಮತ್ತು ಪ್ರೊ.ಗೋಪಿನಾಥ್ ಮತ್ತು ಎಐಕೆಎಸ್, ರಾಜ್ಯ ಕಿಸಾನ್ ಸಭಾದ ಮುಖಂಡರು, ಸಿಪಿಐ(ಎಂ), ಸಿಐಟಿಯು, ಜನವಾದಿ ಮಹಿಳಾ ಸಂಘಟನೆ, ಡಿವೈಎಫ್‌ಐ, ಎಸ್‌ಎಫ್‌ಐನ ಹರ್ಯಾಣ ರಾಜ್ಯ ಮುಖಂಡರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಜೈಸಿಂಗ್‌ಪುರದ ಜಮೀಲ್ ಅಹ್ಮದ್ ಖಾನ್ ಮತ್ತು ಕಾಲೇ ಖಾನ್ ಈ ಸಭೆಯನ್ನುದ್ದೇಶಿಸಿ ಮಾತನಾಡಿದರು. ಹರ್ಯಾಣ ರೈತ ಮುಖಂಡ ಮಾಸ್ಟರ್ ಶೇರ್ ಸಿಂಗ್ ಅಧ್ಯಕ್ಷತೆಯಲ್ಲಿ ಈ ವಿಶೇಷ ಸಬೆ ನಡೆಯಿತು.

ಈ ಮೂಲಕ ಈ ಅಮಾನುಷ ಕೃತ್ಯದ ಬಗ್ಗೆ ಇನ್ನೂ ಮೌನವಾಗಿರುವ, ಹಲ್ಲೆಕೋರರನ್ನು ಇನ್ನೂ ಬಂಧಿಸದ ರಾಜಸ್ತಾನದ ಬಿಜೆಪಿ ಸರಕಾರ ಮತ್ತು ತಮ್ಮ ಪೀಡಿತ ರೈತರಿಗೆ ಏನೊಂದೂ ಪರಿಹಾರ ನಿಡದ ಹರ್ಯಾಣದ ಬಿಜೆಪಿ ಸರಕಾರಕ್ಕೆ ಹಾಗೂ ದೇಶದೆಲ್ಲೆಡೆಗಳಲ್ಲಿ ಇಂತಹ ಕ್ರೌರ್ಯಗಳ ಬಗ್ಗೆ ದಿವ್ಯಮೌನ ತಳೆದಿರುವ ಪ್ರಧಾನಿಗಳಿಗೆ ಜನಸಾಮಾನ್ಯರು ಸವಾಲು ಹಾಕಿದ್ದಾರೆ.

ಆರೆಸ್ಸೆಸ್ ನೇತೃತ್ವದ ‘ಗೋರಕ್ಷಕ’ರೆನ್ನುವ ಕಾವಲುಕೋರ ಪಡೆಗಳು ಇನ್ನಷ್ಟು ಕೋಮುವಾದಿ ಉನ್ಮಾದ ಮತ್ತು ಅರಾಜಕತೆಯನ್ನು ಹರಡದಂತೆ ತಡೆಯುವ ಒಂದು ಸಂದೇಶವಾಗಿ ರಾಜಸ್ತಾನ ರಾಜ್ಯ ಸರಕಾರ ಪೆಹ್ಲೂ ಖಾನ್ ಕುಟುಂಬಕ್ಕೆ 1 ಕೋಟಿ ರೂ.ಗಳ ಪರಿಹಾರವನ್ನು ಕೊಡಬೇಕು ಎಂಬ ಆಗ್ರಹವನ್ನು ಪುನರುಚ್ಚರಿಸಿರುವ ಎಐಕೆಎಸ್ ಸರಕಾರ ಈ ಹರ್ಯಾಣದ ಈ ರೈತರಿಗೆ ನ್ಯಾಯ ಒದಗಿಸಲು ವಿಫಲವಾದರೆ, ಇಡೀ ದೇಶದ ರೈತರು ಅವರಿಗೆ ಪರಿಹಾರ ಮತ್ತು ನ್ಯಾಯ ಒದಗುವಂತೆ ಮಾಡುತ್ತಾರೆ ಎಂದು ಎಚ್ಚರಿಸಿದೆ. ಜನತೆ ಈ 15ಲಕ್ಷರೂ.ಗಳನ್ನು ಸಂಗ್ರಹಿಸುವಲ್ಲಿ ನೆರವಾಗುವ ಮೂಲಕ ಕೋಮುವಾದಿ ಹಿಂಸಾಚಾರಿಗಳಿಗೆ ಮತ್ತು ಕಣ್ಮುಚ್ಚಿ ಕೂತಿರುವ ಸರಕಾರಗಳೀಗೆ, ಬಿಜೆಪಿ ಆಳರಸರಿಗೆ ಸ್ಪಷ್ಟ ಸಂದೇಶವನ್ನು ನೀಡಿದ್ದಾರೆ ಎಂದು ಹೇಳಿರುವ ಎಐಕೆಎಸ್ ಮುಖಂಡರು ಈ ಹಣಸಂಗ್ರಹದಲ್ಲಿ ನೆರವಾದ ಎಲ್ಲರಿಗೂ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ.





ಎಲ್‌ಡಿಎಫ್ ಸರಕಾರ: ಜನಪರ ಪರ್ಯಾಯದ ದಾರಿಯಲ್ಲಿ ಒಂದು ವರ್ಷ

ಮೇ 25 ರಂದು ಕೇರಳದ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರಕಾರ ಒಂದು ವರ್ಷವನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಒಂದು ವರ್ಷದಲ್ಲಿ ಅದು 'ಅಚ್ಛೇ ದಿನ್' ಸರಕಾರದಂತೆ ತನ್ನ ಚುನಾವಣಾ ಭರವಸೆಗಳನ್ನು ಮರೆಯದೆ, ತನ್ನ ಚುನಾವಣಾ ಪ್ರಣಾಳಿಕೆಯ ಅಂಶಗಳನ್ನು ಒಂದೊಂದಾಗಿ ಜಾರಿಗೆ ತರಲು ಪ್ರಯತ್ನಿಸಿ ಒಂದು ಪರ್ಯಾಯ ದಾರಿಯನ್ನು ರೂಪಿಸಲು ಪ್ರಯತ್ನಿಸಿದೆ.

ಈ ಒಂದು ವರ್ಷದಲ್ಲಿ ಮಾಡಿರುವ ಕೆಲವು ಕೆಲಸಗಳು:

* ಏಳು ತಿಂಗಳಿಂದ ಇದ್ದ ಬಾಕಿಯೂ ಸೇರಿದಂತೆ ಸಾಮಾಜಿಕ ಕಲ್ಯಾಣ ಪೆನ್ಶನ್‌ಗಳನ್ನು ವಿತರಿಸಲಾಗಿದೆ. ಎಲ್ಲ ಪೆನ್ಶನ್‌ಗಳನ್ನು ಮೊದಲು 1000ರೂ.ಗೆ, ನಂತರ 1100ರೂ.ಗೆ ಏರಿಸಲಾಯುತು.
* ವಿಶೇಷ ಘಟಕ ಯೋಜನೆ(ಎಸ್‌ಸಿಪಿ)ಗೆ 2600 ಕೋಟಿ ರೂ. ಮತ್ತು ಬುಡಕಟ್ಟು ಉಪ ಯೋಜನೆ(ಟಿಎಸ್‌ಪಿ)ಗೆ 751 ಕೋಟಿ ರೂ. ಎತ್ತಿಡಲಾಗಿದೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಜನಗಳ ಪ್ರಮಾಣ 9.1% ವಾಗಿದ್ದು ಒಟ್ಟು ಮೊತ್ತದ 9.81% ವನ್ನು ಕೊಡಲಾಗಿದ್ದರೆ, 1.45% ದಷ್ಟಿರುವ ಬುಡಕಟ್ಟು ಜನರಿಗೆ 2.83% ಕೊಡಲಾಗಿದೆ. ಜನಸಂಖ್ಯೆಗೆ ಮೀರಿದ ಈ ಘಟಕ ಯೋಜನೆಗಳ ಪ್ರಮಾಣಗಳು ಬೇರಾವ ರಾಜ್ಯಕ್ಕಿಂತಲೂ ಹೆಚ್ಚು.
* ಓಣಂ ಮತ್ತು ಕ್ರಿಸ್‌ಮಸ್ ಸಂತೆಗಳನ್ನು ಏರ್ಪಡಿಸಲಾಯಿತು. ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟು ಜಾತಿಗಳ ಜನರಿಗೆ ಓಣಂ ಕಿಟ್‌ಗಳನ್ನು ವಿತರಿಸಲಾಯಿತು. ಮಕ್ಕಳಿಗೆ ಓಣಂಗೆ 5 ಕೆ.ಜಿ. ಪುಕ್ಕಟೆ ಅಕ್ಕಿ ಕೊಡಲಾಯಿತು.
* ಪಶ್ಚಿಮ ಬಂಗಾಲದಿಂದ ಅಕ್ಕಿ ತರಿಸಿಕೊಂಡು ಬೆಲೆಯ ಮೇಲೆ ಹತೋಟಿಯಿಡಲಾಯಿತು. 13 ಆವಶ್ಯಕ ಸಾಮಗ್ರಿಗಳ ಬೆಲೆಗಳ ಹತೋಟಿಗೆ ಸರಕಾರ ಮಧ್ಯಪ್ರವೇಶ ಮಾಡಿತು.
* ಎಂಡೋಸಲ್ಫನ್ ಪೀಡಿತರಿಗೆ 57.76 ಕೋಟಿ ರೂ.ಗಳ ಕಲ್ಯಾಣ ಯೋಜನೆಯನ್ನು ಜಾರಿ ಮಾಡಲಾಗಿದೆ.
* ಮುಖ್ಯಮಂತ್ರಿಗಳ ಪರಿಹಾರ ನಿಧಿಯ ಮೂಲಕ 86,336 ಜನರಿಗೆ 105.63 ಕೋಟಿ ರೂ. ವಿತರಿಸಲಾಯಿತು.

ಆರ್ಥಿಕ ಹಿಂಜರಿತವನ್ನು ಎದುರಿಸಲು ಸಾರ್ವಜನಿಕ ಖರ್ಚುಗಳನ್ನು ಕಡಿತ ಮಾಡಿ ದೊಡ್ಡ ಕಾರ್ಪೊರೇಟ್‌ಗಳನ್ನು ಬಚಾವ್ ಮಾಡಬೇಕು, ಆಗ ಜನ ಉದ್ಯೋಗ ಕಳಕೊಳ್ಳದಂತೆ ಮಾಡಬಹುದು ಎಂಬ ಜಾಗತೀಕರಣದ ಧೋರಣೆಯನ್ನು ಮೋದಿ ಸರಕಾರ ಅನುಸರಿಸುತ್ತಿರುವಾಗ ಅದಕ್ಕೆ ಪರ್ಯಾಯವಾಗಿ ಎಲ್‌ಡಿಎಫ್ ಸಾರ್ವಜನಿಕ ಖರ್ಚನ್ನು ಹೆಚ್ಚಿಸುವ ಮೂಲಕ ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸಿ ಅಭಿವೃದ್ಧಿ ಸಾಧಿಸುವ ಮಾರ್ಗವನ್ನು ಆಯ್ದುಕೊಳ್ಳಲು ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ತಮ್ಮ ಒಂದು ವರ್ಷದ ಅನುಭವವನ್ನು ಕುರಿತು ಹೇಳಿದ್ದಾರೆ.

ನವ-ಉದಾರವಾದ ಸಲಹೆ ಮಾಡುವ ಮಿತವ್ಯಯದ ಯುಗದಲ್ಲಿ, ಅದಕ್ಕೆ ವ್ಯತಿರಿಕ್ತವಾಗಿ ಎಲ್‌ಡಿಎಫ್ ಸರಕಾರ ಸಾಗುವಳಿ ಪ್ರದೇಶವನ್ನು ಹೆಚ್ಚಿಸುವ ಕೆಲಸಕ್ಕೆ, ಬೀಳು ಭೂಮಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಸಾಗುವಳಿ ಆರಂಭಿಸಿ ಕೃಷಿಯನ್ನು ಲಾಭದಾಯಕಗೊಳಿಸುವ ಪ್ರಯತ್ನಕ್ಕೆ ಕೈಹಾಕಿದೆ.

ಶಿಕ್ಷಣ ಜನರಿಗೆ ಹೊರೆಯಾಗಬಾರದೆಂದು 900 ಕೋಟಿ ರೂ.ಗಳ ಶೈಕ್ಷಣಿಕ ಸಾಲ ತೀರಿಸುವ ಯೋಜನೆಯನ್ನು ಜಾರಿಗೆ ತಂದಿದೆ. ಉನ್ನತ ಶಿಕ್ಷಣಕ್ಕೆ ಈ ನೆರವಿನೊಂದಿಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದಲ್ಲಿನ ಮೂಲರಚನೆಯ ಕೊರತೆಗಳನ್ನು ನಿವಾರಿಸುವ ಕೆಲಸವನ್ನೂ ಆರಂಭಿಸಲಾಗಿದೆ.

ಈ ಸರಕಾರ ಅಧಿಕಾರಕ್ಕೆ ಬರುವಾಗ ನೇಮಕಾತಿಗಳ ಮೇಲೆ ಅಘೋಷಿತ ನಿಷೇಧ ಇತ್ತು. ಎಲ್‌ಡಿಎಫ್ ಸರಕಾರ ಖಾಲಿ ಹುದ್ದೆಗಳನ್ನು ಪ್ರಕಟಿಸುವಂತೆ ಆದೇಶ ನೀಡಿತು, ಈ ಮೂಲಕ ಮೊದಲ 100 ದಿನಗಳೊಳಗೆ 10,000 ಖಾಲಿ ಹುದ್ದೆಗಳ ಪ್ರಕಟನೆ ಆಯಿತು. ಸಾರ್ವಜನಿಕ ಸೇವಾ ಅಯೋಗ 36,000 ಹುದ್ದೆಗಳನ್ನು ಭರ್ತಿ ಮಾಡಿದೆ, 3500 ಹೊಸ ಉದ್ಯೋಗಗಳನ್ನು ನಿರ್ಮಿಸಲಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಕೈಗಾರಿಕಾ ಅಭಿವೃದ್ಧಿ ಎಂದರೆ ಹೊಸ ಉದ್ದಿಮೆಗಳ ಸ್ಥಾಪನೆ ಮಾತ್ರವೇ ಅಲ್ಲ, ಈಗಿರುವ ಸಾರ್ವಜನಿಕ ವಲಯದ ಘಟಕಗಳನ್ನು ಉಳಿಸಿಕೊಂಡು ಬೆಳೆಸುವುದು ಕೂಡ ಅದರಲ್ಲಿ ಸೇರಿರಬೇಕು ಎನ್ನುವ ಮುಖ್ಯಮಂತ್ರಿಗಳು 13 ಇಂತಹ ಘಟಕಗಳನ್ನು ಉಳಿಸಿ ಬೆಳೆಸಲು ಸಾಧ್ಯವಾಗಿದೆ ಎನ್ನುತ್ತಾರೆ. ಮುಚ್ಚಿದ್ದ ಗೇರುಬೀಜ ಕಾರ್ಖಾನೆಗಳನ್ನು ಮತ್ತೆ ತೆರೆಯಲಾಗಿದೆ, ಇದರಿಂದ 18,000 ಮಂದಿಗೆ ಮತ್ತೆ ತಮ್ಮ ಉದ್ಯೋಗ ಸಿಕ್ಕಿದೆ. ಪ್ಲಾಂಟೇಶನ್ ವಲಯದಲ್ಲೂ ಇಂತಹ ಮಧ್ಯಪ್ರವೇಶದ ಬಗ್ಗೆ ಸರಕಾರ ಯೋಚಿಸುತ್ತಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಕೇರಳ ಆಶಾ ಕಾರ್ಯಕರ್ತೆ-ಯರಿಗೆ ಗಮನಾರ್ಹ ವೇತನ ಹೆಚ್ಚಳ -ಎಐಸಿಸಿಎಡಬ್ಲ್ಯು ಸ್ವಾಗತ

ಕೇರಳದ ಎಲ್‌ಡಿಎಫ್ ಸರಕಾರ ರಾಜ್ಯದ ಆಶಾ ಕಾರ್ಯಕರ್ತೆಯರಿಗೆ ನೀಡುವ ಸಂಭಾವನೆಯ ಮೊತ್ತವನ್ನು 1500ರೂ.ನಿಂದ 7500ಕ್ಕೆ ಏರಿಸಿದೆ. ಇದು ಇಡೀ ದೇಶದಲ್ಲೇ ಆಶಾ ಕಾರ್ಯಕರ್ತೆಯರು ಪಡೆಯುತ್ತಿರುವ ಅತಿ ಹೆಚ್ಚಿನ ಮೊತ್ತ.

ಅಖಿಲ ಭಾರತ ಆಶಾ ಕಾರ್ಯಕರ್ತೆಯರ ಸಮನ್ವಯ ಸಮಿತಿ (ಎಐಸಿಸಿಎಡಬ್ಲ್ಯು-ಸಿಐಟಿಯು) ಎಲ್‌ಡಿಎಫ್ ಸರಕಾರದ ನಿರ್ಧಾರವನ್ನು ಸ್ವಾಗತಿಸುತ್ತ, ಇದು ಆರೋಗ್ಯ ವಲಯದಲ್ಲಿ ಆಶಾ ಕಾರ್ಯಕರ್ತೆಯರ ಅಮೂಲ್ಯ ಸೇವೆಗೆ ಸಂದಿರುವ ಮಾನ್ಯತೆ ಎಂದು ಹೇಳಿದೆ.

ಆದರೆ ಆಶಾ ಕಾರ್ಯಕರ್ತೆಯರು ತಮ್ಮ ಹೋರಾಟವನ್ನು ರಾಷ್ಟ್ರೀಯ ಮಟ್ಟದ ಬೇಡಿಕೆಗಳ ಈಡೇರಿಕೆಗೆ ಮುಂದುವರೆಸುತ್ತಾರೆ ಎಂದು ಸಮನ್ವಯ ಸಮಿತಿ ಹೇಳಿದೆ. ಈಗ 45ನೇ ಮತ್ತು 46ನೇ ಐಎಲ್‌ಸಿ ಶಿಫಾರಸುಗಳಂತೆ ಕನಿಷ್ಟ ವೇತನ, ಆರೋಗ್ಯ ಕಾರ್ಯಕರ್ತೆಯರಾಗಿ ಕೆಲಸದ ಖಾಯಮಾತಿ ಮತ್ತು ಸಾಮಾಜಿಕ ಭದ್ರತೆಯ ಸೌಲಭ್ಯಗಳಿಗಾಗಿ, ಎನ್‌ಹೆಚ್‌ಎಂನ್ನು ಸರಕಾರದ ಖಾಯಂ ಕಾರ್ಯಕ್ರಮವಾಗಿ ಮಾಡಬೇಕು, ಆರೋಗ್ಯ ವ್ಯವಸ್ಥೆಯ ಖಾಸಗೀಕರಣವನ್ನು ನಿಲ್ಲಿಸಬೇಕು, ಆರೋಗ್ಯ ವಲಯದ ಮೂಲರಚನೆಗಳ ಅಭಿವೃದ್ಧಿಗೆ ಜಿಡಿಪಿಯ ಕನಿಷ್ಟ 5%ವನ್ನು ಖರ್ಚು ಮಾಡಬೇಕು ಎಂಬ ಬೇಡಿಕೆಗಳ ಮೇಲೆ ದೇಶವ್ಯಾಪಿಯಾಗಿ ಸಹಿಸಂಗ್ರಹ ಚಳುವಳಿ ನಡೆ-ಯುತ್ತಿದೆ.

ಟಿಎಂಸಿ ಸರಕಾರವನ್ನು ನಡುಗಿಸಿದ ನಬನ್ನಾ ಚಲೋ: ಪೋಲಿಸ್ ಕ್ರೌರ್ಯಕ್ಕೆ ಜನತೆಯ ದಿಟ್ಟ ಸವಾಲು

ಮೇ 22 ರಂದು ಪಶ್ಚಿಮ ಬಂಗಾಳ ಮತ್ತೊಂದು ದೊಡ್ಡ ಪೊಲೀಸ್ ದಬ್ಬಾಳಿಕೆಗೆ ಸಾಕ್ಷಿಯಾಯಿತು. ಒಂದೆಡೆಯಲ್ಲಿ ರಾಜಧಾನಿ ಕೊಲ್ಕತಾ ಮತ್ತು ಪಕ್ಕದ ನಗರವಾದ ಹೌರಾ ಕೆಂಬಾವುಟಗಳಿಂದ ತುಂಬಿ ಹೋಗಿದ್ದರೆ, ಇನ್ನೊಂದೆಡೆಯಲ್ಲಿ ರಾಜ್ಯದ ಆಡಳಿತದ ಕೇಂದ್ರವಾದ ನಬನ್ನಾದ ಸುತ್ತಲೂ ಸರ್ಪಗಾವಲು ಹಾಕಿದ್ದ ಪೋಲಿಸ್ ಪಡೆಗಳು.

ರಾಜ್ಯದ ಎಡ ಪಂಥೀಯ ರೈತ ಮತ್ತು ಕೃಷಿ ಕೂಲಿಕಾರ ಸಂಘಟನೆಗಳ ಮುತುವರ್ಜಿಯಿಂದ ಎರಡು ತಿಂಗಳ ಹಿಂದೆ ಆರಮಭವಾದ ಈ ಚಳುವಳಿ ನಂತರ ಎಲ್ಲ ಸಾಮೂಹಿಕ ಸಂಘಟನೆಗಳ ಐಕ್ಯ ಚಳುವಳಿಯಾಗಿ ರೂಪುಗೊಂಡು ರಾಜ್ಯಾದ್ಯಂತ ಹಳ್ಳಿ-ಹಳ್ಳಿಗಳನ್ನು ತಲುಪಿತ್ತು.

ಇದರ ಅಂತಿಮ ಘಟ್ಟವಾಗಿ ಮೇ 22ರಂದು ಮುಖ್ಯಮತ್ರಿಗಳಿಗೆ 18 ಅಂಶಗಳ ಮನವಿ ಪತ್ರವನ್ನು ಸಲ್ಲಿಸುವ 'ನಬನ್ನಾ ಅವಿಜಾನ್' ಮೆರವಣಿಯನ್ನು ಯೋಜಿಸಲಾಗಿತ್ತು. ಹೂಗ್ಲಿ ನದಿಯ ಆಚೆ-ಈಚೆ, ಕೊಲ್ಕತಾದ ಮೂರು ಕಡೆಗಳಿಂದ, ಮತ್ತು ಹೌರಾದ ಎರಡು ಕಡೆಗಳಿಂದ ಬೃಹತ್ ಮೆರವಣಿಗೆಗಳು ಹೊರಟವು.

ಈ ಚಳುವಳಿಯಿಂದ ಭೀತಗೊಂಡ ಮುಖ್ಯಮಂತ್ರಿಗಳು ಅಂದು ಇದ್ದಕ್ಕಿದ್ದಂತೆ ಬೀರ್‌ಬೂಮ್ ಜಿಲ್ಲೆಯ ಬೋಲ್ಪುರ್‌ನಲ್ಲಿ ಆಡಳಿತ ಸಭೆಯನ್ನು ಏರ್ಪಡಿಸಿದರು. ಇತ್ತ ಯಾರೂ ನಬನ್ನಾದ ಸುತ್ತ ಉಕ್ಕಿನ ಬ್ಯಾರಿಕೇಟ್‌ಗಳನ್ನು ಹಾಕಿ ಆ ಕಡೆ ಬರದಂತೆ ಬರದಂತೆ ತಡೆಯುವ ಆದೇಶ ನೀಡಿದ್ದರು. ಆದರೆ ಇದ್ದಕ್ಕಿದ್ದಂತೆ ಎಡಪಕ್ಷಗಳ ಶಾಸಕರು ನಬನ್ನಾದ ಗೇಟಿನ ಮುಂದೆ ಮತಪ್ರದರ್ಶನ ಆರಂಭಿಸಿದ್ದು ಪೋಲಿಸರನ್ನು ದಿಗಿಲುಗೊಳಿಸಿತು. ಎಡರಂಗದ ಮುಖಂಡರು ತಾವೇನೂ ನಬನ್ನಾವನ್ನು ವಶಪಡಿಸಿಕೊಳ್ಳಲು ಬಂದಿಲ್ಲ, ಶಾಂತಿಯುತವಾಗಿ ನಮ್ಮ ಮನವಿ ಪತ್ರವನ್ನು ಸಲ್ಲಿಸಲು ಬಂದಿದ್ದೇವೆಯಷ್ಟೇ ಎಂದು ಸಾರಿಸಾರಿ ಹೇಳಿದರು. ಆದರ ಪೊಲೀಸರು ಅವರನ್ನೆಲ್ಲ ಬಂಧಿಸಿ ತಮ್ಮ ದಮನ ಚಕ್ರವನ್ನು ಆರಂಭಿಸಿಯೇ ಬಿಟ್ಟರು.

ಜಲಫಿರಂಗಿಗಳು, ಕೆಮಿಕಲ್ ಮಿಶ್ರಿತ ಆಶ್ರುವಾಯು ಮತ್ತು ಯದ್ವಾತದ್ವಾ ಲಾಟಿ ಪ್ರಹಾರ ಆರಂಭವಾಯಿತು. ಆದರೆ ಇದಾವುದಕ್ಕೂ ಎಡಪಕ್ಷಗಳ ಕಾರ್ಯಕರ್ತರು ಎದೆಗುಂದಲಿಲ್ಲ, ಒಂದೆಡೆಯಲ್ಲಿ ಪೋಲಿಸರು ಚದುರಿಸಿದರೆ ಇನ್ನೊಂದೆಡೆಯಲ್ಲಿ ಕೆಂಬಾವುಟಗಳನ್ನು ಎತ್ತಿ ಹಿಡಿದರು. 1000ಕ್ಕೂ ಹೆಚ್ಚು ಮಂದಿ ತೀವ್ರವಾಗಿ ಗಾಯುಗೊಂಡರು. ನಬನ್ನಾದ ಸುತ್ತಮುತ್ತಲಿನ ಪ್ರದೇಶ ಗಾಯಗೊಂಡ ಕಾರ್ಯಕರ್ತರು ನರಳುವ, ಆದರೂ ಎದ್ದು ನಿಂತು ಕೆಂಬಾವುಟ ಎತ್ತಿ ಹಿಡಿಯುವ ದೃಶ್ಯಗಳಿಂದ ತುಂಬಿ ಹೋಯಿತು.



ಮರು ದಿನ ಕೊಲ್ಕತ ಸೇರಿದಂತೆ ರಾಜ್ಯಾದ್ಯಂತ ಈ ಕ್ರೂರ ದಬ್ಬಾಳಿಕೆಯನ್ನು ಪ್ರತಿಭಟಿಸಿ ಮೆರವಣಿಗೆಗಳು, ಸಭೆಗಳು ನಡೆದವು.

ಸಹಯಾನ 2017

"ಜನಪರ, ಯುದ್ಧ-ವಿರೋಧಿ, ಪರಿಸರ-ಸ್ನೇಹಿ, ತಾರತಮ್ಯ-ವಿರೋಧಿ, ವಿವಿಧ ಅಸ್ಮಿತೆ ಕಾಪಾಡುವ 'ಸಹಯಾನ'ದೊಂದಿಗೆ ನಾಡು ನುಡಿ ಕಟ್ಟಬೇಕಾಗಿದೆ"

"ನಮ್ಮ ನಾಡು-ನುಡಿಗಳು ಇಂದು ಒಂದು ನಿರ್ಧಾರಾತ್ಮಕ ಕ್ಷಣದಲ್ಲಿ ನಿಂತಿವೆ. ಜಾಗತೀಕರಣ, ತೀವ್ರ ಬಂಡವಾಳಶಾಹಿ, ಮುಂದುವರಿದ ದೇಶಗಳ ಆರ್ಥಿಕ ಶೋಷಣೆ ಮತ್ತು ಸಾಂಸ್ಕೃತಿಕ ರಾಜಕಾರಣಗಳ ಕವಲು ಹಾದಿಯಲ್ಲಿ ನಿಂತಿರುವ ನಾವು ಈ ತನಕ ನಿರೂಪಿಸಿಕೊಂಡು ಬಂದಿರುವ ರಾಷ್ಟ್ರ ಮತ್ತು ಆಧುನಿಕತೆಗಳ ಕಲ್ಪನೆಗಳನ್ನು ವಿಶ್ಲೇಷಿಸಿಕೊಂಡು ನಮಗೆ ಬೇಕಾದ ಆಧುನಿಕತೆಯನ್ನು ರೂಪಿಸಿಕೊಳ್ಳಬೇಕಾಗಿದೆ. ಆ ಆಧುನಿಕತೆಯು ಜನಪರ, ಪರಿಸರ ಸ್ನೇಹಿ, ಯುದ್ಧ ವಿರೋಧಿ, ವರ್ಗ, ಜಾತಿ, ಲಿಂಗ ತಾರತಮ್ಯ ವಿರೋಧಿ, ವಿವಿಧ ಜನ, ಜನಾಂಗ, ಗುಂಪು, ಪಂಗಡಗಳ ಸಾಮಾಜಿಕ ಅಸ್ಮಿತೆಯನ್ನೂ ಸಾಂಸ್ಕೃತಿಕ ಅನನ್ಯತೆಯನ್ನೂ ಕಾಪಾಡುವ ಆಧುನಿಕತೆಯಾಗಿರಬೇಕು. ಸಹಯಾನವಾಗಿರಬೇಕು. ವಿಭಿನ್ನತೆಗಳನ್ನೂ, ವ್ಯತ್ಯಾಸಗಳನ್ನೂ ಮಾನ್ಯ ಮಾಡುತ್ತಲೇ ನಮ್ಮ ರಾಷ್ಟ್ರೀಯ ಮತ್ತು ಕನ್ನಡದ ಅಸ್ಮಿತೆಗಳನ್ನು, ಅಂದರೆ ನಾಡು ನುಡಿಗಳನ್ನು ನಾವು ಕಟ್ಟಬೇಕಾಗಿದೆ. ಇಂದು ಕನ್ನಡದಲ್ಲಿ ಪ್ರಕಟವಾಗುತ್ತಿರುವ ಬರಹಗಳು ಮತ್ತು ಅವುಗಳನ್ನು ಬರೆಯುವ ಲೇಖಕರು ಈ ಹಿನ್ನೆಲೆಯಿಂದ ಬರೆಯುತ್ತಿದ್ದಾರೆ. ಒಂದು ರೀತಿಯಲ್ಲಿ ಎಲ್ಲ ಬರಹಗಳೂ ಮೂಲಭೂತವಾಗಿ ರಾಜಕೀಯವಾಗಿವೆ. ಸ್ವಹಿತಾಸಕ್ತಿ, ಪಟ್ಟಭದ್ರ ಹಿತಾಸಕ್ತಿ, ಅಧಿಕಾರ ರಾಜಕಾರಣ, ಸಾಂಸ್ಥಿಕವಾಗಿ ಜಡಗೊಂಡ ಧಾರ್ಮಿಕ, ರಾಜಕೀಯ ಮತ್ತು ಮೂಲಭೂತವಾದಿ ವಿಚಾರಧಾರೆಗಳ ವಿರುದ್ಧ ಸಾಹಿತ್ಯ ಯಾವಾಗಲೂ ದಂಗೆ ಏಳುತ್ತದೆ ಮತ್ತು ದಂಗೆ ಎದ್ದಿದೆ. ಈ ಅರ್ಥದಲ್ಲಿ ಸಾಂಸ್ಥಿಕ ಜಡತೆಗಳ ವಿರುದ್ಧ ವಿದ್ರೋಹ ಸಾಹಿತ್ಯದ ಒಡಲಲ್ಲೇ ಇದೆ" ಎಂದು ಸಹಯಾನ ಸಾಹಿತ್ಯೋತ್ಸವದ ಸರ್ವಾಧ್ಯಕ್ಷರಾದ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ. ಶಿವರಾಮ ಪಡಿಕ್ಕಲ್ ಹೇಳಿದರು.

ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರ ಸಹಯೋಗದಲ್ಲಿ ಸಹಯಾನ (ಡಾ. ಆರ್.ವಿ. ಭಂಡಾರಿ ನೆನಪಿನ ಸಂಸ್ಕೃತಿ ಅಧ್ಯಯನ ಕೇಂದ್ರ) ವು ಹೊನ್ನಾವರದ ಕೆರೆಕೋಣದಲ್ಲಿ ಹಮ್ಮಿಕೊಂಡ 'ನಾಡು-ನುಡಿಯ ಪುನರ್ ನಿರೂಪಣೆ: ಹೊಸತಲೆಮಾರು' ಎನ್ನುವ ವಿಷಯದ ಕುರಿತ ಸಹಯಾನ ಸಾಹಿತ್ಯೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮುಂದುವರಿದು, ಅವರು "ಇಂದು ನಾವಿರುವುದು ಯುರೋಪಿನ ಜ್ಞಾನ ಪರ್ವದ ಕಾಲದಲ್ಲಿ ವಿಕಾಸಗೊಂಡ ಆಧುನಿಕತೆ ಅಥವಾ ವಸಾಹತುಶಾಹಿಯ ವಿರುದ್ಧದ ಸ್ವಾತಂತ್ರ್ಯ ಹೋರಾಟದಲ್ಲಿ ರೂಪುತಳೆದ ರಾಷ್ಟ್ರ ಕೇಂದ್ರಿತ ಆಧುನಿಕತೆಯ ಯುಗದಲ್ಲಿ ಇಲ್ಲ. ನಾವಿರುವುದು ಜಾಗತಿಕ ಮತ್ತು ಭೌಗೋಳಿಕ ಆಧುನಿಕತೆಯ ಅಲ್ಲ ಆಧುನಿಕತೆಗಳ ಸಂದರ್ಭದಲ್ಲಿ. ಇಲ್ಲಿ ಒಂದು ಯಜಮಾನ ಕಥನವಿಲ್ಲ, ಏಕರೂಪೀ ಅಸ್ಮಿತೆಯಿಲ್ಲ, ಐಕ್ಯಗೊಂಡ ವ್ಯಕ್ತಿತ್ವ ಅಥವಾ ವಕ್ತೃತ್ವವಿಲ್ಲ. ಇದು ಅನೇಕ ಅಸ್ಮಿತೆಗಳ, ಅನೇಕ ವ್ಯಕ್ತಿತ್ವಗಳ, ವಕ್ತೃತ್ವಗಳ ಮತ್ತು ಆಧುನಿಕತೆಗಳ ಕಾಲ. ಯಜಮಾನ ಸಂಕಥನಗಳನ್ನು ಪ್ರಶ್ನಿಸಿ, ಅವುಗಳಿಗೆ ಸೆಡ್ಡು ಹೊಡೆದು ಸವಾಲೊಡ್ಡಿ ವಿಭಿನ್ನ ರೀತಿಯ ಸಂಕಥನಗಳ ಸಾಧ್ಯತೆಯನ್ನು ಆಗು ಮಾಡುವ ಬರಹಗಳನ್ನು ಇಂದಿನ ಲೇಖಕರು ಬರೆಯುತ್ತಿದ್ದಾರೆ. ನಾಡು ಮತ್ತು ನುಡಿಗಳು ಸರ್ವ ಜನಾಂಗದ ಸುಂದರ ತೋಟ ಮತ್ತು ನೂರು ಮರ ನೂರು ಸ್ವರ ಎನ್ನುವ ಮಾತನ್ನು ಹಿಂದೆಂದಿಗಿಂತಲೂ ತೀವ್ರವಾಗಿ ಇಂದಿನ ಲೇಖಕರು ನಿರೂಪಿಸುತ್ತಿದ್ದಾರೆ.

ನಮ್ಮ ನಾಡು ನುಡಿಗಳು ಆಧುನಿಕಗೊಂಡು ಅರಳಿದುದು ವಸಾಹತುಶಾಹಿ ವಿರುದ್ಧದ ಹೋರಾಟದಲ್ಲಿ, ಅದು ತಂದ ಆಧುನಿಕತೆಯ ಪರಿಪ್ರೇಕ್ಷ್ಯದಲ್ಲಿ ಮತ್ತು ರಾಷ್ಟ್ರೀಯತೆಯ ನಂಟಿನಲ್ಲಿ. ಭಾರತ ರಾಷ್ಟ್ರ ಮತ್ತು ಕನ್ನಡ ನಾಡು ಎನ್ನುವ ಮಹಾಕಲ್ಪನೆಯಲ್ಲಿ ಭಾಷಿಕ, ಜನಾಂಗಿಕ, ಲಿಂಗಭೇದದ, ಪ್ರಾದೇಶಿಕ ಮತ್ತು ಜಾತೀಯ ವೈವಿಧ್ಯಗಳನ್ನು ಕರಗಿಸಿ ಆಧುನಿಕ ಸಮಾನತಾ ಸಮಾಜವನ್ನು ಕಟ್ಟುವುದು ರಾಷ್ಟ್ರೀಯವಾದಿಗಳ ಕನಸಾಗಿತ್ತು. ಆಧುನಿಕತೆಯು ಆಧುನಿಕ ಪೂರ್ವ ಸಮಾಜದ ವೈರುಧ್ಯಗಳನ್ನು ಕರಗಿಸಿ ಸಮಾನತಾ ಸಮಾಜವನ್ನು ನಿರ್ಮಿಸಬಲ್ಲದು ಎನ್ನುವುದು ಅವರ ನಂಬಿಕೆ ಆಗಿತ್ತು. ಆ ಕನಸು ಸಮಾಜದ ಮೇಲುಸ್ತರದ ಜನರಿಂದ, ಸಾಂಸ್ಕೃತಿಕ ಗಣ್ಯರಿಂದ ರೂಪಿತವಾದುದರಿಂದಾಗಿ ಸಾಮಾಜಿಕ ಕ್ರಾಂತಿಯನ್ನು ತಳಮಟ್ಟದ ಸಾಮಾಜಿಕ ಪರಿವರ್ತನೆಯನ್ನು ತರಲು ಸಾಧ್ಯವಾಗಿಲ್ಲ. ರಾಷ್ಟ್ರ ಮತ್ತು ಆಧುನಿಕತೆಗಳ ನಿರೂಪಣೆಯಲ್ಲಿ ಗಣ್ಯವರ್ಗಗಳು ಮುಂದಿಟ್ಟ ರೂಪಕಗಳು ಇಂದು ಬಿಕ್ಕಟ್ಟಿಗೆ ಸಿಲುಕಿದೆ. ಆಧುನಿಕತೆಯನ್ನು ಹೊಸ ತಲೆಮಾರು ಪುನರ್ ನಿರೂಪಿಸುವಾಗ ಈ ಪ್ರತಿಮೆಗಳ ವಿಶ್ಲೇಷಣೆ ಮತ್ತು ಪುನರ್‌ನಿರೂಪಣೆ ಅಗತ್ಯ.

ಇಂದು ನಾವು ಬಹುಮುಖ ಚಿಂತನೆ, ಬಹುಮುಖಿ ವಿಚಾರಧಾರೆಗಳು, ಅಭಿವ್ಯಕ್ತಿ ಸ್ವಾತಂತ್ರ್ಯ, ವಿವಿಧ ಸಾಂಸ್ಕೃತಿಕ ಅಸ್ಮಿತೆಗಳಿಗೆ ಮನ್ನಣೆ ಸಾಮಾಜಿಕ ಅನ್ಯಾಯ ಅಸಮಾನತೆಗಳ ವಿರೋಧ, ಸ್ತ್ರೀ ಸ್ವಾತಂತ್ರ್ಯ, ಪರಿಸರ ಪ್ರೇಮಿ ಬಹಿರಂಗದ ಆರ್ಥಿಕ ಪ್ರಗತಿಯ ಜೊತೆಗೇ ಅಂತರಂಗದ ಪರಿಶುದ್ಧತೆಯನ್ನು ಕಾಪಾಡುವ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ನಾಡು-ನುಡಿಗಳ ಕನಸಿನಿಂದ ಕೂಡಿದ ಸಂಕಥನಗಳನ್ನು ಯಜಮಾನ ಸಂಸ್ಕೃತಿ ಮತ್ತು ಅಧಿಕಾರಗಳು ಮುಂದಿಡುವ ಏಕರೂಪೀ ಸಂಕಥನಗಳಿಗೆ ಎದುರು ಸಂಕಥನಗಳನ್ನು ಪ್ರತಿ ಸಂಕಥನಗಳನ್ನು ನಿರೂಪಿಸಬೇಕಾಗಿದೆ." ಎಂದರು.

ಸಾಹಿತ್ಯೋತ್ಸವವನ್ನು ಉದ್ಘಾಟಿಸಿದ ಕತೆಗಾರ ಕಾ.ತ.ಚಿಕ್ಕಣ್ಣ ಮಾತನಾಡಿ ಸಮಾಜದ ಮೌಲ್ಯಗಳನ್ನು ಕಟ್ಟುವ ಕೆಲಸ ಆಗಬೇಕು. ನಾಡು ರಾಷ್ಟ್ರ ಧರ್ಮ ಭಾಷೆ ಇವು ಪರಸ್ಪರರನ್ನು ಬೆಸೆಯಲು ಹುಟ್ಟಿಕೊಂಡವು. ಆದರೆ ಈಗ ಅವುಗಳನ್ನು ಬಳಸಿ ಒಡೆಯುವ ಕೆಲಸ ನಡೆಯುತ್ತಿದೆ. ಬದಲಾಗಿ



ಬೆಸೆಯುವ ಯಾನವೂ ಯುವಜನರಿಂದ ನಡೆಯಬೇಕಾಗಿದೆ. ಬಾವುಟ ಭಾಷಣಗಳೆಲ್ಲ ಬಾಹ್ಯ ಜಗತ್ತು. ಜೀವನದ ಮೌಲ್ಯಗಳನ್ನು ಬಿತ್ತಿ ಬೆಳೆಯುವ ಕೆಲಸ ಅಂತರಂಗದಲ್ಲಿ ಆಗಬೇಕಾಗಿದೆ ಎಂದರು.

ಅತಿಥಿಯಾಗಿ ಪಾಲ್ಗೊಂಡ ಸಮುದಾಯ ಕರ್ನಾಟಕದ ಅಧ್ಯಕ್ಷರಾದ ಎ.ಅಚ್ಯುತ ಮಾತನಾಡಿ ಶ್ರೀಮಂತರ ಮತ್ತು ಬಡವರ ನಡುವಿನ ಅಂತರ ಹೆಚ್ಚುತ್ತಿದೆ. ಕೃಷಿಕರು ಮತ್ತು ಕೃಷಿ ರಂಗ ಸಂಕಟದಲ್ಲಿದೆ. ಇದನ್ನು ಪರಿಹರಿಸುವ ಬದಲು ಏಕಮುಖೀ ಸಂಸ್ಕೃತಿಯನ್ನು ಹೇರುವ ಮೂಲಕ ರಾಜಕೀಯ ತಲ್ಲಣವ್ನುಂಟುಮಾಡಲಾಗುತ್ತಿದೆ. ಇದರಿಂದ ಹೊರಬರಲು ಯುವಕರು ಸಹಯಾನದ ಸಂಕಲ್ಪ ಮಾಡಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಹಯಾನದ ಕಾರ್ಯದರ್ಶಿ ಡಾ. ವಿಠ್ಠಲ ಭಂಡಾರಿ ಈ ಸಲದ ಸಹಯಾನ ಸಾಹಿತ್ಯೋತ್ಸವದಲ್ಲಿ ನಮ್ಮ ಕಾಲದ ಸಾಹಿತ್ಯ, ರಾಷ್ಟ್ರ, ಭಾಷೆ ಹಾಗೂ ಸಾಂಸ್ಕೃತಿಕ ವೈವಿಧ್ಯಗಳ ಪ್ರಶ್ನೆಗಳನ್ನು ಹೊಸ ತಲೆಮಾರು ಹೇಗೆ ನಿರ್ವಹಿಸುತ್ತಿದೆ ಎಂಬುದನ್ನೇ ಮುಖ್ಯ ಪ್ರಶ್ನೆಯಾಗಿ ಚರ್ಚಿಸಬೇಕೆಂದಿದ್ದೇವೆ. ಇಂದಿನ ಸಾಹಿತ್ಯ ಕಲ್ಪಿಸುವ ನಾಡು ನುಡಿಯ ಸ್ವರೂಪ ಎಂತಹುದು, ಈ ಕಲ್ಪನೆಯ ಹಿಂದಿನ ತಾತ್ವಿಕ ಗೃಹಿಕೆಗಳು, ಒತ್ತಾಸೆಗಳು ಯಾವುವು, ಈ ಕಲ್ಪನೆಯನ್ನು ಸಾಧ್ಯವಾಗಿಸಿದ ಸಾಂಸ್ಕೃತಿಕ ಸನ್ನಿವೇಶ ಯಾವೆಲ್ಲ ಪ್ರಶ್ನೆಗಳನ್ನು ಮುಂದಿಡುತ್ತಿದೆ. ಸಾಹಿತ್ಯ ಈ ಪ್ರಶ್ನೆಗಳನ್ನು ಹೇಗೆ ನಿಭಾಯಿಸುತ್ತದೆ, ವಿಸ್ತಾರವಾದ ಓದುಗ ವರ್ಗದ ಪಾತ್ರವೇನು ಎನ್ನುವ ಪ್ರಶ್ನೆಯಾಧಾರದಲ್ಲಿ ಒಂದು ಚರ್ಚೆಯನ್ನು ಹುಟ್ಟುಹಾಕಲು ಈ ಸಲದ ಸಹಯಾನ ಸಾಹಿತ್ಯೋತ್ಸವ ಬಯಸುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಹಯಾನದ ಪರಿಚಯ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು. ಪ್ರಾರಂಭದಲ್ಲಿ ಸಹಯಾನದ ಕಾರ್ಯಾಧ್ಯಕ್ಷ ವಿಷ್ಣು ನಾಯ್ಕ ಸ್ವಾಗತಿಸಿದರೆ ಚಿಂತನದ ಕಿರಣ ಭಟ್ ವಂದಿಸಿದರು. ನಂತರ ನಡೆದ ಸಂವಾದದಲ್ಲಿ ಡಾ. ಮಲ್ಲಿಕಾರ್ಜುನ ಮೇಟಿ ಮತ್ತು ಬಿ. ಪೀರ್ ಭಾಷಾ ಇವರು ನಾಡು ಮತ್ತು ನುಡಿಯ ಪುನರ್ ನಿರೂಪಣೆಯ ಕುರಿತು ಮಾತನಾಡಿದರು. ಸಂವಾದದಲ್ಲಿ ಡಾ. ನಾಗಪ್ಪ ಗೌಡ, ಡಾ. ಕಿರಣ ಗಾಜನೂರು, ಡಾ. ಆರ್. ಛಲಪತಿ, ಡಾ. ಜಿ.ಎಂ. ಗಣೇಶ, ಕೃಷ್ಣಪ್ಪ ಕೊಂಚಾಡಿ, ವಾಸುದೇವ ಬೆಳ್ಳೆ, ಡಾ. ಅನಸೂಯಾ ಕಾಂಬಳೆ, ಡಾ. ಎಚ್. ಎಸ್ ಅನುಪಮಾ, ಡಾ. ಜಯಪ್ರಕಾಶ ಶೆಟ್ಟಿ, ರಮಾನಂದ ಅಂಕೋಲಾ, ಎಸ್. ವೈ ಗುರುಶಾಂತ ಮುಂತಾದವರು ಪಾಲ್ಗೊಂಡು ಚರ್ಚೆಯನ್ನು ಅರ್ಥಪೂರ್ಣಗೊಳಿಸಿದರು. ಕಾವ್ಯಶ್ರೀ ನಾಯ್ಕ ಗೋಷ್ಠಿಯನ್ನು ನಿರ್ವಹಿಸಿದರು.

"ಕುರಿಗಳು ಕಟುಕನನ್ನು ಆರಾಧಿಸುವಂತೆ ಮಾಡುವ ರಾಷ್ಟ್ರವಾದ ತಿರಸ್ಕರಿಸಬೇಕು. ಸರ್ವರ ನಾಡು-ನುಡಿಯ ಜತೆ ತನ್ನ ನಾಡು-ನುಡಿ ಪ್ರೀತಿಸುವ ಮಾನವಾತಾವಾದಿ ನಾಡವಾದವನ್ನು ಪುರಸ್ಕರಿಸಬೇಕು" ಎಂದು ಸಮಾರೋಪದಲ್ಲಿ ಮುಖ್ಯ ಅತಿಥಿಯಾಗಿ ಬಂದಿದ್ದ ರಮಜಾನ್ ದರ್ಗಾ ಮಾತನಾಡುತ್ತಾ ಹೇಳಿದರು. ಸಮಾರೋಪದಲ್ಲಿ ಇನ್ನೊಬ್ಬ ಮುಖ್ಯ ಅತಿಥಿ ಎನ್. ಗಾಯತ್ರಿ ಅವರೂ ಮಾತನಾಡಿದರು.



ಬಿಸಿಯೂಟ ಕಾರ್ಮಿಕರ ರಾಜ್ಯಾದ್ಯಂತ ಪ್ರತಿಭಟನೆ.... ಪುಟ 16 ರಿಂದ

ಬಗ್ಗೆ ವರದಿಗಳು ಬಂದಿವೆ. ಮೆರವಣಿಗೆಯಲ್ಲಿ ಬಂದ ಬಿಸಿ ಊಟ ಕಾರ್ಮಿಕರು ಜಿಲ್ಲಾ ಪಂಚಾಯತ್ ಎದುರು ಪ್ರತಿಭಟನೆ ನಡೆಸಿದರು. ಬಳ್ಳಾರಿಯಲ್ಲಿ ಪ್ರತಿಭಟನೆಗೆ ಆಡಳಿತ ಅವಕಾಶ ಮಾಡಿಕೊಡದೆ ಪೊಲೀಸರ ಜತೆ ಕಾರ್ಮಿಕರ ಚಕಮಕಿ ನಡೆಯಿತು.

ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಿಸಲು, ಮಕ್ಕಳ ಏಕಾಗ್ರತೆ ಹೆಚ್ಚಿಸಲು, ಶಾಲಾ ಹಂತದಲ್ಲಿರುವ ಜಾತಿ-ತಾರತಮ್ಯ ಹೋಗಲಾಡಿಸಲು, ಬಾಲಕಾರ್ಮಿಕರಾಗಿ ಪರಿವರ್ತನೆ ಆಗುವದನ್ನು ತಪ್ಪಿಸಲು 2001-02 ರಲ್ಲಿ ಬಿಸಿಯೂಟದ ಯೋಜನೆ ಪ್ರಾರಂಭವಾಗಿದ್ದು, ಆ ಮೇಲೆ ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಪ್ರಗತಿ ಕಾಣಲಾಗಿದೆ ಎಂದು ಸರ್ಕಾರ ಅಂಕಿ-ಅಂಶಗಳು ಹೇಳುತ್ತಿವೆ. ಈ ಯೋಜನೆಯಡಿಯಲ್ಲಿ ಲಕ್ಷಾಂತರ ಮಹಿಳೆಯರಿಗೆ ಅಂದರೆ ದಲಿತ-ವಿಧವಾ-ಸಂತ್ರಸ್ತ ಮಹಿಳೆಯರಿಗೆ ಉದ್ಯೋಗ ಕಲ್ಪಿಸುವುದರ ಮೂಲಕ ಸಾಮಾಜಿಕ ನ್ಯಾಯ ಎತ್ತಿ ಹಿಡಿಯಲು ಸಾಧ್ಯವಾಗಿದೆ, ಎಂದು ಹಲವು ಕಡೆ ಪ್ರತಿಭಟನೆಯಲ್ಲಿ ಭಾಷಣಕಾರರು ಹೇಳಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಿಸಿಯೂಟ ಯೋಜನೆಯ ಖಾಸಗೀಕರಣವನ್ನು ಕೈಬಿಡಬೇಕು. ಇಸ್ಕಾನ ದಂತಹ ಧಾರ್ಮಿಕ ಸಂಸ್ಥೆಗೆ ಕೆಲ ಜಿಲ್ಲೆಗಳನ್ನು ನೀಡಿರುವುದರಿಂದ ಸುಮಾರು 15 ಸಾವಿರಕ್ಕೂ ಹೆಚ್ಚಿನ ಮಹಿಳೆಯರು ತಮ್ಮ ಕೆಲಸ ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಮಕ್ಕಳಿಗೆ ಊಟ ನೀಡುವ ನೆಪವೊಡ್ಡಿ ಸರ್ಕಾರದ ಅನುದಾನ ಬಳಸಿಕೊಂಡು ಮಕ್ಕಳ ಮನಸ್ಸಿಗೆ ಧರ್ಮ-ಜಾತಿಯ ವಿಷಬೀಜ ಬಿತ್ತಿ ಆರೋಗ್ಯ ಪೂರ್ಣ ಊಟ ನೀಡುವುದರ ಬದಲಿಗೆ, ಆರೋಗ್ಯವೃದ್ಧಿಸುವ ಬೆಳ್ಳುಳ್ಳಿ- ಈರುಳ್ಳಿ ರಹಿತ ಊಟ ನೀಡಿ ಮಕ್ಕಳ ಆರೋಗ್ಯ ಕಡೆಗಣಿಸುತ್ತಿದೆ. ಈ ಎಲ್ಲಾ ಮಾಹಿತಿಗಳು ಸರ್ಕಾರಕ್ಕೆ ಗೊತ್ತಿದ್ದರೂ ಕೇಂದ್ರದಲ್ಲಿ ಮಾನವ ಸಂಪನ್ಮೂಲ ಇಲಾಖೆ ಈ ವರ್ಷವೂ ಕೇಂದ್ರೀಕೃತ ಅಡುಗೆ ಕೇಂದ್ರಗಳನ್ನು ಮಾಡಲು ಪ್ರಯತ್ನ ನಡೆಸಿದೆ, ಎಂದು ಭಾಷಣಕಾರರು ಟೀಕಿಸಿದ್ದಾರೆ.

ಭಾರತೀಯ 45ನೇ ಕಾರ್ಮಿಕ ಸಮ್ಮೇಳನದ ಘೋಷಣೆಯಂತೆ ನೌಕರರನ್ನು ಕಾರ್ಮಿಕರು ಎಂದು ಪರಿಗಣಿಸಿ ಕನಿಷ್ಠಕೂಲಿ ವ್ಯಾಪ್ತಿಗೆ ತರಬೇಕು. 2015-16 ರಲ್ಲಿ ಕೇಂದ್ರ ಸರ್ಕಾರ ಅನುದಾನ ಕಡಿತ ಮಾಡಿದ್ದು, ಈ ಯೋಜನೆಯಡಿಯಲ್ಲಿ ಕೆಲಸಮಾಡುತ್ತಿರುವ ತಾಯಂದಿರಿಗೆ ಕೇವಲ 1900 ರೂ. ಕೊಡಲಾಗುತ್ತಿದ್ದು, ಅದರಲ್ಲಿ ಕೇಂದ್ರ ಸರ್ಕಾರ ಕೇವಲ 600 ರೂ ನೀಡುತ್ತಿದ್ದು ಉಳಿದ ಹಣ ರಾಜ್ಯ ಸರ್ಕಾರ ನೀಡುತ್ತಿದೆ. ಕೇಂದ್ರ ಸರ್ಕಾರ 2009ರ ನಂತರ ಇದುವರೆಗೂ 1 ರೂಪಾಯಿ ಹೆಚ್ಚಳ ಮಾಡದೆ ಜೀತದಂತೆ ದುಡಿಸಿಕೊಳ್ಳುತ್ತಿದೆ. ಈ ಯೋಜನೆಯಡಿಯಲ್ಲಿ ಕೆಲಸ ಮಾಡುತ್ತಿರುವ ಸಾವಿರಾರು ಬಡ ಮಹಿಳೆಯರು ಇಂದು ನಿವೃತ್ತಿ ಅಂಚಿಗೆ ಬಂದಿರುತ್ತಾರೆ. ಸರ್ಕಾರದಿಂದ ಬರುತ್ತಿರುವ ಅನುದಾನದಲ್ಲಿ ಹಣ ಉಳಿಯುತ್ತಿದೆ. ಈ ಹಣದಲ್ಲಿ ಈ ಅಡುಗೆ ನೌಕರರಿಗೆ ಸಾಮಾಜಿಕ ಭದ್ರತೆಯ ಭಾಗವಾಗಿ ಪೆನ್ಸನ್ ನೀಡಲು ಸಾಧ್ಯತೆ ಇದ್ದು ಈ ಹಣವನ್ನು ಇದಕ್ಕಾಗಿ ಬಳಸಬೇಕು ಮತ್ತು ಹೆಚ್ಚಿನ ಅನುದಾನ ನೀಡಬೇಕು. ರಾಜ್ಯ ಸರ್ಕಾರಕ್ಕೆ ಶಿಕ್ಷಣ ಇಲಾಖೆಯಿಂದ ಆಗಿರುವ 4000/- ರೂ. ಹೆಚ್ಚುವರಿ ವೇತನದ ಶಿಫಾರಸ್ಸಿನಂತೆ ಬಿಡುಗಡೆ ಮಾಡಬೇಕು. ಅನುದಾನದಲ್ಲಿ ಉಳಿದಿರುವ ಹಣದಲ್ಲಿ ಸಾಮಾಜೀಕ ಭದ್ರತೆಯ ಭಾಗವಾಗಿ ಪೆನ್ಸನ್ ನೀಡಲು ಸರ್ಕಾರ ಮುಂದಾಗಬೇಕು, ಬಿಸಿಯೂಟ ನೌಕರರನ್ನು "ಡಿ"ಗೂಪ್ ನೌಕಕರೆಂದು ಪರಿಗಣಿಸಬೇಕು ಮತ್ತು ನೇಮಕಾತಿ ಪತ್ರ ನೀಡಬೇಕು, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು, ನೌಕರರನ್ನು ಹಾಜರಾತಿ ನೆಪವೊಡ್ಡಿ ಕೆಲಸದಿಂದ ಕೈ ಬಿಡಬಾರದು, ಬಿಸಿಯೂಟ ನೌಕರರನ್ನು ಶಾಲಾ ಸಿಬ್ಬಂದಿಯೆಂದು ಪರಿಗಣಿಸಬೇಕು, ಎಂದು ಒತ್ತಾಯಿಸಿದರು.

JANASHAKTHI KANNADA VARA PATRIKE May 29-Jun 4, 2017 Price : Rs. 10/- Date of Publication : 26 May 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಆನೇಕಲ್

ಸಿಪಿಐ(ಎಂ) ಮೇ 18–25ವರೆಗೆ ಕೇಂದ್ರ ಸರಕಾರದ ಜನ–ವಿರೋಧಿ ನೀತಿಗಳ ವಿರುದ್ಧ ಪ್ರಚಾರಾಂದೋಲನ ಮತ್ತು ಮೇ 25 ರಂದು ರಾಜ್ಯವ್ಯಾಪಿ ಪ್ರತಿಭಟನೆಗೆ ಕರೆ ನೀಡಿದ್ದು ಹಲವು ಕಡೆಗಳಿಂದ ಮೇ 25 ರ ಪ್ರತಿಭಟನೆ ನಡೆಸಿದ ವರದಿಗಳು ಬಂದಿವೆ.


ದೊಡ್ಡಬಳ್ಳಾಪುರ


ಉಡುಪಿ


ಹುಬ್ಬಳ್ಳಿ


ಕೋಲಾರ


ಬೆಂಗಳೂರು


ಉತ್ತರ ಕನ್ನಡ


ತುಮಕೂರು

ಜಿಲ್ಲಾ ಪಂಚಾಯತ್ ಎದುರು ರಾಜ್ಯಾದ್ಯಂತ ಪ್ರತಿಭಟನೆ ರೂ. 4000ಕ್ಕೆ ವೇತನ ಹೆಚ್ಚಿಸಿ : ಬಿಸಿಯೂಟ ಕಾರ್ಮಿಕರು


ಚಿಕ್ಕಬಳ್ಳಾಪುರ


ಮಂಗಳೂರು

ಬಿಸಿಯೂಟ ಯೋಜನೆಯಲ್ಲಿ ಅನುದಾನ ಕಡಿತ, ಖಾಸಗೀಕರಣಗಳನ್ನು ವಿರೋಧಿಸಿ; ರಾಜ್ಯ ಸರ್ಕಾರಕ್ಕೆ ಶಿಕ್ಷಣ ಇಲಾಖೆಯಿಂದ ಶಿಫಾರಸ್ಸು ಆಗಿರುವ 4000/– ರೂ.ಗೆ ಏರಿಕೆ ಮತ್ತು 45ನೇ ಭಾರತ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸುಗಳನ್ನು ಕೂಡಲೇ ಜಾರಿ ಮಾಡಲು ಒತ್ತಾಯಿಸಿ ಬಿಸಿಯೂಟ ಕಾರ್ಮಿಕರು ಮೇ 25ರಂದು ಜಿಲ್ಲಾ ಪಂಚಾಯತ್ ಎದುರು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿದರು. ಉತ್ತರ ಕನ್ನಡ, ತುಮಕೂರು, ಮಂಗಳೂರು, ಚಿಕ್ಕಬಳ್ಳಾಪುರ, ಬಳ್ಳಾರಿ ಜಿಲ್ಲೆಗಳಿಂದ ಪ್ರತಿಭಟನೆ ನಡೆದ

ಪುಟ 15 ಕ್ಕೆ


ಹಾಸನ


ಉತ್ತರ ಕನ್ನಡ

ಹೆಚ್.ಆರ್. ನವೀನ್‌ಕುಮಾರ್



JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**